ಅಧ್ಯಕ್ಷರು.— ಈಗ ಇದಕ್ಕೆ ಸಂಬಂಧಪಟ್ಟ ಮಂತ್ರಿಗಳೂ ಯಾರೂ ಇಲ್ಲ, ಆದುದರಿಂದ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ. ಎಸ್. ಕೃಷ್ಣನ್.— ಅಧ್ಯಕ್ಷರೇ ನಾನು ಲೇಬರ್ ವಿಷಯಕ್ಕೆ ಸಂಬಂಧಪಟ್ಟಂತೆ ಒಂದು ಠರಾವನ್ನು ಕಳುಹಿಸಿಕೊಟ್ಟಿದ್ದೇನೆ.

ಅಧ್ಯಕ್ಷರು.— ತಾವು ಸಹ ಹೀಗೆ ಮಾಡುತ್ತೀರಲ್ಲಾ ನನಗೂ ಗೊತ್ತು. ನಾನು ಎಷ್ಟೊ ಸಲ ಹೇಳಿದ್ದೇನೆ ನಾನು ಬಹಳ ಮುಂಚೆನೇ ನನ್ನ ಛೇಂಬರ್‌ಗೆ ಬಂದಿರುತ್ತೇನೆ ತಾವು ನನ್ನನ್ನು ಭೇಟಿ ಮಾಡಿ ಇದನ್ನು ಹೇಳಬಹುದಾಗಿತ್ತಲ್ಲಾ.

ಶ್ರೀ ಎಂ ಎಸ್ ಕೃಷ್ಣನ್.— ಈ ಬಗ್ಗೆ ನಿನ್ನೆ ದಿವಸ ಚರ್ಚೆ ಆಯಿತು, ಮೊನ್ನೆ ದಿವಸ ಚರ್ಚೆ ಆಯಿತು. ಮುಖ್ಯಮಂತ್ರಿಗಳು ಬರಬೇಕು ಎಂದು ಹೇಳಿದಿರಿ.

ಅಧ್ಯಕ್ಷರು.— ತಾವು ನಿನ್ನೆ ದಿವಸ ಕೊಟ್ಟಿದ್ದೀರಿ. ಅದಕ್ಕೆ ಸರ್ಕಾರದಿಂದ ಉತ್ತರ ಬಂದ ಮೇಲೆ ತಾನೇ ಅಜೆಂಡಾದಲ್ಲಿ ಹಾಕಬೇಕಾದ್ದು.

ಶ್ರೀ ಕಾಗೋಡು ತಿಮ್ಮಪ್ಪ.— ಈಗ ಮುಖ್ಯಮಂತ್ರಿಗಳು ಬಂದಿಲ್ಲಾ. ಈ ಬಗ್ಗೆ ತಾವೇ ಅನುಮತಿ ಕೊಟ್ಟು ಒಂದು ದಿನವನ್ನು ನಿಗದಿ ಮಾಡಿಬಿಡಿ.

ಅಧ್ಯಕ್ಷರು.— ಮುಖ್ಯಮಂತ್ರಿಗಳು ಬರಲಿ. ಅನಂತರ ಕಾಲವನ್ನು ನಿಗದಿ ಮಾಡೋಣ. ನೀವು ಕಳುಹಿಸಿಕೊಟ್ಟಿರುವ ಠರಾವನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇನೆ.

ಶ್ರೀ ಎಂ ಎಸ್. ಕೃಷ್ಣನ್.— ಈವೊತ್ತು ಅವರು ಬರುವುದಿಲ್ಲಾ, ನಾಳೆಯೂ ಅವರು ಬರುವುದಿಲ್ಲ. ಶ್ರೀ ಸಿ. ಎನ್. ಪಾಟೀಲರು ಪತ್ತೆಯೇ ಇಲ್ಲ. ಹಾಗಾದರೆ ನಾವು ಅವರನ್ನು ಯಾವತ್ತು ಕೇಳುವುದಕ್ಕಾಗುತ್ತದೆ ಅಥವಾ ಕೇಳುವುದಕ್ಕಾಗುವುದಿಲ್ಲವೇ ಹೇಳಲಿ.

ಅಧ್ಯಕ್ಷರು.— ಮುಖ್ಯಮಂತ್ರಿಗಳು 3 ಗಂಟೆಗೆ ಬರುತ್ತಾರಂತೆ, ಆಮೇಲೆ ನೋಡೋಣ.

ಶ್ರೀ ಎಂ. ಎಸ್ ಕೃಷ್ಣನ್.— ಒಂದುವೇಳೆ ಅವರು ಈವೊತ್ತು ಬಂದೇ ಹೋದರೆ ನಾಳೆ ಯಾದರೂ ಕೂಡ ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ನನ್ನ ಪ್ರಾರ್ಥನೆ.

Budget Estimates for 1977-78

Demands for Grants Demand No.s 21, 26, 27 and 32

(Debate Continued)

† ಶ್ರೀ ಆರ್. ಗುಂಡೂರಾವ್ (ಯುವಜನ ಹಾಗೂ ವಸತಿ ಶಾಖೆಗಳ ಮಂತ್ರಿಗಳು).— ಸನ್ಮಾನ್ಯ ಅಧ್ಯಕ್ಷರೇ. ನಿನ್ನೆ ದಿವಸ ನನ್ನ ಇಲಾಖೆಗೆ ಸೇರಿದಂಥಾ ಯುವಜನ ಹಾಗೂ ವಸತಿ ಇಲಾಖೆ ಬಗ್ಗೆ ಮಾನ್ಯ ಸದಸ್ಯರುಗಳು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಮತ್ತು ಈ ಬಗ್ಗೆ ಅವರುಗಳು ಯಾವುದೇ ತರಹ ಟೀಕೆಗಳನ್ನು ಮಾಡಲಿಲ್ಲಾ. ಬಹಳ ಸಂತೋಷ ಅದಕ್ಕೋಸ್ಕರ ನಾನು ಎಲ್ಲಾ ಸದಸ್ಯರಿಗೂ ಕೂಡ ನನ್ನ ಧನ್ಯವಾದಗಳನ್ನರ್ಪಿಸುತ್ತೇನೆ, ಅಧ್ಯಕ್ಷರೇ, ನಾನು ಕೆಲವು ಸಾರಿ ಹೇಳಿದ್ದೇನೆ. ಈ ಯುವಜನ ಇಲಾಖೆ ಇತರೇ ಎಲ್ಲಾ ಇಲಾಖೆಗಳಿಗಿಂತಲೂ ಬಹು ಮುಖ್ಯವಾದಂಥಾ ಇಲಾಖೆ ಎಂದು ಆದರೂ ಸಹ ನಾನು ಮೊದಲು ಏನು ಯೋಚನೆ ಮಾಡಿದ್ದೆ ಎಂದರೆ ನಮ್ಮ ಸದಸ್ಯರು ಈ ಬಗ್ಗೆ ಇನ್ನೂ ಅನೇಕ ತರಹವಾದ ಸಲಹೆಗಳನ್ನು ಈ ಸದನದಲ್ಲಿ ಕೊಡುತ್ತಾರೆ ಅಂತ. ಏತಕ್ಕೆಂದರೆ ಈ ದೇಶದ ಭವಿಷ್ಯ ಮತ್ತು ಈ ದೇಶದ ಶಿಸ್ತು ಮತ್ತು ಈ ದೇಶದ ಭದ್ರತೆ ಇವೆಲ್ಲಾ ನಮ್ಮ ಯುವಜನರ ಮೇಲೆ ಹೊಂದಿಕೊಂಡಿದೆ. ಆದರೆ ಅನೇಕ ಮಾನ್ಯ ಸದಸ್ಯರು ಬೇರೆ ಬೇರೆ ಇಲಾಖೆ ಬಗ್ಗೆ ಸಲಹೆಗಳನ್ನು ಕೊಟ್ಟರು. ನನಗೆ ಒಂದು ತರಹ ಸಂತೋಷವಾಗಿದೆ. ಏತಕ್ಕೆಂದರೆ ಕಳೆದ ವರ್ಷಗಳಿಂದಲೂ ಕೂಡ ಯಾವುದೇ ಒಂದು ಟೀಕೆಗೆ ಒಳಗಾಗದೆ ಈ ಇಲಾಖೆ ಕೆಲಸ ಮಾಡುತ್ತಾ ಇದೆ. ನಾನು ಈ ಬಗ್ಗೆ ಹೆಮ್ಮೆಯಿಂದ ಹೇಳಬೇಕಾದರೆ ಒಂದಾನೊಂದು ಕಾಲದಲ್ಲಿ ಕರ್ನಾಟಕ ಯಾವ ಒಂದು ಕ್ರೀಡೆಯಲ್ಲಾಗಲಿ ಅಥವಾ ಇನ್ನೂ ಇತರ ಕಾರ್ಯಚಟುವಟಿಕೆಗಳಲ್ಲಾಗಲಿ ರಾಷ್ಟ್ರದಲ್ಲಿರುವ ಅನೇಕ ರಾಜ್ಯಗಳಿಗೆ ಬಹಳ ಹಿಂದುಳಿದಿದ್ದಂಥಾ ಕರ್ನಾಟಕ ಈವೊತ್ತು ಇಡೀ ಭಾರತದಲ್ಲಿ

ನಮ್ಮ ಕರ್ನಾಟಕ ದ್ವಿತೀಯ ಸ್ಥಾನವನ್ನು ಪಡೆದಿದೆ ಮತ್ತು ಅನೇಕ ಯೋಜನೆಗಳಲ್ಲಿ ಪ್ರಥಮ ಸ್ಥಾನವನ್ನೂ ಸಹ ಪಡೆದಿದೆ. ಉದಾಹರಣೆಗೆ ಹೇಳಬೇಕಾದರೆ ಉತ್ತಮವಾದಂಥಾ ಕ್ರೀಡಾಪಟುಗಳಿಗೆ ಅವರ ಒಂದು ಯೋಗ್ಯತೆಯನ್ನು ಸರ್ಕಾರ ಗಮನಿಸಿ ಅವರಿಗೆ ಸಾಕಷ್ಟು ಸಹಾಯ ಧನವನ್ನು ಕೊಡುವಂಥಾದ್ದು ಮತ್ತು ಆ ಸಂಸ್ಥೆಗೆ ಸಾಕಷ್ಟು ಸಹಾಯ ಧನವನ್ನು ಕೊಡುವಂಥಾದ್ದು ಈ ರೀತಿಯಲ್ಲಿ ನಾವು ಈ ಕ್ರೀಡೆಗೆ ಹೆಚ್ಚಿನ ಸಹಾಯವನ್ನು ಉತ್ಸಾಹವನ್ನೂ ಪ್ರೋತ್ಸಾಹವನ್ನೂ ಸರ್ಕಾರ ಕೊಡುತ್ತಾ ಬಂದಿದೆ. ತಮಗೆ ಇನ್ನೂ ಹೇಳಬೇಕಾದರೆ ಬೆಂಗಳೂರಿನಲ್ಲಿ ಈವೊತ್ತು ಒಳ್ಳೆಯ ಉತ್ತಮವಾದಂಥಾ ಒಂದು ಕ್ರಿಕೆಟ್ ಸ್ಟೇಡಿಯಂ ಫುಟ್‌ಬಾಲ್ ಸ್ಟೇಡಿಯಂ ಟೆನ್ನೀಸ್ ಸ್ಟೇಡಿಯಂ ಅನ್ನು ಕಟ್ಟಿದ್ದೇವೆ. ನಿಮಗೆ ಹೇಳಬೇಕಾದರೆ ಬಹುಶ: ಇಲ್ಲಿರುವ ಟೆನ್ನೀಸ್ ಸ್ಟೇಡಿಯಂ ಏನು ಇದೆ, ಇಷ್ಟು ಉತ್ತಮವಾದಂಥಾ ಸ್ಟೇಡಿಯಂ ಭಾರತದಲ್ಲಿ ಎಲ್ಲೂ ಇಲ್ಲ ಎಂದು ಹೇಳುತ್ತೇನೆ. ಸರ್ಕಾರ ಪ್ರಥಮವಾಗಿ ಇಂಥಾ ಒಂದು ಸ್ಟೇಡಿಯಂ ಅನ್ನು ಬೆಂಗಳೂರಿನಲ್ಲಿ ಕಟ್ಟಿದೆ. ಕ್ರಿಕೆಟ್ ಸ್ಟೇಡಿಯಂ ಬಗ್ಗೆ ಹೇಳುವುದಾದರೆ ಈಗಾಗಲೇ ಆ ಸ್ಟೇಡಿಯಂ ಕೆಲಸ ಪೂರ್ಣಯಾಗುವ ಸನ್ನಿವೇಶ ಇದೆ. ಹಾಗೆಯೇ ಫುಟ್‌ಬಾಲ್ ಸ್ಟೇಡಿಯಂ ಅದರ ಕೆಲಸ ಮುಗಿಯುವ ಹಂತದಲ್ಲಿ ಇದೆ. ಇದರ ಜೊತೆಗೆ ಜಿಲ್ಲಾ ಮಟ್ಟದಲ್ಲಿ ಸುಮಾರು 7-8 ಜಿಲ್ಲೆಗಳಲ್ಲಿ ನಮ್ಮ ಸ್ಟೇಡಿಯಂ ಕಾರ್ಯ ಚೆನ್ನಾಗಿ ನಡೆಯುತ್ತಾ ಇದೆ. ಈ ಬಗ್ಗೆ ನಾನು ಹೇಳುವುದು ಏನೆಂದರೆ ಯಾವ ಯಾವ ಜಿಲ್ಲೆಗಳಲ್ಲಿ ಸಾರ್ವಜನಿಕರು ಆಗಲಿ ಅಥವಾ ಇನ್ನು ಇತರ ಸ್ಥಳೀಯ ಸಂಸ್ಥೆಗಳಾಗಲಿ ಮುಂದೆ ಬಂದವರಿಗೆ ಹೆಚ್ಚಿನ ಹಣ ಸಹಾಯವನ್ನು ಒದಗಿಸಿದರೆ ಅಂದರೆ ಅವರು 50 ಪರ್ಸೆಂಟ್ ಹಣ ಸಹಾಯವನ್ನು ಕೊಡಲು ಮುಂದೆ ಬಂದಂಥಾವರಿಗೆ ಇನ್ನು ಉಳಿದ 50 ಪರ್ಸೆಂಟ್ ಹಣವನ್ನು ಸರ್ಕಾರ ಸಹಾಯ ಮಾಡಿ ಆ ಸ್ಟೇಡಿಯಂಗಳನ್ನು ಪೂರ್ತಿ ಮಾಡುತ್ತಾ ಇದ್ದೇವೆ. ಇದರ ಜೊತೆಗೆ ಈ ಇಲಾಖೆಗೆ ಕೇವಲ ಒಬ್ಬ ಡೈರೆಕ್ಟರ್ ಮೊದಲು ಇದ್ದರು. ಅನಂತರ ಈಗ ಡೆಪ್ಯೂಟೀ ಡೈರೆಕ್ಟರ್ಸ್ ಮತ್ತು ಡಿಸ್ಟ್ರಿಕ್ಟ್ ಲೆವಲ್‌ನಲ್ಲೂ ಸಹ ಅಧಿಕಾರಿಗಳು ಇದ್ದಾರೆ. ಇತ್ತೀಚೆಗೆ ತಾಲ್ಲೂಕ್ ಲೆವಲ್ ನಲ್ಲೂ ಸಹ ಅಧಿಕಾರಿಗಳನ್ನು ನೇಮಕ ಮಾಡಿ ನಮ್ಮ ಕಾರ್ಯಕ್ರಮವನ್ನು ಆ ಪ್ರದೇಶದಲ್ಲಿರತಕ್ಕಂಥಾ ಯುವಜನರ ಕಾರ್ಯಚಟುವಟಿಕೆ ಮತ್ತು ಆಟಗಳು ಮತ್ತು ಇನ್ನು ಇತರ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಬೆಂಬಲ ಕೊಡಬೇಕು ಅನ್ನುವ ಉದ್ದೇಶ ಇಟ್ಟುಕೊಂಡಿದ್ದೇವೆ. ಈ ಬಗ್ಗೆ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ.

ಸುಮಾರು 7 ಸಾವಿರ ಕ್ಲಬ್ಸ್ ಗ್ರಾಮಾಂತರ ಪ್ರದೇಶಗಳಲ್ಲಿವೆ. ಅಲ್ಲಿ ಅನೇಕ ಚಟುವಟಿಕೆಗಳು ನಡೆಯುತ್ತಿವೆ ಕಟ್ಟಡಗಳನ್ನು ಕಟ್ಟಿಸಲು ಸರ್ಕಾರ ಅವರಿಗೆ ಸಹಾಯ ಮಾಡುತ್ತಿದೆ. ಮತ್ತು ಅವರು ನಡೆಸುವಂತಹ ಪಂದ್ಯದಾಟಗಳಿಗೆ ಸಹಾಯ ಮಾಡುತ್ತಿದ್ದೇವೆ. ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಇದಕ್ಕೆ ಹೆಚ್ಚಿನ ಉತ್ತೇಜನ ಕೊಡಬೇಕೆಂದು ನೆನ್ನೆ ದಿವಸ ಕೆಲವು ಮಾನ್ಯ ಸದಸ್ಯರು ತಮ್ಮ ಭಾಷಣದಲ್ಲಿ ಹೇಳಿದರು. ಆದರೆ ಇದಕ್ಕೆ ಅನೇಕ ತೊಂದರೆಗಳಿವೆ ಗ್ರಾಮ ಮಟ್ಟದಲ್ಲಿ ಸರಿಯಾದಂಥ ಸ್ಥಳಗಳು ಸಿಕ್ಕುವುದಿಲ್ಲ. ಮತ್ತು ಜನರು ಆರ್ಥಿಕವಾಗಿ ಹಿಂದುಳಿದಿರುತ್ತಾರೆ. ಜೊತೆಗೆ ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಅವರು ಕೆಲಸ ಮಾಡುವುದರಿಂದ ಈ ಕ್ರೀಡೆಗಳಲ್ಲಿ ಭಾಗವಹಿಸುವುದಕ್ಕೆ ಅವರಿಗೆ ಸಮಯವಿರುವುದಿಲ್ಲ. ಈ ಕೆಲವು ಕಾರಣಗಳಿಂದ ನಮ್ಮ ಈ ಒಂದು ಕಾರ್ಯನೀತಿ ನಿಧಾನವಾಗುತ್ತಿದೆ. ಮುಖ್ಯವಾಗಿ ಈ ಒಂದು ಕಾರ್ಯ ನಮ್ಮ ದೇಶದಲ್ಲಿ ಹಾಗೂ ನಮ್ಮ ರಾಜ್ಯದಲ್ಲಿ ಇನೂ ಚೆನ್ನಾಗಿ ಆಗಬೇಕಾದರೆ ಸ್ಥಳೀಯ ಜನರು ಹಾಗೂ ನಮ್ಮ ಸ್ಥಳೀಯ ಸದಸ್ಯರು ಇದಕ್ಕೆ ಹೆಚ್ಚಿನ ಬೆಂಬಲ ಕೊಡಬೇಕು ಆಗ ಸರ್ಕಾರವೂ ಸಹ ಸಹಾಯ ಮಾಡಲು ಮುಂದೆ ಬರುತ್ತದೆ. ಮಾನ್ಯ ಲಿಂಗಪ್ಪನವರು ನೆನ್ನೆ ದಿವಸ ಮಾತನಾಡುವಾಗ ಎಲ್ಲ ಆಟಗಳನ್ನು ಬೆಂಗಳೂರಿನಲ್ಲಿಯೇ ಏತಕ್ಕೆ ನಡೆಸುತ್ತೀರಿ ಎಂದು ಕೇಳಿದರು ಈಗ ಕ್ರಿಕೇಟ್ ಆಟವನ್ನು ಬೆಂಗಳೂರಿನಲ್ಲಿ ಬಿಟ್ಟು ತೀರ್ಥಹಳ್ಳಿಯಲ್ಲಿ ನಡೆಸುವುದಕ್ಕಾಗುವುದಿಲ್ಲ. ಏಕೆಂದರೆ ದೇಶದ ಎಲ್ಲ ಜನರೂ ಅಲ್ಲಿಗೆ ಬಂದು ನೋಡುವುದಕ್ಕಾಗುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.— ಕ್ರಿಕೇಟ್ ಆಟ ನಮ್ಮ ದೇಶಕ್ಕೆ ಹೊಂದಿಕೊಳ್ಳುವುದಿಲ್ಲ ಎಂದು ನಾನು ಹೇಳಿದ್ದು.

ಶ್ರೀ ಆರ್. ಗುಂಡೂರಾವ್.—ಕೇಂದ್ರದಲ್ಲಿ ನಿಮ್ಮವರೇ ಆದ ಪಿ.ಸಿ. ಚಂದರ್ ಅವರು ವಿದ್ಯಾ ಮಂತ್ರಿಗಳಾಗಿದ್ದಾರೆ. ಕ್ರಿಕೇಟ್ ಆಟ ಬೇಡ ಎಂದು ಅವರಿಗೆ ನೀವು ಹೇಳಿ. ಭಾರತದೇಶದಲ್ಲಿ ಈ ಆಟವನ್ನು ಆಡುವುದು ಬೇಡವೆಂದರೆ ನಮಗೂ ಸಂತೋಷ. ಅದರಲ್ಲಿ ನಮಗೇನೂ ಬೇಜಾರಿಲ್ಲ, ಆದರೆ ಇಂದು ಕ್ರಿಕೇಟ ಆಟವನ್ನು ನೋಡಲು ದೇಶದ ಜನರು ಅಪೇಕ್ಷೆ ಪಡುತ್ತಾರೆ. ಮಾನ್ಯ ಲಿಂಗಪ್ಪನವರಂತಹ ನಾಯಕರು ತೀರ್ಥಹಳ್ಳಿಗೆ ಬರುತ್ತಾರೆಂದರೆ ಎಷ್ಟು ಜನರು ಸೇರುತ್ತಾರೋ ಅದಕ್ಕಿಂತ ಹೆಚ್ಚು ಜನರು ಕ್ರಿಕೇಟ್ ಆಟಗಾರರು ಏನಾದರು ಅಲ್ಲಿಗೆ ಬಂದರೆ ಸೇರಿರುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ — ರಾಜಕುಮಾರ್ ಬಂದರೂ ಸೇರುತ್ತಾರೆ.

ಶ್ರೀ ಆರ್. ಗುಂಡೂರಾವ್.— ಇಂದು ಕಾಲೇಜು ಮಟ್ಟದಲ್ಲಿ ಹಾಗೂ ಗ್ರಾಮಾಂತರ ಮಟ್ಟದಲ್ಲಿ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಕ್ರಿಕೇಟ್ ಆಟ ಆಡುತ್ತಿರುವುದನ್ನು ತಾವು ನೋಡಿರಬಹುದು ನಮ್ಮ ಮಲೆನಾಡು ಹಾಗೂ ಇನ್ನಿತರ ಕಡೆಗಳಲ್ಲಿ ಸರಿಯಾದಂಥ ಸ್ಥಳಾವಕಾಶವಿಲದಿದ್ದರೂ ಸಹ ಇರುವಂತಹ ಸ್ಥಳದಲ್ಲಿಯೇ ಈ ಆಟದ ಅಭ್ಯಾಸವನ್ನು ಮಾಡುತ್ತಿದ್ದಾರೆ. ಇದರಿಂದ ಅವರಿಗೆ ಒಂದು ರೀತಿಯ ಉತ್ಸಾಹ ಬರುತ್ತದೆ.

ಇನ್ನು ಮಾನ್ಯ ನಾಯ್ಡು ಅವರು ಹಾಕಿ ಆಟದ ಬಗ್ಗೆ ಹೇಳಿದ್ದಾರೆ. ಹಾಕಿ ಆಟವಾಡಲು ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ಮಟ್ಟದ ಒಂದು ಸ್ಟೇಡಿಯಂನ್ನು ಕಟ್ಟಿಸಬೇಕೆಂದು ಅವರು ಹೇಳಿದರು ಈ ಬಗ್ಗೆ ಅವರು ಒಂದು ಪ್ರಶ್ನೆಯನ್ನು ಸಹ ಕಳುಹಿಸಿದ್ದಾರೆ. ಕ್ರಿಕೇಟ್, ಟೆನ್ನೀಸ್ ಫುಟ್‌ಬಾಲ್, ಇವುಗಳಿಗೆಲ್ಲಾ ಸ್ಟೇಡಿಯಂ ಕಟ್ಟಿಸಿದ್ದೀರಿ, ಅದರಂತೆ ಹಾಕಿಗೂ ಕಟ್ಟಿಸಿ ಎಂದು ಹೇಳಿದರು.

ಶ್ರೀ ಕೆ ಆರ್. ಶ್ರೀನಿವಾಸಲು ನಾಯ್ಡು.— ನನಗೆ ಈ ಬಗ್ಗೆ ಕ್ಲಿಯರ್‌ಕಟ್ ಆದಂಥ ಆಶ್ವಾಸನೆ ಬೇಕು,

ಶ್ರೀ ಆರ್. ಗುಂಡೂರಾವ್.— ನಾನು ತಮಗೆ ಇಲ್ಲ ಎಂದು ಹೇಳಲಿಲ್ಲ. ನಿಮಗೆ ಈ ಬಗ್ಗೆ ಎಷ್ಟು ಉತ್ಸಾಹವಿದೆಯೋ ಅದಕ್ಕಿಂತ ಹೆಚ್ಚಿನ ಉತ್ಸಾಹ ನನಗಿದೆ, ಏಕೆಂದರೆ ನಾನು ಆಟಗಾರರ ಜಿಲ್ಲೆಯಿಂದ ಬಂದಿರುವವನು. ಆದ್ದರಿಂದ ಹಾಕಿ ಸ್ಟೇಡಿಯಂನ್ನು ಸಹ ಕಟ್ಟಿಸುತ್ತೇವೆ. ಆದಕಾರಣ ತಾವೇನೂ ಯೋಚನೆ ಮಾಡಬೇಕಾಗಿಲ್ಲ. ಇಂತಹ ಪಂದ್ಯಾಟಗಳನ್ನು ಮೈಸೂರಿನಲ್ಲಿಯಾಗಲೀ ಮಡಕೇರಿಯಲ್ಲಿಯಾಗಲೀ ಬೆಳಗಾಂವಲ್ಲಿಯಾಗಲೀ ನಡೆಸುವುದಕ್ಕೆ ಸಾಧ್ಯವಿಲ್ಲ. ರಾಷ್ಟ್ರ ಮಟ್ಟದಲ್ಲಿ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಕ್ರೀಡಾಸ್ಪರ್ಧೆಗಳನ್ನು ನಡೆಸಲು ಬೆಂಗಳೂರಿನಲ್ಲಿ ಹೆಚ್ಚಿನ ಅನುಕೂಲಗಳಿವೆ ಆದಕಾರಣ ಹೆಚ್ಚಿನ ಜನರು ಬಂದು ನೋಡುತ್ತಾರೆ, ಮತ್ತು ಆಟವನ್ನು ನೋಡಲು ಬರತಕ್ಕಂಥ ಸಾವಿರಾರು ಜನರು ಇಳಿದು ಕೊಳ್ಳಲು ಅನುಕೂಲ ಕಲ್ಪಿಸಿಕೊಡಬೇಕಾದರೆ ಬೆಂಗಳೂರಿನಲ್ಲಿ ಮಾತ್ರ ಸಾಧ್ಯ, ಮತ್ತು ಇದಕ್ಕೆಲ್ಲಾ ಅನುಕೂಲಗಳನ್ನು ಸಂಬಂಧಪಟ್ಟ ಸಂಸ್ಥೆಯವರು ಮಾಡುತ್ತಾರೆ. ಜೊತೆಗೆ ನಾವು ಈಗಾಗಲೇ ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕ್ ಮಟ್ಟದಲ್ಲಿ ಅನೇಕ ಪಂದ್ಯಾಟಗಳನ್ನು ನಡೆಸಿದ್ದೇವೆ. ಮೈಸೂರು ಜಿಲ್ಲೆಯಲ್ಲಿ ಹಾಗೂ ಕೋಲಾರ ಜಿಲ್ಲೆಯಲ್ಲಿ ಮಂಗಳೂರು ಜಿಲ್ಲೆಯಲ್ಲಿ ಕುಸ್ತಿ ಪಂದ್ಯಗಳುವನ್ನು ಮಂಡ್ಯ ಜಿಲ್ಲೆಯಲ್ಲಿ ಕಬಡಿ ಪಂದ್ಯವನ್ನು, ಶಿವಮೊಗ್ಗ ಜಿಲ್ಲೆಯಲ್ಲಿ ಕೋಕೋ ಪಂದ್ಯವನ್ನು ನಡೆಸಲಾಯಿತು. ಮತ್ತು ಗ್ರಾಮಾಂತರ ಪ್ರದೇಶಗಳ ಸ್ಪರ್ಧೆಯ ಮೂಲಕ ರಾಷ್ಟ್ರಮಟ್ಟದ ಕೊಕೋ ಸ್ಪರ್ಧೆಯಾಟವನ್ನು ಹೋಸಕೋಟೆಯಲ್ಲಿ ನಡೆಸಲಾಯಿತು. ರಣಜಿ ಟ್ರೋಫಿ ಕ್ರಿಕೆಟ್ ಆಟವನ್ನು ಶಿವಮೊಗ್ಗದಲ್ಲಿ ನಡೆಸಲಾಯಿತು: ಫುಟ್‌ಬಾಲ್ ಆಟವನ್ನು ಗುಲ್ಬರ್ಗದಲ್ಲಿ, ಟೆನ್ನಿಸ್ ಆಟವನ್ನು ಬೆಳಗಾಂನಲ್ಲಿ, ವಾಲಿಬಾಲ್ ಆಟವನ್ನು ರಾಯಚೂರಿನಲ್ಲಿ, ಹಾಕಿ ಆಟವನ್ನು ಬಿಜಾಪುರದಲ್ಲಿ ನಡೆಸಲಾಯಿತು.

ಇನ್ನು ಮಾನ್ಯ ಸತ್ಯನಾರಾಯಣಸಿಂಗ್ ಅವರು ಬಳ್ಳಾರಿಯಲ್ಲಿ ಯಾವ ಆಟವನ್ನೂ ನಡೆಸಲಿಲ್ಲವೆಂದು ಹೇಳಿದರು. ನಮ್ಮ ರಾಜ್ಯದ ಪಂದ್ಯಾಟವಾದ ಫುಟ್‌ಬಾಲ್ ಆಟವನ್ನು ಅಲ್ಲಿ ನಡೆಸಬೇಕೆಂದಿದ್ದೆವು. ಮತ್ತು ಈ ಬಗ್ಗೆ ಅಲ್ಲಿಯ ಜಿಲ್ಲಾಧಿಕಾರಿಯವರನ್ನು ಮತ್ತು ಅಲ್ಲಿಯ ಸಾರ್ವಜನಿಕರನ್ನು ಕೇಳಿದ್ದೆವು. ಆದರೆ ಯಾರೂ ಸಹ ಮುಂದೆ ಬರಲಿಲ್ಲ.

ಶ್ರೀ ಬಿ. ಸತ್ಯನಾರಾಯಣಸಿಂಗ್.— ನಾವು ಮುಂದೆ ಬರುತ್ತೇವೆ.

ಶ್ರೀ ಆರ್. ಗುಂಡೂರಾವ್.—ಹಾಗಿದ್ದರೆ ಮುಂದಿನ ರಾಜ್ಯ ಮಟ್ಟದ ಫುಟ್ ಬಾಲ್ ಆಟ ವನ್ನು ಅಲ್ಲಿಯೇ ನಡೆಸುತ್ತೇವೆ.

ಇನ್ನು ಮಾನ್ಯ ಕೊಣಂದೂರು ಲಿಂಗಪ್ಪನವರು ಗಾಲ್ಫ್ ಕ್ಲಬಿಗೆ ಒಂದು ಲಕ್ಷ ರೂ. ಗಳನ್ನು ಏತಕ್ಕೆ ಕೊಟ್ಟರಿ ಎಂದು ಕೇಳಿದರು. ಈ ಆಟವನ್ನು ದೊಡ್ಡ ದೊಡ್ಡ ಮನುಷ್ಯರೇ ಆಡುತ್ತಾರೆ, ಬೇರೆಯವರು ಆಡುವುದಿಲ್ಲವೆನ್ನುವುದು ಅವರ ಅಭಿಪ್ರಾಯ.

ಶ್ರೀ ಕಾಗೋಡು ತಿಮ್ಮಪ್ಪ.— ಅಲ್ಲಿ ಮೆಂಬರ್‌ಷಿಪ್ ಕೂಡ ಲಿಮಿಟೆಡ್.

ಶ್ರೀ ಆರ್. ಗುಂಡೂರಾವ್.— ಈ ಗಾಲ್ಫ್ ಆಟವೂ ಸಹ ಒಂದು ಅಂತರರಾಷ್ಟ್ರೀಯ ಕ್ರೀಡೆ ಯಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.— ಹಾಗಿದ್ದರೆ ಸರ್ಕಾರದವರು ಬೇಕಾದರೆ ಹಣ ಕೊಡಲಿ, ಯೂತ್ ಇಲಾಖೆ ಮೂಲಕ ಕೊಡುವುದು ಬೇಡ.

ಶ್ರೀ ಆರ್. ಗುಂಡೂರಾವ್.— ಈಗ ಕೊಡುತ್ತಿರುವುದೂ ಸಹ ಸರ್ಕಾರದ ಹಣವೇ. ಮುಖ್ಯ ವಾಗಿ ಇದು ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟ ವಿಷಯ. ಎರಡನೆಯದಾಗಿ ನಮ್ಮ ಬೆಂಗ ಳೂರು ನಗರ ಇಡೀ ರಾಜ್ಯದಲ್ಲಿಯೇ ಏತಕ್ಕೆ ರಾಷ್ಟ್ರಮಟ್ಟದಲ್ಲಿ ಹಾಗೂ ವಿಶ್ವದಲ್ಲಿಯೇ ಒಂದು ಒಳ್ಳೆಯ ನಗರವೆಂದು ಹೆಸರು ಪಡೆದಿದೆ. ಪ್ರಪಂಚದ ನಾನಾ ಕಡೆಗಳಿಂದ ಪ್ರವಾಸಿಗಳು ಇಲ್ಲಿಗೆ ಬಂದು ಹೋಗುತ್ತಿದ್ದಾರೆ. ಈ ಗಾಲ್ಫ್ ಆಟವೂ ಸಹ ಒಂದು ಅತಿ ಮುಖ್ಯವಾದಂಥ ಕ್ರೀಡೆಯಾಗಿದೆ. ಆದ ಕಾರಣ ಪ್ರವಾಸಿಗರು ಇಲ್ಲಿಗೆ ಬರುವುದಕ್ಕೆ ಮುಂಚೆ ಎಲ್ಲೆಲ್ಲಿ ಗಾಲ್ಫ್ ಕ್ಲಬ್ ಗಳಿವೆ, ಎಲ್ಲೆಲ್ಲಿ ಬೀಚ್‌ಗಳಿವೆ ಎಂಬುದನ್ನೆಲ್ಲಾ ಅಂತರರಾಷ್ಟ್ರೀಯ ಮಟ್ಟದಲ್ಲಿ ನೋಡುತ್ತಾರೆ ಈ ಅನುಕೂಲಗಳೆಲ್ಲಾ ಇದ್ದರೆ ಪ್ರವಾಸಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ಅವರುಗಳ ಬರುವುದರಿಂದ ಬೆಂಗಳೂರು ನಗರ ಕಾರ್ಪೊರೇಷನ್‌ಗೆ ಹಾಗೂ ಕರ್ನಾಟಕ ಸರ್ಕಾರಕ್ಕೆ ಬೇಕಾ ದಷ್ಟು ಉತ್ತೇಜನವೂ ಸಹ ಬರುವುದಕ್ಕೆ ಅವಕಾಶವಿದೆ. ಮಾನ್ಯ ಲಿಂಗಪ್ಪನವರು ತಮ್ಮ ಭಾಷಣ ದಲ್ಲಿ ಯಾವಾಗಲೂ ನಮ್ಮ ಕರ್ನಾಟಕ ರಾಜ್ಯದ ಕಲೆ, ಸಂಸ್ಕೃತಿ, ಮತ್ತು ಪರಂಪರೆಯ ಬಗ್ಗೆ ಹೇಳುತ್ತಿರುತ್ತಾರೆ, ಇಂತಿಂಥ ಕವಿಗಳು ಜನಿಸಿದ ನಾಡು ಎಂದು ಹೇಳುತ್ತಾರೆ. ಇವೆಲ್ಲಾ ಪ್ರಪಂಚಕ್ಕೆ ಗೊತ್ತಾಗಬೇಕಾದರೆ ಇಲ್ಲಿಗೆ ಪ್ರವಾಸಿಗಳು ಹೆಚ್ಚು ಹೆಚ್ಚಾಗಿ ಬಂದು ಹೋಗಬೇಕು. ಅವರುಗಳು ಇಲ್ಲಿಯ ಸುಂದರ ಬೆಂಗಳೂರು ನಗರದಲ್ಲಿರುವ ವಿಧಾನಸೌಧ, ಕೆಂಪೇಗೌಡ ಪ್ರತಿಮೆ, ಲಾಲ್‌ಬಾಗ್ ಮುಂತಾದ ಸ್ಥಳಗಳನ್ನು ಹಾಗೂ ಗೇರುಸೊಪ್ಪ ಜಲಪಾತದಂತಹ ಸ್ಥಳಗಳನ್ನು ನೋಡಿಕೊಂಡು ಹೋದರೆ ನಮ್ಮ ರಾಜ್ಯಕ್ಕೆ ಕೀರ್ತಿ ಹೆಚ್ಚುತ್ತದೆ.

ಶ್ರೀ ಟಿ. ಎಂ. ಮಂಜುನಾಥ್.— ಸರ್ಕಾರದವರು ಒಂದು ಲಕ್ಷ ಕೊಡುವ ಅವಶ್ಯಕತೆಯೇ ಇರಲಿಲ್ಲ ಅಲ್ಲಿರುವವರೆಲ್ಲಾ ಶ್ರೀಮಂತರೇ ಆದಕಾರಣ ಅವರೇ ಹಣ ಕೊಡುತ್ತಿದ್ದರು.

ಅಧ್ಯಕ್ಷರು — ಅದು ನಿಮ್ಮ ಅಭಿಪ್ರಾಯ. ತಾವು ಈ ರೀತಿ ಮಧ್ಯೆ ಮಧ್ಯೆ ಮಾತನಾಡಿದರೆ ಅವರು ಉತ್ತರ ಕೊಡುವುದು ಕಷ್ಟವಾಗುತ್ತದೆ. ಮಾನ್ಯ ಮಂತ್ರಿಗಳ ಉತ್ತರ ಮುಗಿದ ನಂತರ ವಿದ್ಯಾ ಇಲಾಖೆಯ ಬೇಡಿಕೆಗಳನ್ನು ಚರ್ಚೆಗೆ ತೆಗೆದುಕೊಳ್ಳಬೇಕಾಗಿದೆ.

ಶ್ರೀ ಆರ್. ಗುಂಡೂರಾವ್.— ಈ ಕ್ಲಬ್‌ಗೆ ಒಂದು ಲಕ್ಷ ಕೊಟ್ಟ ಬಗ್ಗೆ ತಾವುಗಳೇನೂ ಕಳ ವಳ ಪಡಬೇಕಾಗಿಲ್ಲ. ಅದು ಒಳ್ಳೆಯ ರೀತಿಯಿಂದ ಉಪಯೋಗವಾಗಿದೆ. ಆ ಹಣ ಸರಿಯಾಗಿ ಉಪ ಯೋಗವಾಗಿಲ್ಲವೆಂದು ತಾವು ತಿಳಿಸಿದರೆ ನಾನು ಅದರ ಬಗ್ಗೆ ವಿಚಾರ ಮಾಡಿಸುತ್ತೇನೆ. ಈ ಕ್ಲಬ್‌ಗೆ ಬೇರೆ ಕಡೆಯವರೂ ಸಹ ಸದಸ್ಯರಾಗಿರುತ್ತಾರೆ. ನಾವು ಹಣ ಸಹಾಯ ಮಾಡಿದರೆ ಅವರೂ ಸಹ ಸಹಾಯ ಮಾಡುತ್ತಾರೆ.

ಇನ್ನು ಮಾನ್ಯ ಕಾಗೋಡು ತಿಮ್ಮಪ್ಪನವರು ನಮ್ಮ ಭಾರತದಲ್ಲಿಯೇ ಪ್ರಥಮವಾಗಿ ಸಾಗರ ದಲ್ಲಿ ಕ್ರಾಸ್ ಕಂಟ್ರೀಸ್ ರೇಸನ್ನು ನಡೆಸಿದರು, ಅವರೇ ಅದಕ್ಕೆ ಅಧ್ಯಕ್ಷರಾಗಿದ್ದರು, ಅದನ್ನು ನಡೆಸಲು ಅವರು ಹಾಗೂ ಅವರ ಸ್ನೇಹಿತರು ಬಹಳ ಶ್ರಮ ವಹಿಸಿದರು. ದಕ್ಷಿಣ ಭಾರತದಲ್ಲಿಯೇ

ಪ್ರಪ್ರಥಮವಾಗಿ ನಡೆದಂಥ ಆ ರೇಸ್‌ಗೆ ನನ್ನನ್ನು ಹಾಗೂ ಕೇಂದ್ರದ ಮಂತ್ರಿಗಳನ್ನು ಕರೆಸಿದ್ದರು ಹಣಕಾಸಿನ ತೊಂದರೆಯಾದಾಗ ಅನೇಕ ಜನರು ಅವರಿಗೆ ಸಹಾಯ ಮಾಡಿದ್ದಾರೆ.

ಶ್ರೀ ಕೊಣಂದೂರು ಲಿಂಗಪ್ಪ.— ನೀವು ಎಷ್ಟು ಕೊಟ್ಟಿರಿ ?

ಶ್ರೀ ಆರ್. ಗುಂಡೂರಾವ್.— ಸರ್ಕಾರದಿಂದ ಹತ್ತು ಸಾವಿರ ಕೊಟ್ಟಿದ್ದೇವೆ. ಮೊದಲು 5 ಸಾವಿರ ಸಾಕು ಎಂದು ಹೇಳಿದರು. ನಂತರ ಅಂದಿನ ಸಮಾರಂಭದಲ್ಲಿ 25 ಸಾವಿರ ಜನರು ಸೇರಿದ್ದ ಸಭೆಯಲ್ಲಿ 5 ಸಾವಿರ ಸಾಲುವುದಿಲ್ಲ. ಇನ್ನೂ 5 ಸಾವಿರ ಕೊಡಿ ಎಂದು ಕೇಳಿದರು. ಅದರಂತೆ ಕೊಟ್ಟಿದ್ದೇವೆ ಇನ್ನೂ ಜಾಸ್ತಿ ಕೇಳಿದರೆ ಕೊಡುವುದಕ್ಕೆ ಸಿದ್ಧನಿದ್ದೇನೆ ಲೋಕೋಪಯೋಗಿ, ಇಂಡಸ್ಟ್ರೀ, ಇರಿಗೇಷನ್ ಇಂತಹ ಇಲಾಖೆಗಳಾದರೆ ಕೋಟಿಗಟ್ಟಲೆ ಹಣ ಖರ್ಚು ಮಾಡಬೇಕಾಗುತ್ತದೆ. ಆದರೆ ಇದೇನು ಅಂತಹ ದೊಡ್ಡ ಇಲಾಖೆಯಲ್ಲ. ಇದು ಸಾವಿರಗಟ್ಟಲೆ ಖರ್ಚು ಮಾಡತಕ್ಕಂಥ ಇಲಾಖೆ. ಆದ್ದರಿಂದ ನಾಳೆಯೇ ಕೇಳಿ. ಕೊಡುತ್ತೇನೆ. ಅದಕ್ಕೇನೂ ತೊಂದರೆಯಿಲ್ಲ.

1—30 ಪಿ. ಎಂ.

5 ಸಾವಿರ ರೂಪಾಯಿಗಳು ಬೇಕು ಎಂದು ಕೇಳಿ ಕೊಡುತ್ತೇನೆ. ನಿನ್ನೆಯ ದಿವಸ ಬೆಂಗಳೂರು ಪ್ಯಾಲೇಸ್ ಆರ್ಚರ್‌ನಲ್ಲಿ ನಡೆಯತಕ್ಕ ಯೋಗಾಶ್ರಮದ ಬಗ್ಗೆ ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಮಾತನಾಡಿದ್ದಾರೆ. ಅದು ಯಾವ ರೀತಿ ನಡೆಯುತ್ತದೆ ಎನ್ನುವುದನ್ನು ನಮ್ಮ ಮಾನ್ಯ ಅಧ್ಯಕ್ಷಿಣಿಯವರು ನೋಡಿದ್ದಾರೆ. ಆದ್ದರಿಂದ ನಿನ್ನೆಯ ದಿವಸ ಅವರೇ ಇದರ ಬಗ್ಗೆ ಮಾನ್ಯ ಸದಸ್ಯರಿಗೆ ಹೇಳಿದ್ದಾರೆ. ಆ ಮಾನ್ಯ ಸದಸ್ಯರು ಈ ಯೋಗಾಶ್ರಮವನ್ನು ಇಲ್ಲಿಯವರೆಗೂ ನೋಡಿರಲಿಲ್ಲ. ಈಗ ಅವರು ನೋಡಿಕೊಂಡು ಬಂದಿದ್ದಾರೆ ಅವರು ಅದನ್ನು ಚೆನ್ನಾಗಿ ನಡೆಸುತ್ತಿದ್ದಾರೆಂದು ನೋಡಿ ಕೊಂಡು ಬಂದಿದ್ದಾರೆ. ಇಂಥಾದಕ್ಕೆ ಸರ್ಕಾರದವರು ಸಹಾಯವನ್ನು ಕೊಡಬೇಕಾಗುತ್ತದೆ. ಇದರಿಂದ ಅನೇಕ ಜನಗಳಿಗೆ ಅನುಕೂಲವಾಗುತ್ತದೆ. ರಾಜಕೀಯದಲ್ಲಿ ಎಷ್ಟು ಬೇಕಾದರೂ ಖರ್ಚು ಮಾಡಬಹುದು, ಕೈಗಾರಿಕೆಯಲ್ಲಿ ಎಷ್ಟು ಬೇಕಾದರೂ ಖರ್ಚು ಮಾಡಬಹುದು. ವ್ಯಾಪಾರದಲ್ಲಿ ಎಷ್ಟು ಬೇಕಾದರೂ ಖರ್ಚು ಮಾಡಬಹುದು. ಆದರೆ ಆರೋಗ್ಯ ಸೆಂಟರುಗಳಿಗೆ ಖರ್ಚು ಮಾಡುವುದು ಬಹಳ ಮುಖ್ಯವಾದುದು ಮುಖ್ಯವಾಗಿ ಮನುಷ್ಯನಿಗೆ ಆರೋಗ್ಯ ಚೆನ್ನಾಗಿರಬೇಕು. ಎಂ. ಎಲ್. ಎ. ಆಗಬಹುದು ಎಂ. ಪಿ. ಆಗಬಹುದು. ಆದರೆ ದುಡ್ಡು ಕೊಟ್ಟು ಆರೋಗ್ಯವನ್ನು ಕೊಂಡುಕೊಳ್ಳುವುದಕ್ಕೆ ಆಗುವುದಿಲ್ಲ. ವ್ಯಾಪಾರ ಮಾಡಿ ಹಣ ಸಂಪಾದನೆ ಮಾಡಬಹುದು. ವ್ಯವಸಾಯ ಮಾಡಿ ಲಾಭ ಸಂಪಾದನೆ ಮಾಡಬಹುದು. ಆದರೆ ಆರೋಗ್ಯವನ್ನು ಸಂಪಾದನೆ ಮಾಡುವುದಕ್ಕಾಗುವುದಿಲ್ಲ. ಚಿಕ್ಕ ವಯಸ್ಸಿನಲ್ಲಿ ಯೋಗಾಸನಗಳು ಮತ್ತು ಕ್ರೀಡೆಗಳಲ್ಲಿ ಭಾಗವಹಿಸದೇ ಹೋದರೆ ಒಳ್ಳೆಯ ಆರೋಗ್ಯವಂತರಾಗಿರುವುದಕ್ಕೆ, ಆರೋಗ್ಯ ಭಾಗ್ಯವನ್ನು ಸಂಪಾದನೆ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಚಿಕ್ಕವಯಸ್ಸಿನಲ್ಲಿಯೇ ಯೋಗಾಸನಗಳು ಮತ್ತು ಕ್ರೀಡೆಗಳಲ್ಲಿ ಭಾಗವಹಿಸಿದರೆ ಮಾತ್ರ ಒಳ್ಳೆಯ ಆರೋಗ್ಯವನ್ನು ಸಂಪಾದನೆ ಮಾಡುವುದಕ್ಕೆ ಸಾಧ್ಯ. ಅದಕ್ಕಾಗಿ ಈ ಬಾಬಿಗೆ ಹೆಚ್ಚಿನ ಹಣ ಸಹಾಯ ಮಾಡುವ ದೃಷ್ಟಿಯಿಂದ ಮಾನ್ಯ ಹಣಕಾಸಿನ ಮಂತ್ರಿಗಳು ಈ ಯುವ ಜನ ಇಲಾಖೆಗೆ ಹೆಚ್ಚು ಹಣವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಆರ್ಟ್ ಮತ್ತು ಕಲ್ಚರ್, ನಮ್ಮ ಸಂಸ್ಕೃತಿ ನಾಟಕ ಸಂಗೀತ ಇವುಗಳಿಗ ನಾವು ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹ ಕೊಡುತ್ತಿದ್ದೇವೆ. ಕರ್ನಾಟಕದ ಕಲೆಗೆ ಎಲ್ಲಾ ದೃಷ್ಟಿಯಿಂದ ಕಲಾವಿದರಿಗೆ ಬೆಂಬಲ ಕೊಡಬೇಕು ಎಂದು, ಹೆಚ್ಚಿನ ಆರ್ಥಿಕ ಸಹಾಯ ಮಾಡಬೇಕು ಎಂದು, ಸಹಾಯ ಕೊಡುತ್ತಿದ್ದೇವೆ. ಆದರೂ ಇದು ಬಹಳ ಕಡಿಮೆ. ಸಂಗೀತ, ಹರಿಕಥೆ ನೃತ್ಯ, ಭರತನಾಟ್ಯ, ಇವುಗಳಿಗೂ ಪ್ರೋತ್ಸಾಹ ಕೊಡುತ್ತಿದ್ದೇವೆ. ಈ ಸಂಗೀತ, ಮತ್ತು ಭರತನಾಟ್ಯ ಇವುಗಳನ್ನು ವಯಸ್ಸು ಕಳೆದ ಮೇಲೆ ಅಭ್ಯಾಸ ಮಾಡುವುದಕ್ಕೆ ಬರುವುದಿಲ್ಲ. ಇದನ್ನು ಚಿಕ್ಕ ವಯಸ್ಸಿನಲ್ಲಿಯೆ ಅಭ್ಯಾಸ ಮಾಡಬೇಕು. ನಮ್ಮ ದೇಶದಲ್ಲಿ ಅನೇಕ ಜನ ನಾಟಕ ಕಲಾವಿದರು ಇದ್ದಾರೆ. ಕಾದಂಬರಿಕಾರರು ಇದ್ದಾರೆ. ಇವರಲ್ಲಿ ಬಹಳ ಜನ ತೊಂದರೆಯಲ್ಲಿದ್ದಾರೆ. ಅದಕ್ಕಾಗಿ 500 ರೂಪಾ

ಯಿಂಗಳ ಮಾಸಾಶನವನ್ನು 90 ಜನಗಳಿಗೆ ಕೊಡುತ್ತಿದ್ದೇವೆ. ಇನ್ನೂ ಅನೇಕ ಜನಗಳಿಗೆ ಕೊಡಬೇಕು ಎಂದು ತೀರ್ಮಾನ ಮಾಡಿದ್ದೇವೆ. ತಮಗೆಲ್ಲರಿಗೂ ಗೊತ್ತಿರುವಂತೆ ಅನೇಕ ಕಲಾವಿದರುಗಳು ಬಹಳ ಕಷ್ಟದಲ್ಲಿದ್ದಾರೆ. ನಾನು 8–9 ವರ್ಷದ ಹುಡುಗನಾದಾಗ ಹಿರಿಯ ಸಾಹಿತಿಗಳು ಕಲೆಗಾರರು ಎಂದು ಏನು ಕೇಳುತ್ತಿದ್ದೆನೋ ಅವರೆಲ್ಲರೂ ಇವೊತ್ತು ಒಂದು ಹೊತ್ತಿನ ಊಟ ಮಾಡುವುದಕ್ಕೆ ಇಲ್ಲದೆ ಇರುವಷ್ಟು ಕಷ್ಟದಲ್ಲಿದ್ದೇವೆ ಎಂದು ನಮ್ಮ ಮುಂದೆ ಅರ್ಜಿ ತೆಗೆದುಕೊಂಡು ಬರುತ್ತಾರೆ. ಈಗ ಸದ್ಯಕ್ಕೆ 500 ರೂಪಾಯಿಗಳ ಮಾಸಾಶನವನ್ನು 90 ಜನಗಳಿಗೆ ಕೊಡುತ್ತಿದ್ದೇವೆ. ಇನ್ನೂ ಹೆಚ್ಚು ಮಾಡುವುದಕ್ಕೆ ಸರ್ಕಾರ ಆಲೋಚನೆ ಮಾಡುತ್ತಿದೆ ಶ್ರೀಮಾನ್ ಕೆ ಆರ್ ಎಸ್. ನಾಯ್ಡು ಅವರು ಮತ್ತು ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಸ್ಟೇಡಿಯಂ ಬಗ್ಗೆ ಮಾತನಾಡಿದ್ದಾರೆ. ಈ ಕೆಲಸವನ್ನು ಮಾಡಿಕೊಡುವುದಕ್ಕೆ ನಾನು ಎಲ್ಲಿಯವರೆಗೆ ಕ್ರೀಡಾಮಂತ್ರಿಗಳಾಗಿರುತ್ತಾನೆಯೋ ಅಲ್ಲಿಯವರೆಗೂ ಯೋಚನೆ ಮಾಡಬೇಕಾಗಿಲ್ಲ. ಆದರೆ ಯಾವಾಗ ನನ್ನ ಖಾತೆ ಬದಲಾವಣೆಯಾಗುತ್ತದೆಯೋ ಹೇಳುವುದಕ್ಕಾಗುವುದಿಲ್ಲ. ಇಂಟರ್ ನ್ಯಾಷನಲ್ ಆರ್ಟಿಸ್ಟ್ ಸ್ಟೇಡಿಯಂ ಮಾಡುವುದಕ್ಕೆ ಸರ್ಕಾರ ಪೂರ್ತಿ ಸಹಾಯ ಕೊಡುತ್ತದೆ ಮತ್ತು ಆ ಸ್ಟೇಡಿಯಂ ನಡೆಸುವುದಕ್ಕೆ ಸಹಾಯ ಮಾಡುತ್ತದೆ ಎಂದು ನಾನು ಭರವಸೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು — ಎಲ್ಲರಿಗೂ ವಿಶ್ರಾಂತಿ ವೇತನವನ್ನು ಕೊಡುತ್ತಿದ್ದೀರಿ ಅದೇ ರೀತಿ ಕ್ರೀಡಾಪಟುಗಳಿಗೂ ವಿಶ್ರಾಂತಿ ವೇತನವನ್ನು ಕೊಡುತ್ತೇವೆ ಎಂದು ಆಶ್ವಾಸನೆ ಕೊಡುತ್ತೀರಾ ?

ಶ್ರೀ ಆರ್. ಗುಂಡೂರಾವ್.— ಅಧ್ಯಕ್ಷರೇ ಕೊನೆಯದಾಗಿ ಕಲಾವಿದರಿಗೆ ಯಾವ ರೀತಿ ಸಹಾಯ ಮಾಡುತ್ತಿದ್ದೇವೆಯೋ ಅದೇ ರೀತಿ ಕ್ರಿಡಾಪಟುಗಳಿಗೂ ಕೂಡ ಸಹಾಯ ಮಾಡುವುದು ಸರ್ಕಾರದ ಪರಿಶೀಲನೆಯಲ್ಲಿದೆ ಯಾರು ಯಾರು ಉತ್ತಮ ಆಟಗಾರರು ಇದ್ದಾರೆ, ಯಾರು ಯಾರು ಕುಸ್ತಿ ಮಾಡುವವರು ಇದ್ದಾರೆ ಅವರಲ್ಲಿ ಉತ್ತಮರಾದವರಿಗೆ ಮಾಸಾಶನ ಕೊಡಬೇಕು ಎಂದು ತೀರ್ಮಾನ ಮಾಡಿದೆ. ಈ ದಿಶೆಯಲ್ಲಿ ಆದಷ್ಟು ಜಾಗ್ರತೆ ಈ ಕೆಲಸವನ್ನು ಪೂರೈಸುವುದಕ್ಕೆ ಸರ್ಕಾರ ಪ್ರಯತ್ನಪಡುತ್ತದೆ.

ಶ್ರೀಮಾನ್ ಸ್ವೈನಿಕ್ ಅವರು ಬೆಳಗಾವಿಯಲ್ಲಿರತಕ್ಕ ಪೋರ್ಟ್ ಸರಿಪಡಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳಿದ್ದಾರೆ. ಅದು ಆರ್ಕಿಯಾಲಜಿ ಪ್ರಶ್ನೆ. ನಾವು ಅದಕ್ಕೆ ಸಂಬಂಧಪಟ್ಟ. ಯಾವುದೇ ಒಂದು ಇಲಾಖೆಯನ್ನು ಬೆಳಗಾವಿನಲ್ಲಿ ಮಾಡಿಲ್ಲ. ಆ ಫೋರ್ಟ್ ನಮಗೆ ಸೇರಿಲ್ಲ. ಅದು ಮಿಲಿಟರಿಗೆ ಸೇರಿದ್ದು ಇಂಡಿಯನ್ ಡಿಫೆನ್ಸ್‌ಗೆ ಸೇರಿದೆ. ಆದ್ದರಿಂದ ನಾನು ನಮ್ಮ ಇಲಾಖೆಯ ಮುಖಾಂತರ ಮಿಲಿಟರಿ ಅಧಿಕಾರಿಗಳಿಗೆ ಪ್ರಾರ್ಥನೆ ಮಾಡಿಕೊಂಡು ಆದಷ್ಟು ಜಾಗ್ರತೆ ಆ ಫೋರ್ಟನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಇನ್ನು ಎನ್. ಸಿ. ಸಿ ಬಗ್ಗೆ ಯಾರೂ ಮಾತನಾಡಿಲ್ಲ. ಅದು ನಮ್ಮ ರಾಜ್ಯದಲ್ಲಿ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ಅದು ಒಳ್ಳೆಯ ಹೆಸರನ್ನು ರಾಷ್ಟ್ರ ಮಟ್ಟದಲ್ಲಿ ಕರ್ನಾಟಕ ಪಡೆದಿದೆ ಯುವ ಜನ ಸೇವಾ ಇಲಾಖೆಯ ಬಗ್ಗೆ ತಾವುಗಳೆಲ್ಲರೂ ಕೂಡ ಒಳ್ಳೆಯ ಮಾತುಗಳನ್ನು ಹೇಳಿ ಯಾವುದೇ ಟೀಕೆ ಟಿಪ್ಪಣಿಗಳನ್ನು ಮಾಡದೆ ಇರುವುದಕ್ಕೆ ಮತ್ತೊಮ್ಮೆ ತಮ್ಮಗೆಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಯುವಜನ ಸೇವಾ ಇಲಾಖೆಗೆ ತಮ್ಮ ಸರ್ವತೋಮುಖವಾದ ಬೆಂಬಲವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನಾನು ಈ ಬಗ್ಗೆ ಹೆಚ್ಚು ಹೇಳಬೇಕಾಗಿಲ್ಲ.

ಹೌಸಿಂಗ್ ಬಗ್ಗೆ ಹೇಳುವುದಾದರೆ 8ಲಕ್ಷ ಜನ ಫ್ಯಾಮಿಲಿಯವರಿಗೆ, ಮನೆ ಇಲ್ಲದೆ ಇರುವವರಿಗೆ ಜಾಗ ಇಲ್ಲದೆ ಇರುವವರಿಗೆ ಸುಮಾರು 7 ಲಕ್ಷ ಜನಗಳಿಗೂ ಮೇಲ್ಪಟ್ಟು ಜನಗಳಿಗೆ ಸೈಟುಗಳನ್ನು ಒದಗಿಸಿದ್ದೇವೆ. 89–90 ಸಾವಿರ ಮನೆಗಳನ್ನು ಕಟ್ಟಿ ಕೊಟ್ಟಿದ್ದೇವೆ. ಕೆಲವು ಕಡೆ ಮಲೆನಾಡಿನಲ್ಲಿ ಕಟ್ಟಿದ್ದ ಮನೆಗಳು ಬಿದ್ದು ಹೋದವು ಎಂದು ಮಾನ್ಯ ಸದಸ್ಯರು ಹೇಳಿದರು. ನಾನು ಕೂಡ ಮಲೆನಾಡು ಪ್ರದೇಶದಿಂದ ಬಂದಿದ್ದೇನೆ. ಸಾವಿರಾರು ಮನೆಗಳನ್ನು ಕಟ್ಟಿರುವಾಗ ಕೆಲವು ಮನೆಗಳು ಬಿದ್ದು ಹೋಗಿರಬಹುದು. ಆದರೆ ತತ್ವ ಬಹಳ ಮುಖ್ಯವಾದುದು. ಯಾವ ಜನ ನಾವು ಯಾವ ಕಾಲದಲ್ಲಿಯೂ ಮನೆಗಳನ್ನು ಕಾಣುವುದಿಲ್ಲ ಎಂದು ತಿಳಿದುಕೊಂಡಿದ್ದರೋ ಅಂಥವರು ಇವೊತ್ತು

ತಮ್ಮದೇ ಆದ ಜಾಗದಲ್ಲಿ ತಮ್ಮದೇ ಮನೆಗಳಲ್ಲಿ ವಾಸಮಾಡುತ್ತಿದ್ದಾರೆ. ಈ ಮನೆಗಳು ಮಧ್ಯಮ ವರ್ಗದವರಿಗೆ ಚೆನ್ನಾಗಿ ಕಾಣದೇ ಇರಬಹುದು. ಚಿಕ್ಕ ಚಿಕ್ಕ ಮನೆಗಳನ್ನು ಕಟ್ಟಿರುವು ದರಿಂದ ಅವು ಬಿದ್ದು ಹೋಗುವುದಿಲ್ಲ. ಕೆಲವರು ಮರದ ಕೆಳಗಡೆ ವಾಸ ಮಾಡುತ್ತಾ ಏನೂ ಇಲ್ಲದೇ ಇದ್ದವರು ಇವೊತ್ತು ತಮ್ಮದೇ ಆದ ಒಂದು ಜಾಗದಲ್ಲಿ ಮನೆಗಳನ್ನು ಕಟ್ಟಿಕೊಂಡು ಸಂತೋಷದಿಂದ ವಾಸ ಮಾಡುತ್ತಿದ್ದಾರೆ. ಅನೇಕ ಕಡೆ ಮನೆಗಳು ಚೆನ್ನಾಗಿವೆ. ಕೆಲವು ಕಡೆ ಏನೋ ಸ್ವಲ್ಪ ವ್ಯತ್ಯಾಸವಾಗಿರಬಹುದು. ಅಂಥಾದ್ದು ಬಹಳ ಕಡಿಮೆ 89—90 ಸಾವಿರ ಮನೆ ಗಳನ್ನು ಕಟ್ಟುವಾಗ 5 ಪರ್ಸೆಂಟೋ 2ಪರ್ಸೆಂಟೋ ಮನೆಗಳು ಬಿದ್ದು ಹೋಗಿರಬಹುದು. ಇಂಥಾ ಕಡೆ ಆ ಮನೆ ಬಿದ್ದು ಹೋಗಿದೆ ಎಂದರೆ ಅಂಥಾದವನ್ನು ಖಂಡಿತವಾಗಿಯೂ ವಿಚಾರ ಮಾಡಿ ಸರಿಪ ಡಿಸುವುದಕ್ಕೆ ನಾನು ತಯಾರಾಗಿದ್ದೇನೆ. ಎಲ್ಲಾ ಮನೆಗಳನ್ನೂ ನಾವು ಚೆನ್ನಾಗಿ ಕಟ್ಟಿದ್ದೇವೆ ಎಂದು ನಾನು ಹೇಳುವುದಿಲ್ಲ. ಯಾರು ಮನೆಯಲ್ಲಿ ವಾಸ ಮಾಡುತ್ತಾರೆ ಅಂಥವರು ಅವರೇ ಕಟ್ಟಿಕೊಳ್ಳುವುದಕ್ಕೆ ಅನೇಕ ಜನ ಮುಂದೆ ಬರುತ್ತಾರೆ. ಎಲ್ಲಿ ಜನ ಮನೆಗಳನ್ನು ಕಟ್ಟಿಕೊಳ್ಳು ವುದಕ್ಕೆ ಮುಂದೆ ಬರುವುದಿಲ್ಲ ಅಂಥಾ ಕಡೆ ಕಂಟ್ರಾಕ್ಟರ್ ಮೂಲಕವೋ ಅಥವಾ ನಮ್ಮ ಅಧಿಕಾರಿ ಗಳ ಮುಖಾಂತರವೋ ಕಟ್ಟಿಸ ಬೇಕಾಗುತ್ತದೆ. ಆದ್ದರಿಂದ ಖಚಿತವಾಗಿ ಇಂಥಾ ಕಡೆ ಲೋಪ ದೋಷಗಳು ಬಂದಿವೆ ಎಂದು ತಿಳಿಸಿದರೆ ಆ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಆ ಮೇಲೆ ಮಾನ್ಯ ಸದಸ್ಯರಾದ ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಈಗ ಮನೆ ಕಟ್ಟಿಕೊಳ್ಳುವುದಕ್ಕೆ 2 ½ ಸಾವಿರ ರೂಪಾಯಿಗಳನ್ನು ಏನು ಕೊಡುತ್ತಿದೆ ಅದನ್ನು ಸ್ವಲ್ಪ ಜಾಸ್ತಿ ಮಾಡಬೇಕು, ಅದರಲ್ಲೂ ಮಲೆನಾಡು ಏರಿಯಾಗಳಲ್ಲಿ ಈ ಹಣವನ್ನು ಜಾಸ್ತಿ ಮಾಡಬೇಕು ಎಂದು ಹೇಳಿದ್ದಾರೆ. ಅದನ್ನು ಒಪ್ಪುತ್ತೇನೆ ಸರ್ಕಾರ ಇದನ್ನು ಆದಷ್ಟು ಜಾಗ್ರತೆ ಪರಿಶೀಲಿಸಿ ಆ ಹಣವನ್ನು ಸ್ವಲ್ಪ ಜಾಸ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಮಾನ್ಯ ಸದಸ್ಯರಾದ ಶ್ರೀಮಾನ್ ಸ್ಯೆನಿಕ್ ಅವರು ಪುದುಚ್ಚೆಯಲ್ಲಿ ಮನೆಯು ಬಿದ್ದು ಹೋಗಿದೆ ಎಂದು ಹೇಳಿದರು. ಅದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಶ್ರೀಮಾನ್ ಸಿಂಗ್ ಅವರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಅವರು ಈ ಬಗ್ಗೆ ಒಂದು ಕಾಲ್ ಅಟೆನ್ ಷನ್ ನೋಟಿಸ್ ಕಳುಹಿಸಿದ್ದಾರೆ. ಅದಕ್ಕೆ ನಾನು ಜವಾಬು ಕೊಡುತ್ತೇನೆ.

ಶ್ರೀ ಎಂ. ಎಸ್, ಕೃಷ್ಣನ್,— ರೂರಲ್ ಹೌಸಿಂಗ್ ಬಗ್ಗೆ ಗಮನ ಕೊಡಬೇಕೆಂದು ನಾನು ನಿನ್ನೆ ಹೇಳಿದ್ದೇನೆ, ಹೌಸಿಂಗ್ ಬೋರ್ಡ್ ಯೋಜನೆಯನ್ನು ಗ್ರಾಮಾಂತರ ಪ್ರದೇಶಗಳಿಗೂ ವಿಸ್ತರಣೆ ಮಾಡಬೇಕೆಂದು ನಾನು ಹೇಳಿದ್ದೇನೆ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರವನ್ನು ಹೇಳಲಿಲ್ಲ.

ಶ್ರೀ ಆರ್. ಗುಂಡೂರಾವ್.— ಕುಮಾರಸ್ವಾಮಿಯವರು ಹೌಸಿಂಗ್ ಸೊಸೈಟಿ ಮೂಲಕ ಮಾಡಿಕೊಂಡಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ಕೆಲಸವನ್ನು ಹೌಸಿಂಗ್ ಬೋರ್ಡ್‌ನವರು ತೆಗೆದು ಕೊಂಡಿದ್ದಾರೆ,

ಶ್ರೀ ಆರ್. ಗುಂಡೂರಾವ್.—ಮಾನ್ಯ ಸದಸ್ಯರಾದ ಕೃಷ್ಣನ್‌ರವರು ಕೊಟ್ಟ ಸಲಹೆಯನ್ನು ನಾನು ಈಗಾಗಲೇ ವಿಚಾರಮಾಡಿದ್ದೇವೆ. ಬೋರ್ಡ್‌ನವರು ಗ್ರಾಮಾಂತರವನ್ನು ತೆಗೆದುಕೊಳ್ಳಲಿಕ್ಕೆ ಮತ್ತು ಅವರು ನೇರವಾಗಿ ಕೊಡಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ, ಅಲ್ಲಿ ಇಂಜಿನಿಯರ್ಸ್ ಇಲ್ಲ, ತೊಂದರೆ ಇದೆ. ರೂರಲ್ ಹೌಸಿಂಗ್ ಸ್ಕೀಂನಲ್ಲಿ ಯಾರು ಮನೆ ಕಟ್ಟಿಕೊಳ್ಳಲಿಕ್ಕೆ ಮುಂದೆ ಬರು ತ್ತಾರೆ ಅವರಿಗೆ ಸಾಲ ಕೊಡುತ್ತಾರೆ. ಗ್ರಾಮಾಂತರ ಪ್ರದೇಶಗಳಲ್ಲಿ 4870 ಮನೆಗಳನ್ನು ಕಟ್ಟಿದ್ದೇವೆ, ನಾವು ನಗರದಲ್ಲಿ ಸಾಲ ಕೊಡುತ್ತಾ ಇಲ್ಲ. ನಗರಗಳಲ್ಲಿ ಹೌಸಿಂಗ್ ಬೋರ್ಡ್ ನವರು, ಎಲ್.ಐ.ಸಿ. ಮುಂತಾದ ಏಜೆನ್ಸಿಯವರು ಇದ್ದಾರೆ. ಹೌಸಿಂಗ್ ಬೋರ್ಡ್‌ನವರು 1973ನೇ ಇಸವಿಯವರೆಗೆ ಸಾಲವನ್ನು ಕೊಡುತ್ತಾ ಇದ್ದರು, ನಂತರ ನಿಲ್ಲಿಸಿದರು. ಈ ರೀತಿ ಸಾಲ ಕೊಡುವುದರಿಂದ ಪ್ರಯೋಜನವಾಗಲಾರದು, ಬೇರೆ ರೀತಿಯಲ್ಲಿ ಮಾಡಬೇಕು ಎಂದು ಸಂಬಂಧಪಟ್ಟ ಮಂತ್ರಿಗಳು ಯೋಚನೆಮಾಡಿ ನಿಲ್ಲಿಸಿದರು. ಮೋಲ್ಕನೆಯ ಮತ್ತು ಈ ಮನೆಯ ಅನೇಕ ಜನ

ಸದಸ್ಯರು ಇದರಬಗ್ಗೆ ಯೋಚನೆಮಾಡಿ ಪುನಃ ಪ್ರಯತ್ನಮಾಡಬೇಕು ಎಂದು ವೈಯುಕ್ತಿಕವಾಗಿ ತಿಳಿಸಿದ್ದಾರೆ. ಇದರ ಬಗ್ಗೆ ಸರ್ಕಾರ ಪರಿಶೀಲನೆಮಾಡುತ್ತಿದೆ, ಸಾಲ ಸೌಲಭ್ಯವನ್ನು ಒದಗಿಸ ಬೇಕು ಎಂದು ಇದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಗ್ರಾಮಾಂತರ ಪ್ರದೇಶದಲ್ಲ ಸ್ಕೀಂ ಇದೆಯೇ ?

ಶ್ರೀ ಆರ್. ಗುಂಡೂರಾವ್.—ಗ್ರಾಮಾಂತರ ಪ್ರದೇಶದಲ್ಲಿ ಅನೇಕ ಜನರಿಗೆ ಸಾಲವನ್ನು ಕೊಟ್ಟಿದ್ದೇವೆ. ಅದನ್ನು ಸರ್ಕಾರ ಪರಿಶೀಲನೆಗೆ ಇಟ್ಟುಕೊಂಡಿದೆ. ನಮ್ಮ ಈ ಎರಡು ಇಲಾಖೆಗಳ ಬೇಡಿಕೆಗೆ ಹೆಚ್ಚಿನ ಸಹಾನುಭೂತಿ ಮತ್ತು ಸಹಕಾರವನ್ನು ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ತಮಗೆ ಮತ್ತೊಮ್ಮೆ ಅಭಿನಂದನೆಗಳನ್ನು ಸಲ್ಲಿಸಿ ನಮ್ಮ ಈ 2 ಇಲಾಖೆಗಳಿಗೆ ಸಂಬಂಧಪಟ್ಟ ಬೇಡಿಕೆ ಗಳನ್ನು ಸರ್ವಾನುಮತದಿಂದ ಒಪ್ಪಿಕೊಳ್ಳಬೇಕು ಎಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಬಿ. ಬೈರಪ್ಪಾಜಿ.—ಒಂದು ಕ್ಲಾರಿಫಿಕೇಷನ್ ಕೇಳುತ್ತೇನೆ, ಮನೆಗಳನ್ನು ಕಟ್ಟುವುದಕ್ಕೆ 2500 ರೂಪಾಯಿಗಳನ್ನು ಏನು ನಿಗದಿ ಮಾಡಿದ್ದೀರಿ ಅದರಿಂದ ಅನೇಕ ಕಡೆ ಮನೆಗಳನ್ನು ಕಟ್ಟುವು ದಕ್ಕೆ ಆಗುವುದಿಲ್ಲ. ದಾರಣೆವಾಸಿ ಜಾಸ್ತಿಯಾಗಿ, ಸಾಮಾನುಗಳು ಸಿಕ್ಕದೆ ಬಹಳ ತೊಂದರೆ ಯಾಗಿದೆ. ಅಲ್ಲದೆ ಈ ಸಾರಿ ಕ್ಷಾಮ ಬಂದಿದೆ ಆದುದರಿಂದ ಈ ದಿಶೆಯಲ್ಲಿ ಪುನರ್‌ಪರಿಶೀಲನೆಮಾಡಿ 2500 ರೂಪಾಯಿಗಳನ್ನು ಪೂರ್ತಿಯಾಗಿ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಆರ್ ಗುಂಡೂರಾವ್.—ಮಾನ್ಯ ಅಧ್ಯಕ್ಷರೇ, ನಾನು ಆಗಲೇ ಹೇಳಿದೆ, ಏನೆಂದರೆ, 2 ಸಾವಿರ ರೂಪಾಯಿ, ಒಂದು ಸಾವಿರ ರೂಪಾಯಿಗಳನ್ನು ಸಾಲದ ಮೂಲಕ ಸಬ್ಸಿಡಿ ಕೊಟ್ಟು ಮನೆಯನ್ನು ಕಟ್ಟಿಕೊಡುವಾಗ ಅವರದೂ ಸ್ವಲ್ಪ ಕಾಂಟ್ರಿಬ್ಯೂಷನ್ ಇಲ್ಲದೇ ಹೋದರೆ ಅವರಿಗೆ ಹೆಚ್ಚಿನ ಆಸಕ್ತಿ ಇರುವುದಿಲ್ಲ.

ಶ್ರೀ ಬಿ. ಬೈರಪ್ಪಾಜಿ.—ಗ್ರಾಮಾಂತರದ ಜನರಿಗೆ 500 ರೂಪಾಯಿಗಳನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ 2500 ರೂಪಾಯಿಗಳನ್ನು ಪೂರ್ತಿಯಾಗಿ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಗುಂಡೂರಾವ್.—ಅವರಿಗೆ ಕೊಡುವುದಕ್ಕೆ ಖಂಡಿತ ಸಾಧ್ಯವಾಗುತ್ತದೆ, ಅವರು ಕೊಡದೇ ಹೋದರೆ ಅವರಿಗೆ ಆಸಕ್ತಿ ಇರುವುದಿಲ್ಲ. ಸದ್ಯದ ಹಣಕಾಸಿನ ಪರಿಸ್ಥಿತಿಯಲ್ಲಿ ಸರ್ಕಾರ ಕೊಡಲಿಕ್ಕೆ ಸಾಧ್ಯವಿಲ್ಲ.

ಶ್ರೀ ಬಿ. ಬೈರಪ್ಪಾಜಿ.—ಹೌಸ್‌ಲೆಸ್ ಪೀಪಲ್ 500 ರೂಪಾಯಿಗಳನ್ನು ಹೇಗೆ ಕೊಡುತ್ತಾರೆ.

ಶ್ರೀ ಆರ್. ಗುಂಡೂರಾವ್.—ಮುಂದೆ ನೋಡೋಣ.

† ಶ್ರೀ ಡಿ. ಕೆ. ನಾಯ್ಕರ್ (ಪೌರಾಡಳಿತ ಮತ್ತು ರಾಜಕೀಯ ವಿಶ್ರಾಂತಿವೇತನ ಶಾಖೆ ಗಳ ಮಂತ್ರಿಗಳು).—

ಮಾನ್ಯ ಅಧ್ಯಕ್ಷರೇ ನಿನ್ನೆಯ ದಿವಸ ನಾನು ಮಂಡಿಸಿದಂಥ 27 ಮತ್ತು 32 ಬೇಡಿಕೆಗಳ ಬಗ್ಗೆ ಈ ಸಭೆಯ ಮಾನ್ಯ ಸದಸ್ಯರು ಅನೇಕ ರೀತಿಯಿಂದ ಭಾಷಣ ಮಾಡುತ್ತಾ, ಕೆಲವು ಒಳ್ಳೆಯ ಸೂಚನೆಗಳನ್ನು ಮತ್ತು ಸಲಹೆಗಳನ್ನು ಕೊಟ್ಟಿದ್ದಾರೆ. ಅಂತಹ ಒಳ್ಳೆಯ ಸಲಹೆಗಳನ್ನು ಕೊಟ್ಟ ಯಾವತ್ತೂ ಮಾನ್ಯ ಸದಸ್ಯರಿಗೆ ನಾನು ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತೇನೆ. ಇನ್ನು ಕೆಲವು ಜನ ಸದಸ್ಯರು ವ್ಯಂಗವಾಗಿ ಮತ್ತು ಕಟುವಾಗಿ ಟೀಕಿಸಿದ್ದಾರೆ. ಶ್ರೀಮಾನ್ ಕೆ. ಪುಟ್ಟಸ್ವಾಮಿ ಯವರು ಪತ್ರಿಕೆಯಲ್ಲಿ ಬಂದಂಥ ''ಶ್ರೇಷ್ಠ ಸುಧಾರಕ'' ಎಂಬ ಬರುದಿನ ಮೇಲೆ ಉಲ್ಲೇಖಿಸಿ ಅದಕ್ಕೆ ಆಶ್ಚರ್ಯ ಪಡುವರೀತಿಯಲ್ಲಿ ತಮ್ಮ ಭಾಷಣದ ಉದ್ದಕ್ಕೂ ಟೀಕೆ ಮಾಡಿದ್ದಾರೆ. ಮತ್ತೆ ಅವರು ಭಾಷಣಮಾಡುತ್ತಾ ಮಂತ್ರಿಗಳು ಬಣ್ಣಬಣ್ಣದ ಬಟ್ಟೆಗಳನ್ನು ಮಾತ್ರ ಧರಿಸುತ್ತಾರೆಯೇ ವಿನಾ ಯಾವ ಸುಧಾರಣೆಯನ್ನು ಮಾಡಿದ್ದಾರೋ ನನಗೆ ಗೊತ್ತಿಲ್ಲ, ಇವರಿಗೆ ಪ್ರಜಾಪ್ರಭುತ್ವ ದಮನಕಾರಿ ಅಥವಾ ವಿರೋಧಿಪಟು ಎಂದು ಹೇಳಿದ್ದರೆ ಸಾರ್ಥಕವಾಗುತ್ತಿತ್ತು ಎನ್ನುವಂಥ ಮಾತನ್ನು ಹೇಳಿದ್ದಾರೆ, ಮಾನ್ಯ ಅಧ್ಯಕ್ಷರೇ, ಈ ನೀರು ಸರಬರಾಜು ಯೋಜನೆ ಮಂಡಲಿಯವರು ಏನು ಬಿರುದು ಕೊಟ್ಟಿದ್ದಾರೆ, ಅದನ್ನು ಅವರು ರೈಟಿಂಗ್‌ನಲ್ಲಿ ಕೊಟ್ಟಿಲ್ಲ ನಾನು ಕೇಳಲ್ಲೂ ಇಲ್ಲ, ಒಂದುವೇಳೆ ಅಲ್ಲಿರತಕ್ಕಂತ ಜನ, ಸದಸ್ಯರುಗಳು, ಅಧ್ಯಕ್ಷರು, ಯಾವುದಾದರೂ ನಾನು ಮಾಡಿದ

ಕೆಲಸ ಅಥವಾ ಕಾರ್ಯವನ್ನು ಮೆಚ್ಚಿ ಆ ತರಹ ವ್ಯಕ್ತಪಡಿಸಿದ್ದಾದರೆ ನನಗನ್ನಿಸುತ್ತದೆ ಮಾನ್ಯ ಕೆ. ಪುಟ್ಟಸ್ವಾಮಿಯವರು ಅದೇಕೆ ಹೊಟ್ಟೆಕಿಚ್ಚು ಪಡುತ್ತಾರೋ ನನಗೆ ಗೊತ್ತಾಗಲಿಲ್ಲ. ಏಕೆಂದರೆ, ಅವರು ಈ ಬೋರ್ಡನ್ನು ನಾನೇ ನಿರ್ಮಾಣ ಮಾಡಿದ್ದೇನೆ ಎಂದು ಹೇಳಿದ್ದಾರೆ. ಮಾನ್ಯ ಕೆ. ಪುಟ್ಟಸ್ವಾಮಿಯವರು ಈಗ ಸಭೆಯಲ್ಲಿಲ್ಲ, ಊಟಮಾಡಿ ಬರುತ್ತೇನೆ ಎಂದು ಹೋದರು. ಅವರು ಸಭೆಯಲ್ಲಿ ಇಲ್ಲದಾಗ ಅವರ ಬಗ್ಗೆ ಮಾತನಾಡಬೇಕಾದರೆ ನನಗೆ ವ್ಯಥೆಯಾಗುತ್ತದೆ. ಅವರು ಹಿಂದೆ ಕಾನೂನು ಮಂತ್ರಿಗಳಾಗಿದ್ದರು, ಪೌರಾಡಳಿತ ಮಂತ್ರಿಗಳಾಗಿದ್ದರು. ಅವರ ಕಾಲದಲ್ಲಿ ಅನೇಕ ಕಮಿಟಿಗಳನ್ನು ಕಾನ್‌ಸ್ಟಿಟ್ಯೂಟ್ ಮಾಡಿದ್ದಾರೆ. ಇಂತಹ ಬಿರುದುಗಳು ಅವರ ಕಾಲದಲ್ಲಿ ಅವರಿಗೆ ಸಿಕ್ಕದೇ ಹೋದರೆ ನಾನು ಮಾಡಿದ ತಪ್ಪೇನು ಅವರು ಮಾತನಾಡುತ್ತಾ ಮತ್ತೊಂದು ವಿಷಯವನ್ನು ಹೇಳಿದ್ದಾರೆ. ಏನೆಂದರೆ, ಮೈಸೂರಿನ ರಸ್ತೆಗೆ ದೇವರಾಜ ಅರಸ್ ರಸ್ತೆ, ಎಂದು ಹೆಸರನ್ನು ಇಟ್ಟಿದ್ದಾರೆ ಎಂದು ಹೇಳಿದ್ದಾರೆ. ಅಧ್ಯಕ್ಷರೇ, ಈ ರಸ್ತೆಗೆ ಅಂಗಡಿಗಳನ್ನು ಕಟ್ಟಿಸಬೇಕು ಎಂದು ಸಿ.ಐ.ಟಿ.ಬಿ. ಯವರು ಕಾರ್ಯವನ್ನು ನಡೆಸಿದ್ದಾರೆನ್ನುವುದನ್ನು ಅವರೂ ಒಪ್ಪಿದ್ದಾರೆ. ಸಿ.ಐ.ಟಿ.ಬಿ ಯವರಿಗೆ ಇರತಕ್ಕಂಥ ಅಧಿಕಾರದಲ್ಲಿ ಅವರು ಆ ಹೆಸರನ್ನು ಆ ರಸ್ತೆಗೆ ಕೊಟ್ಟಿದ್ದಾರೆ ಅದನ್ನು ನೋಡಿ ಇವರಿಗೆ ಏಕೆ ಸಹನೆಯಾಗಲಿಲ್ಲವೋ ನನಗೆ ಗೊತ್ತಿಲ್ಲ. ಅದೇರೀತಿ ಮಂಡ್ಯದ ಬಂದೀಗೌಡರ ಲೇಔಟ್‌ಗೆ ಶ್ರೀ ದೇವರಾಜ್ ಅರಸ್‌ರವರ ಹೆಸರನ್ನು ಇಟ್ಟಿದ್ದಾರೆ ಎಂದು ಹೇಳಿದ್ದಾರೆ ಮತ್ತು ಬಂದೀಗೌಡರ ಇತಿಹಾಸವನ್ನೂ ಸಹ ಅವರು ಹೇಳಿದ್ದಾರೆ. ಅದಕ್ಕೆ ವ್ಯತಿರಿಕ್ತವಾಗಿ ನಾನು ಹೇಳುವುದಕ್ಕೆ ಬಯಸುವುದಿಲ್ಲ. ಅದನ್ನು ಮಾನ್ಯ ಪುಟ್ಟಸ್ವಾಮಿಯವರೇ ತಿಳಿದುಕೊಳ್ಳಬೇಕು. ಈ ಬಗ್ಗೆ ಸರ್ಕಾರಕ್ಕೆ ಯಾವ ಪ್ರಪೋಸಲ್ ಬಂದಿಲ್ಲ ಅಲ್ಲಿ ಪಾಪುಲರ್ ಕೌನ್ಸಿಲ್ ಇದೆ, ಅಡ್ಮಿನಿಸ್ಟ್ರೇಟರ್ ಇಲ್ಲ ಒಂದುವೇಳೆ ಆ ಕೌನ್ಸಿಲ್‌ನವರು ಮೆಚ್ಚುಗೆ ವ್ಯಕ್ತಮಾಡುವುದಕ್ಕಾಗಿ ಆರೀತಿ ಕೊಟ್ಟಿದ್ದರೆ ಇವರಿಗೆ ಅಸಹನೆ ಏಕೆ ಆಯಿತೋ ಗೊತ್ತಾಗಲಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ —ಶ್ರೀ ಬಂದೀಗೌಡರ ಹೆಸರನ್ನು ತೆಗೆದದ್ದು ತಪ್ಪು.

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಸದಸ್ಯರು ಶಾಂತರೀತಿಯಿಂದ ಕೇಳಬೇಕು. ಅದರ ಬಗ್ಗೆ ಸರ್ಕಾರಕ್ಕೆ ಪ್ರಪೋಸಲ್ ಬಂದಿಲ್ಲ ಎಂದು ಹೇಳುತ್ತಿದ್ದೇನೆ. ಮಾನ್ಯ ಕೆ. ಪುಟ್ಟಸ್ವಾಮಿಯವರು ಭಾಷಣವನ್ನು ನಾನು ಸಂಪೂರ್ಣವಾಗಿ ಕೇಳಿದ್ದೇನೆ. ಅವರು ನನ್ನ ಉಡುಪಿನ ಬಗ್ಗೆ ಹೇಳಿದ್ದಾರೆ, ನಾನು ಅವರ ಬಗ್ಗೆ ಹೇಳುವುದಾದರೆ, ಅವರೇನೂ ಕಡಿಮೆ ಡ್ರೆಸ್ ಮಾಡುತ್ತಾ ಇಲ್ಲ, ಈ ವಯಸ್ಸಿನಲ್ಲಿ. ನೆಹರೂ ಜುಬ್ಬ ಹಾಕುತ್ತಾರೆ. ಕಲರ್ ಕಲರ್ ಸೂಟ್ ಹಾಕುತ್ತಾರೆ. ಹಾಗಿದ್ದ ಪಕ್ಷದಲ್ಲಿ ಇವರು ಪ್ರಜಾ ಪ್ರಭುತ್ವದೊಳಗೆ ಸರಿಸಮಾನರಲ್ಲ ಎಂದು ಹೇಳುವ ಅಸಹನೆ ಏಕ ಬಂತೋ ಗೊತ್ತಾಗಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನೀವಿಬ್ಬರೂ ಪ್ರಜಾಪ್ರಭುತ್ವದಲ್ಲಿ ಸರಿಸಮಾನರು ಎಂದು ಕಲರ್ ಸೂಟುಗಳನ್ನು ಧರಿಸುವುದರಿಂದ ನಿರ್ಣಯ ಮಾಡಬೇಕೇ.

ಶ್ರೀ ಡಿ. ಕೆ. ನಾಯ್ಕರ್.—ಅದು ಆಡುವಂಥ ಭಾಷೆಯಲ್ಲ, ಒಂದುರೀತಿಯಲ್ಲಿ ಮೆಚ್ಚುಗೆ ಪಡಬೇಕಾಗಿದೆ. ಅವರು ಇಲ್ಲಿ ಮೊನ್ನೆಮೊನ್ನೆವರೆಗೂ ಕಾಂಗ್ರೆಸ್ ಪಕ್ಷದಲ್ಲಿದ್ದರು, ಹಿಂದೆ ಮಂತ್ರಿಯಾಗಿದ್ದರು. ಈ ಕಡೆಯಿಂದ ಆ ಕಡೆ ಹೋದಮೇಲೆ ವಿರೋಧಪಕ್ಷದವರು ಭಾಷಣ ಮಾಡುವಂಥ ಧಾಟಿಯನ್ನು ತೀವ್ರ ಹಿಡಿದುಕೊಂಡುಬಿಟ್ಟರಲ್ಲ ಎಂದು ನನಗೆ ಆಶ್ಚರ್ಯವಾಗುತ್ತಾ ಇದೆ. ಆದುದರಿಂದ ಈ ಬಗ್ಗೆ ನಾನು ನಿಜವಾಗಲೂ ಮೆಚ್ಚುಗೆ ಪಡಬೇಕಾಗಿದೆ ಮತ್ತು ಇನ್ನೊಂದು ತರಹ ಹೇಳುವುದಾದರೆ. ಮಾನ್ಯ ಕೆ. ಪುಟ್ಟಸ್ವಾಮಿಯವರು ಪೌರಾಡಳಿತ ಮಂತ್ರಿಯಾಗಿದ್ದಾಗ ನೀರು ಸರಬರಾಜು ಯೋಜನೆ ಮಂಡಲಿಯನ್ನು ಇವರು ರಚನೆ ಮಾಡಲಿಲ್ಲ. ಅವರಿಗೆ ಗೊತ್ತಿದೆ, ನಗರ ಸಭೆಗಳಿಗೆ ಸರ್ಕಾರದ ಹಣದಿಂದ ಸರಿಯಾಗಿ ನೀರು ಪೂರೈಕೆಯಾಗದೇ ಇದ್ದುದರಿಂದ ಬ್ಯಾಂಕಿಂಗ್ ಏಜೆನ್ಸಿಯಿಂದ ಹಣ ಪಡೆದು ನೀರುಸರಬರಾಯಿ ಯೋಜನೆಯನ್ನು ತೀವ್ರಗತಿಯಿಂದ ಮಾಡಬೇಕು ಎಂದು ಸರ್ಕಾರ ಯೋಜನೆ ಹಾಕಿಕೊಂಡಾಗ ಇದೇ ಸದನ ಒಪ್ಪಿಗೆ ಕೊಟ್ಟಿದೆ. ಹೀಗೆ ತೀವ್ರಗತಿಯಲ್ಲಿ ಬಹಳ ತ್ವರಿತವಾಗಿ ಜನರಿಗೆ ನೀರು ಸರಬರಾಜು ಮಾಡುವಂತಹ ಬೋರ್ಡನ್ನು ಇವರ ಕಾಲದಲ್ಲಿ ರಚನೆ ಮಾಡಲಿಕ್ಕಾಗಲಿಲ್ಲ. ಅದನ್ನು ನೀವು ಮಾಡಬೇಡಿ ಎಂದು ಯಾರೂ ಹೇಳಿಲ್ಲವಲ್ಲಾ. ಅದನ್ನು ನೀವೇ ಮಾಡಿ ಶಾಬಾಸ್‌ಗಿರಿ ಪಡೆದುಕೊಳ್ಳಬಹುದಿತ್ತಲ್ಲ. ಅವರ ಕಾಲದಲ್ಲಿ ಅದು

ಆಗಲಿಲ್ಲವೆಂದು ನಾನು ಅವರಿಗೆ ಅಸಹಕಾರ ಮಾಡುತ್ತಾ ಇಲ್ಲ. ಅದು ಅವರಿಗೆ ಗೊತ್ತಿದೆ. ಮೈಸೂರಿನ ನೀರು ಸರಬರಾಜು ಯೋಜನೆಯ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಇದೇ ಸದನದಲ್ಲಿ ಮಾನ್ಯ ಪುಟ್ಟಸ್ವಾಮಿಯವರೇ ಹಿಂದೆ ನಾಲಾದಿಂದ ನೀರನ್ನು ತೆಗೆದುಕೊಂಡು ಬರುವಂತೆ ಮಾಡುತ್ತೇವೆಂದು ಹೇಳಿದ್ದರು. ಆ ಕಾರ್ಯವಾಗದೇ ಇದ್ದುದರಿಂದ ಈಗ ನಾಲಾದಲ್ಲಿ ನೀರು ಬತ್ತಿಹೋದಾಗ ಆ ನದಿಯ ತಳಕ್ಕೆ ಹೋಗಿ ಬಾವಿಯಿಂದ ನೀರನ್ನು ತರುವ ಹಾಗೆ ಮಾಡಿಕೊಟ್ಟಿದ್ದೇವೆ. ಅವರೂ ಮೈಸೂರಿನ ಜನರಿಂದ ತುಂಬಾ ಮೆಚ್ಚುಗೆಯನ್ನು ಪಡೆದಿದ್ದಾರೆ.

SRI K. PUTTASWAMY.—The estimate was sanctioned in 1968 but it has remained unexecuted for 7 years

ಶ್ರೀ ಡಿ. ಕೆ. ನಾಯ್ಕರ್.—1968ರಲ್ಲಿ ತಾವೇ ಮಂತ್ರಿಯಾಗಿದ್ದರಲ್ಲ, ಆಗಲೇ ಅದನ್ನು ಮಾಡಬಹುದಾಗಿತ್ತು. ಅದನ್ನು ಆಗ ನೀವೇ ಮಾಡಲಿಲ್ಲ.

SRI K. PUTTASWAMY.—I had sanctioned the estimate in December 1968, but it had remained unexecuted till 1974. The Hon'ble Minister is going on insufficient facts. He must refresh his memory and then reply.

ಶ್ರೀ ಡಿ. ಕೆ. ನಾಯ್ಕರ್.—ಅಧ್ಯಕ್ಷರೇ, ತಮ್ಮ ಮುಖೇನ ಮಾನ್ಯ ಸದಸ್ಯರಿಗೆ ನಾನು ಬೇಡಿಕೊಳ್ಳುವುದು ಇಷ್ಟೇ. ನಿನ್ನೆ ಮಾನ್ಯ ಸದಸ್ಯರು ಮಾತನಾಡುವಾಗ ನಾನು ತುಟಿ ಬಿಚ್ಚದೆ ಕುಳಿತಿದ್ದೆ. ಇವತ್ತು ನಾನು ಮಾತನಾಡುವಾಗ ಇವರಿಗೆ ಏಕೆ ಇಷ್ಟು ಹೊಟ್ಟೆಉರಿ ಬರುತ್ತದೋ ಅದು ನನಗೆ ಗೊತ್ತಿಲ್ಲ. ಪ್ರಜಾಸತ್ತೆಗೆ ದಮನಕಾರಿ, ಹಾಗೂ ವಿರೋಧಿಪಟುವಾಗಿರಲು ನನಗೆ ಸಾಧ್ಯವಿಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಬೆಂಗಳೂರು, ಹುಬ್ಬಳ್ಳಿ-ಧಾರವಾಡ ಮತ್ತು ಮೈಸೂರು ನಗರಗಳಲ್ಲಿ ಚುನಾಯಿತ ಪ್ರತಿನಿಧಿಗಳಿರುವ ನಗರಸಭೆಗಳು ಇಲ್ಲವೆಂದು ಹೇಳಿದ್ದಾರೆ. ಅದರ ಬಗ್ಗೆ ಏನೋ ವ್ಯತ್ಯಾಸವಿದೆಯೆಂದು ಅವರ ಭಾಷಣದಲ್ಲಿಯೇ ಹೇಳಿದ್ದಾರೆ. ಈ ಪುರಸಭೆಯವರು ಈಗ ತ್ರಾಹಿ, ತ್ರಾಹಿ ಎಂದು ಹೇಳಿದಂತೆ ಬೇರೆಯವರು ಬಂದು ನಮಗೆ ಹೇಳಲಿಲ್ಲವೆಂದು ನಾಯ್ಕರ್ ಅವರು ಅಧಿಕಾರದ ಆಶೆಯಿಂದ ಕೆಲವು ನಗರಸಭೆಗಳನ್ನು ತೆಗೆದು ಹಾಕಿ ಆಡಳಿತಾಧಿಕಾರಿಯನ್ನು ನೇಮಿಸಿದ್ದಾರೆಂದು ಹೇಳಿದ್ದಾರೆ. ಮೈಸೂರು ನಗರಸಭೆಯನ್ನು ನಾನು ತೆಗೆಯಲಿಲ್ಲ. ಈ ಖಾತೆಯನ್ನು ನಾನು ವಹಿಸಿಕೊಂಡಿದ್ದು 1973ನೇ ಡಿಸೆಂಬರ್ ತಿಂಗಳು. ಅದಕ್ಕೆ ಪೂರ್ವದಲ್ಲಿಯೇ ಮುನಿಸಿಪಾಲಿಟಿ ಅಡ್ಮಿನಿಸ್ಟ್ರೇಟರ್ ಅವರ ವಶಕ್ಕೆ ಬಂತು. ಆದ್ದರಿಂದ ನಾನು ತ್ರಾಹಿ, ತ್ರಾಹಿ ಎಂದು ಅವರ ಹಾಗೆ ಮಾಡಿದವನಲ್ಲ. ಮೊನ್ನೆ ಮಾನ್ಯಶ್ರೀ ಕೆ. ಪುಟ್ಟಸ್ವಾಮಿಯವರೇ ಸೂಪರ್‌ಸಿಷನ್ ಮಾಡುವ ಪವರ್ ಸರ್ಕಾರಕ್ಕೆ ಇರಬೇಕೆಂದು ಒಪ್ಪಿಕೊಂಡಿದ್ದಾರೆ. 1964ನೇ ಇಸವಿಯಲ್ಲಿ ಮುನಿಸಿಪಾಲಿಟಿ ಆಕ್ಟನ್ನು ಅವರೇ ಮಾಡಿದ್ದಾರೆ. ಅದರಲ್ಲಿ ಈ ರೀತಿ ಸೂಪರ್‌ಸೀಡ್ ಮಾಡುವಂತಹ ಅಧಿಕಾರವನ್ನು ಹಾಕಿದವರೂ ಅವರೆ. ಅಂದಮೇಲೆ ಮಾನ್ಯ ಶ್ರೀ ಪುಟ್ಟಸ್ವಾಮಿಯವರು ಮುನಿಸಿಪಲ್ ಶಾಖೆಯ ಮಂತ್ರಿ ಪದವಿಯನ್ನು ವಹಿಸಿಕೊಂಡಿದ್ದಾಗಲೇ ಮುಳಬಾಗಿಲು, ಶಿರಾಳಕೊಪ್ಪ, ಸೌಂದತ್ತಿ, ಅಥಣಿ, ರಾಣೆಬೆನ್ನೂರು ಮುನಿಸಿಪಾಲಿಟಿಗಳನ್ನು ಸೂಪರ್‌ಸೀಡ್ ಮಾಡಿದ್ದಾರೆ. ಹಾಗಾದರೆ ಇವರು ಅವುಗಳ ಮೇಲೆ ಸೂಪರ್‌ಸೀಡ್ ಮಾಡುವಂತಹ ಅಧಿಕಾರವನ್ನು ಆಗಿನ ಕಾನೂನು ಪ್ರಕಾರ ಹೊಂದಿದ್ದಾಗ ಆ ಪ್ರಕಾರ ಕಾನೂನನ್ನು ಅಳವಡಿಸಿಕೊಂಡಿರುವುದರಿಂದ ಇವರಲ್ಲಿ ತ್ರಾಹಿ, ತ್ರಾಹಿ ಎಂದು ಯಾರೂ ಆಗ ಬಂದಿರಲಿಲ್ಲವೇ ? ಅವರ ಅಧಿಕಾರದ ಅವಧಿಯಲ್ಲಿ ಅವರೇ ಆ ರೀತಿಯಾಗಿ ಮಾಡಿರುವುದರಿಂದ ಅವರಿಗೆ ನಾನು ಪ್ರಜಾಸತ್ತೆ ದಮನಕಾರಿ ಎಂಬುದಾಗಿ ಈಗ ಹೇಳಬೇಕಾಗುತ್ತದೆ. ಆದ್ದರಿಂದ ಅವರವಾದ ಸರಿಯಾದ ವಾದವಲ್ಲ. ಮಾನ್ಯ ಶ್ರೀ ಕೆ. ಪುಟ್ಟಸ್ವಾಮಿಯವರಂತಹ ಅನುಭವಿಕರು ಮಾತನಾಡುವಂತಹ ಶಬ್ದಗಳು ಅಲ್ಲವೆಂದು ನಾನು ಹೇಳುತ್ತೇನೆ. ಎಲ್ಲಿ ದಕ್ಷ ಆಡಳಿತ ನಡೆಯುತ್ತಿಲ್ಲ ಎಲ್ಲಿ ಸಾರ್ವಜನಿಕರಿಗೆ ಸರಿಯಾದ ಸಿವಿಕ್ ಅಮಿನಿಟೀಸ್ ಕೊಡುತ್ತಾ ಇಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಾಗ, ಅದಕ್ಕೆ ಒಂದು

ಪ್ರೊಸೀಜರ್ ಅನುಸರಿಸಿ, ಒಂದು ವೇಳೆ ಏನಾದರೂ ಯಾರ ಬಗ್ಗೆಯಾದರೂ ಅಲಿಗೇಷನ್ ಬಂದರೆ ಅವರನ್ನು ಮೊದಲು ವಿಚಾರಣೆಗಾಗಿ ಕಳುಹಿಸಬೇಕು. ಡಿವಿಜನ್ ಮಟ್ಟದಲ್ಲಿಯೂ ಅಧಿಕಾರಿಗಳ ಬಗ್ಗೆ ವಿಚಾರಣೆ ಮಾಡಬೇಕು. ಚಾರ್ಜಸ್ ಪ್ರೂವ್ ಆದಾಗ ಅದರ ಬಗ್ಗೆ ಅಮೆಂಡ್‌ಮೆಂಟ್ ಮಾಡಿದಾಗ ಸೂಪರ್‌ಸೀಡ್ ಮಾಡಿರುವ ನಿದರ್ಶನಗಳೂ ಉಂಟು ಹಾಗಿರುವಾಗ ಈ ಒಂದು ವಿಷಯದಲ್ಲಿ ಅದರಲ್ಲಿರುವಂತಹ ಚಾರ್ಜಸ್ ಪ್ರೂವ್ ಆಗುವುದಿಲ್ಲವೆಂದು ಅದಕ್ಕೆ ಸಂಬಂಧಪಟ್ಟವರು ಅದಕ್ಕೆ ಬದ್ಧರಾದರೆ ಹೈಕೋರ್ಟಿನಲ್ಲಿ ಅದನ್ನು ಚಾಲೆಂಜ್ ಮಾಡುವ ಅಧಿಕಾರವೂ ಕೂಡ ಅದರಲ್ಲಿದೆ. ಅದನ್ನು ಒಂದು ಒಳ್ಳೆಯ ಉದ್ದೇಶಕ್ಕಾಗಿಯೇ ಮಾಡಿದ್ದಾರೆಯೇ ಹೊರತು ಅಧಿಕಾರದ ದಾಹಕ್ಕಾಗಿ ಅಲ್ಲ ಎಂಬುದನ್ನು ಮಾನ್ಯ ಸದಸ್ಯರು ಒಪ್ಪುತ್ತಾರೆಂದು ನನಗನ್ನಿಸುತ್ತದೆ. ನನ್ನ ಬಗ್ಗೆ ಅನೇಕ ಟೀಕೆಗಳನ್ನು ಮಾನ್ಯ ಸದಸ್ಯರಾದ ಶ್ರೀ ಎಂ. ಎಸ್. ಕೃಷ್ಣನ್ ಅವರು ಹಾಗೂ ಶ್ರೀ ಸತ್ಯನಾರಾಯಣಸಿಂಗ್ ಅವರು, ಇನ್ನೂ ಇತರರೂ ಮಾಡಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಇಷ್ಟೊಂದು ಮುನಿಸಿಪಾಲಿಟಿಗಳನ್ನು ಸೂಪರ್‌ಸೀಡ್ ಮಾಡಿದ್ದು ತಮ್ಮ ಕಾಲದಲ್ಲಿ ಅಲ್ಲವೇ ?

ಶ್ರೀ ಡಿ ಕೆ. ನಾಯ್ಕರ್.—ರಾಜಕೀಯವಾಗಿ ನಾವು ಸೂಪರ್‌ಸೀಡ್ ಮಾಡಿದ್ದೇವೆಂದು ಕೆಲವರು ಹೇಳಿದ್ದಾರೆ. ಎಲ್ಲಾ ಮುನಿಸಿಪಾಲಿಟಿಗಳಿಗೂ ಎಷ್ಟು ಮಾಡಬೇಕೋ ಅಷ್ಟನ್ನು ಮಾಡಿ ಮುಗಿಸಿದ್ದಾರೆಂದೂ ಸಹ ಹೇಳಿದ್ದಾರೆ. ಆ ದೃಷ್ಟಿಯ ಬಗ್ಗೆ ಮಾನ್ಯ ಸದಸ್ಯರ ಗಮನವನ್ನು ನಾನು ಈಗ ತಮ್ಮ ಮುಖಾಂತರ ಸೆಳೆಯುತ್ತೇನೆ. ನಮ್ಮ ರಾಜ್ಯದಲ್ಲಿ 16 ಮುನಿಸಿಪಾಲಿಟಿಗಳು ಮಾತ್ರ ಸೂಪರ್‌ಸೀಡ್ ಆಗಿವೆ. 26 ಮುನಿಸಿಪಾಲಿಟಿಗಳಲ್ಲಿ ಟರ್ಮ್ ಎಕ್ಸ್‌ಪೈರಾಗಿ ಆಡಳಿತಾಧಿಕಾರಿಗಳನ್ನು ನೇಮಿಸಿದ್ದೇವೆ. ಒಟ್ಟು 42 ಮುನಿಸಿಪಾಲಿಟಿಗಳಗಲ್ಲಿ ಚುನಾಯಿತ ಪ್ರತಿನಿಧಿಗಳ ಆಡಳಿತವಿಲ್ಲ. ಸದ್ಯಕ್ಕೆ ಈಗ 187 ಮುನಿಸಿಪಾಲಿಟಿಗಳಲ್ಲಿ ಪಾಪ್ಯುಲರ್ ಕೌನ್ಸಿಲ್‌ಗೂ ಕೆಲಸ ಮಾಡುತ್ತಿದ್ದಾರೆ, ನಮಗೆ ಪ್ರಜಾಪ್ರಭುತ್ವದ ಬಗ್ಗೆ ಅನುಮಾನವಿದೆಯೆಂದೂ ಹೇಳಿದ್ದಾರೆ. ನನ್ನ ಮೇಲೆ ಆ ರೀತಿ ಹೇಳುವ ಹಕ್ಕು ಮಾನ್ಯ ಶ್ರೀ ಪುಟ್ಟಸ್ವಾಮಿಯವರಿಗಿಲ್ಲವೆಂಬುದಾಗಿ ನಾನು ಸ್ಪಷ್ಟವಾಗಿ ಹೇಳುತ್ತೇನೆ. ಏಕೆಂದರೆ ಅವರೆ 1964ರಲ್ಲಿ ಮಂತ್ರಿಯಾಗಿದ್ದ ಕಾಲದಲ್ಲಿ ಒಂದು ಕಾನೂನನ್ನು ತಂದಿದ್ದಾರೆ. 1932ನೇ ಇಸವಿಯಲ್ಲಿದ್ದಂತಹ ಪುರಸಭೆಗಳ ಅಧಿಕಾರವನ್ನು ಹಾಗೂ 1952ನೇ ಇಸವಿಯಲ್ಲಿದ್ದಂಥ ಅಧಿಕಾರವನ್ನೂ ನೋಡಿ, 1964ರಲ್ಲಿ ಆಯಾ ಮುನಿಸಿಪಾಲಿಟಿಗಳ ಕಮೀಷನರ್‌ಗೆ ಹೆಚ್ಚಿನ ಅಧಿಕಾರ ಪುರಸಭೆಗಳಿಗೆ ಕೊಟ್ಟಿದ್ದಾರೆ ಹಾಗೆ ಪುರಸಭೆಗಳು ಕಮೀಷನರ್‌ಗಿಂತ ಹೆಚ್ಚಿನ ಅಧಿಕಾರ ಪಡೆಯದೇ ಇದ್ದುದರಿಂದ ಅದರ ಒಂದು ಶ್ರೇಯಸ್ಸನ್ನು ಶ್ರೀ ಪುಟ್ಟಸ್ವಾಮಿಯವರಿಗೇ ಕೊಡಬೇಕಾಗುತ್ತದೆ. ನಂತರ 1976ರಲ್ಲಿ ಈ ಕಾನೂನಿಗೆ ಒಂದು ತಿದ್ದುಪಡಿ ತಂದು ಅವರಿಗೆ ಹೆಚ್ಚಿನ ಅಧಿಕಾರವನ್ನು ಒದಗಿಸಿಕೊಟ್ಟಿದ್ದೇನೆ. ಅದನ್ನು ಈ ಸದನವೇ ಒಪ್ಪಿದೆ.

ಇನ್ನು ಪುರಸಭೆಗಳ ಬಗ್ಗೆ ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಶ್ರೀ ಪುಟ್ಟಸ್ವಾಮಿಯವರು ನನ ಬಗ್ಗೆ ಪ್ರಜಾಪ್ರಭುತ್ವ ಸರಿಯಾಗಿ ನೋಡುತ್ತಿಲ್ಲ, ದಮನಕಾರಿ ಎಂಬ ಮಾತುಗಳನ್ನು ಹೇಳಿದ್ದಾರೆ. 1973ನೇ ಡಿಸೆಂಬರ್‌ನಲ್ಲಿ ನಾನು ಈ ಖಾತೆಯ ಚಾರ್ಜ್ ತೆಗೆದುಕೊಂಡಾಗಲೇ 8-2-1974ರಲ್ಲಿ ಎಲೆಕ್ಷನ್ ಮಾಡಬೇಕೆಂದು ಒಂದು ಸರ್ಕ್ಯುಲರ್‌ನ್ನು ಹೊರಡಿಸಿದ್ದಾಗಿದೆ. ಅದಾದನಂತರ ಸುಮಾರು 72 ಮುನಿಸಿಪಾಲಿಟಿಗಳು ಆಗ ಯಾವ ಯಾವುವು ಡ್ಯೂ ಇದ್ದವೋ ಅವುಗಳಿಗೆ ಚುನಾವಣೆ ಮಾಡಲಾಯಿತು. ಪೋಸ್ಟ್‌ಪೋನ್‌ಮೆಂಟ್ ಆಫ್ ಎಲೆಕ್ಷನ್ ಆಕ್ಟ್ ಜಾರಿಗೆ ಬಂದ ಪ್ರಕಾರ ಎಲೆಕ್ಷನ್ ಜುಲೈ 10 ರಂದು ಮುಂದೂಡಿದ್ದಾರೆ. ಅಂದಮೇಲೆ ಇಲ್ಲಿಯವರೆಗೆ ಈಗಾಗಲೇ 72 ಮುನಿಸಿಪಾಲಿಟಿಗಳ ಎಲೆಕ್ಷನ್ ಮಾಡಿದ್ದೇವೆ. ಅಂದಮೇಲೆ ನಾನು ಪ್ರಜಾಪ್ರಭುತ್ವಕ್ಕೆ ದಮನಕಾರಿ ಎಂದು ಹೇಳಿದರೆ ಹೇಗೆ ? 72ರಲ್ಲಿ ಎಮರ್ಜೆನ್ಸಿ ಬಂದದ್ದರಿಂದ ಜುಲೈನಲ್ಲಿ ಎಲೆಕ್ಷನ್ ಆಗಲಿಲ್ಲ. ಈ ಸಂಬಂಧವಾಗಿ ಒಂದೊಂದು ವಿಷಯವನ್ನೂ ತಮ್ಮ ಜ್ಞಾಪಕಕ್ಕೆ ತರಬಯಸುತ್ತೇನೆ. ಈಗ ಮಾನ್ಯ ಶ್ರೀ ಪುಟ್ಟಸ್ವಾಮಿಯವರು ಗುಲ್ಬರ್ಗ ಮತ್ತು ರಾಯಚೂರ್ ಜಿಲ್ಲೆಗಳನ್ನು ಉದಾಹರಣೆಯಾಗಿ ಕೊಟ್ಟಿದ್ದಾರೆ. ಅವುಗಳ ಬಗ್ಗೆ ವರದಿ ಕೊಟ್ಟು 4½ ವರ್ಷವಾಯಿತು ಎಂದೂ, ಅವರ ರಿಪೋರ್ಟ್‌ನಲ್ಲಿ ಅದನು ಮೆನ್‌ಷನ್ ಮಾಡಿದ್ದೇನೆಂದೂ ಹೇಳಿದ್ದಾರೆ.

ನಾನು ಸತ್ಯಸಂಗತಿಯನ್ನು ಕೊಟ್ಟಿದ್ದಕ್ಕಾಗಿ ನಾಚಿಕೆ ಪಡಬೇಕೇ ಎಂದು ಚಿಂತನೆಗೆ ಒಳಗಾಗಿದ್ದೇನೆ. ಗುಲ್ಬರ್ಗಾಕ್ಕೆ ನಾನು ಅಧಿಕಾರಕ್ಕೆ ಬರುವುದಕ್ಕೆ ಮೊದಲು 1974ರಲ್ಲಿ ಎಲೆಕ್ಷನ್ ಆರ್ಡರ್ ಕೊಟ್ಟಾಗ ಅದು ಹೈಕೋರ್ಟಿಗೆ ಹೋಗಿ ಸ್ಟೇ ಬಂದಿದೆ. ಗುಲ್ಬರ್ಗಾದಲ್ಲಿ ಎಲೆಕ್ಷನ್ ಆಗಲಿಲ್ಲ ನಿಜ. ನಿಜ ಸಂಗತಿಯನ್ನು ನಿಜವಾಗಿಯೇ ಇರುವ ರೀತಿಯಲ್ಲಿ ಹೇಳಿದ್ದೇನೆ. ಇದರಿಂದ ನಾಚಿಕೆ ಯಾರಿಗೆ ಬರಬೇಕೆಂದು ಕೇಳುತ್ತೇನೆ. ಮಾನ್ಯ ಪುಟ್ಟಸ್ವಾಮಿಯವರು ಕೆಲವೊಂದು ಮುನಿಸಿಪಲ್ ಆಕ್ಟ್‌ಗಳ ಮೇಲೆ ಮತ್ತು ಪ್ರಾವಿಷನ್‌ಗಳ ಮೇಲೆ ಭಾಷಣ ಮಾಡಿದ್ದಾರೆ. ಇನ್ನು ಪ್ರಾಪರ್ಟಿ ಟ್ಯಾಕ್ಸ್ ಮತ್ತು ಡಿವಿಜನ್‌ಗಳ ಬಗ್ಗೆ ಮತ್ತು ಕ್ವಾಲಿಫಿಕೇಷನ್ ಬಗ್ಗೆಯೂ ಕೂಡ ಮಾತನಾಡಿದ್ದಾರೆ. ನನಗೆ ತಿಳಿದ ಮಟ್ಟಿಗೆ ಇದು ಬಡ್ಜೆಟ್ ಮೇಲೆ ಹಾಗೆ ಮಾಡಲು ಬರುತ್ತದೆಯೋ ಇಲ್ಲವೋ ಗೊತ್ತಿಲ್ಲ. ಮುನಿಸಿಪಲ್ ಕಾಯಿದೆಯ ಮೇಲೆ ಮಾತನಾಡುವಾಗ ಟೀಕೆ ಮಾಡಿದ ಹಾಗೆ ಈಗ ಬಜೆಟ್ ಬಂದಾಗ ಟೀಕೆ ಮಾಡುವುದಕ್ಕೆ ಇವರಿಗೆ ಅಧಿಕಾರ ಏನೂ ಉಳಿದಿಲ್ಲ. ಈ ಸದನ ಅಂತಹ ಬಿಲ್ಲನ್ನು ಪಾಸು ಮಾಡಿದೆ ಅದು ಆಕ್ಟ್ ಆಗಿದೆ. ಅದನ್ನು ಇಂಪ್ಲಿಮೆಂಟ್ ಮಾಡುವಂತಹ ಕರ್ತವ್ಯ ನನ್ನದು ಅಷ್ಟೆ. ಆದರೂ ಕೂಡ ಸಮಯಕ್ಕೆ ಮತ್ತು ಸಂದರ್ಭಕ್ಕೆ ಅನುಗುಣವಾಗಿ ಉತ್ತರಕೊಡುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೇ, ಮಾನ್ಯ ಪುಟ್ಟಸ್ವಾಮಿಯವರು ಮೈಸೂರಿಗೆ ಕಾರ್ಪೊರೇಷನ್ ಎಂದು ಆಗಬೇಕೆಂದು ಇಚ್ಛೆಪಟ್ಟವರಲ್ಲಿ ನಾನೂ ಒಬ್ಬ ಎಂದು ಹೇಳಿ, ಈಗ ಅದು ಕಾರ್ಪೊರೇಷನ್ ಎಂದು ಆದಮೇಲೆ, ಇದು ವರದಾನವಲ್ಲ ಶಾಪವೆಂದು ಹೇಳಿದ್ದರಲ್ಲಿ ಏನು ಅರ್ಥವಿದೆ ? ಮಾನ್ಯ ಅಧ್ಯಕ್ಷರೇ, ಇದನ್ನು ಜನತೆ ಬೇಕು ಎಂದು ಹೇಳಿದ ಮೇಲೆ ಮಾಡಿದ್ದೇವೆ. ಇದರ ಬಗ್ಗೆ ಸಾಕಷ್ಟು ಜನರು ಪ್ರಶಂಸನೀಯವಾಗಿ ಹೇಳಿದ್ದಾರೆ. ಮಾನ್ಯ ಸದಸ್ಯರಾದಂತಹ ಪುಟ್ಟಸ್ವಾಮಿಯವರು ಕಾರ್ಪೊರೇಷನ್ ಆಗಬೇಕು ಎಂಬುವರಲ್ಲಿ ತಾವೂ ಒಬ್ಬರು ಎಂದು ಒಪ್ಪಿದ್ದಾರೆ.

3-00 ಪಿ ಎಂ.

ಶ್ರೀ ಎಂ. ಎಸ್. ಕೃಷ್ಣನ್.—ಕಾನೂನು ಪ್ರಕಾರ ಏನೇನು ಅನುಕೂಲ ಬೇಕೋ ಅದನ್ನು ಮಾಡಬೇಕೆಂದು ಹೇಳಿರುತ್ತಾರೆ. ತಾವು ಅದನ್ನು ಟ್ವಿಸ್ಟ್ ಮಾಡಿ ಏತಕ್ಕೆ ಹೇಳುತ್ತೀರಿ? ದಯಮಾಡಿ ಟ್ವಿಸ್ಟ್ ಮಾಡಬೇಡಿ.

ಶ್ರೀ ಡಿ. ಕೆ. ನಾಯ್ಕರ್ —ಒಂದು ಪಾಯಿಂಟ್ ಅದರಲ್ಲಿ ಏನು ಇದೆ ಎಂದರೆ ಶಾಪ ಎಂಬ ಪದವನ್ನು ಅವರು ಏತಕ್ಕೆ ಹೇಳಿದರೆಂದರೆ ಡಿ.ಎ. ಗ್ರಾಂಟ್ ಹೋಗುತ್ತದೆ ಎನ್ನುವ ಸೂಚನೆಯಿಂದ ಅದನ್ನು ಬಿಡಬೇಕಾಗಿತ್ತು ಎನ್ನುವುದು ಅವರ ಅಭಿಪ್ರಾಯ ಇರಬಹುದು. ಆದರೆ ಕಾನೂನಿನಲ್ಲಿ ಗ್ರಾಂಟ್ಸ್ ಅಂತಾ ಇರುತ್ತವೆ. ಡಿ. ಎ. ಗ್ರಾಂಟ್ಸ್ ಅಂತಾ ಇರುವುದಿಲ್ಲ. ಡಿ.ಎ. ಗ್ರಾಂಟ್ ಕಾರ್ಪೊರೇಷನ್ ಅನ್ನುವಂತಹ ಎಕ್ಸಿಕ್ಯೂಟೀವ್ ಆರ್ಡರ್ ಅದಕ್ಕೆ ಕೊಡಬೇಕಾಗುತ್ತದೆ. ಮಾನ್ಯ ಸದಸ್ಯರಿಗೆ ಕೇಳುತ್ತೇನೆ, ಕಾರ್ಪೊರೇಷನ್ ಆಗದಿದ್ದರೆ ಡಿ.ಎ. ಗ್ರಾಂಟ್ ಬಂದುಬಿಡುತ್ತದೆಯೇ? ಇವರ ವಾದ ಏನು ಇದೆ ಇದು ರಾಜಕೀಯವಾಗಿ ಮಾಡತಕ್ಕಂಥಾದ್ದು ಯೋಗ್ಯವಾದುದಲ್ಲ, ಇಂತಹ ತಪ್ಪು ಭಾವನೆ ನೀಡುವಂತಹ ದೃಷ್ಟಿ ಬದಲಾವಣೆಯಾಗಬೇಕೆಂದು ನಾನು ನಮ್ರವಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ಶ್ರೀ ನಾಯ್ಕರ್‌ರವರಲ್ಲಿ ವಕೀಲರಲ್ಲಿ ಇರತಕ್ಕಂಥ ಗುಣ ಇಲ್ಲವೆಂದೋ ಅಥವಾ ಇದೆಯೆಂದೋ ಗೊತ್ತಾಗಲಿಲ್ಲವೆಂದು ಹೇಳಿದ್ದಾರೆ. ದಯಮಾಡಿ ಅವರಲ್ಲಿ ಹೇಳುವುದೇನೆಂದರೆ ಸರ್ವಸಮರ್ಪಕವಾದ ದೃಷ್ಟಿಯಿಂದ ಹೇಳಬೇಕೇ ಹೊರತು ಈ ರೀತಿ ರಾಜಕೀಯವಾಗಿ ಹೇಳುವುದು ಸರಿಯಲ್ಲ. ಕಾರ್ಪೊರೇಷನ್ ಕಾನೂನು ಬರುವಾಗ ನಾನಾ ರೀತಿ ಅನಾನುಕೂಲಗಳು ರಬಹುದು. ಅದರ ಪ್ರಾವಿಷನ್ ಬಗ್ಗೆ ಮಾತನಾಡಿದ್ದಾರೆ. ಅವರು ಹೇಳಿದ್ದನ್ನೆಲ್ಲಾ ಒಪ್ಪಿಕೊಳ್ಳಬೇಕೆಂದು ಏನೂ ಇಲ್ಲ. ನಾವು ಇದಕ್ಕೆ ಒಂದು ಜಾಯಿಂಟ್ ಸೆಲೆಕ್ಟ್ ಕಮಿಟಿಯನ್ನು ಸಹ ಮಾಡಿದ್ದೇವು ಅದರಲ್ಲಿ ಅರಿತ ನುರಿತ ಜನರು ಅಲ್ಲಿ ಇದ್ದರು. ಆ ಜನರು ಸಮಿತಿಯಿಂದ ಏನು ಸಲಹೆಗಳನ್ನು ಕೊಟ್ಟರು ಅದನ್ನೆಲ್ಲಾ ಪರಿಶೀಲನೆಮಾಡಿದ್ದೇವೆ. ಅದರಲ್ಲಿ ಮಾನ್ಯ ಸದಸ್ಯರು ಇರಲಿಲ್ಲ. ಇದ್ದಿದ್ದರೆ ಬಹುಶಃ ಈ ರೀತಿಯ ಟೀಕೆಗಳು ಬರುತ್ತಿರಲಿಲ್ಲವೆಂದು ನನ್ನ ಭಾವನೆ. ಈಗ ನಾನು ಅವರು ಹೇಳಿದ್ದನ್ನು ಅಳವಡಿಸಿಕೊಂಡು ಹೋಗುವಂತಿಲ್ಲ. ಮತ್ತೆ ಜನರಿಗೆ ಕೇಳಲಿಲ್ಲವೆಂದು ಅವರು ಅರ್ಥ ಮಾಡಿಕೊಂಡಿರಬಹುದೋ ಏನೋ ನನಗೆ ಗೊತ್ತಿಲ್ಲ. ಪ್ರಜಾಪ್ರಭುತ್ವದ ಬಗ್ಗೆ ಮಿಯವಾಗಿ ಮಾನ್ಯ ಸ್ನೇಹಿತರು ಹೇಳುತ್ತಿದ್ದಾರೆ. ಇವರು ಮಂತ್ರಿಗಳಾಗಿದ್ದಾಗ, ಕೆಲವು ಪ್ರತಿಷ್ಠಿತ ವ್ಯಕ್ತಿಗಳನ್ನು ಬೆಂಗಳೂರಿನಿಂದ ಕರೆದುಕೊಂಡು ಹೋಗಿದ್ದರೆಂದು ಕೇಳಿದ್ದೇನೆ. ಒಂದು

ಕಾನ್ಸ್ಟಿಟ್ಯೂಯನ್ಸಿಯಲ್ಲಿ ಒಬ್ಬರು ಇರುವುದನ್ನು ಮೂರು ಜನರು ಸದಸ್ಯರು ಇರುವಂತೆ ಮಾಡಿದ್ದಾರೆಂದು ಪ್ರಸ್ತಾಪ ಮಾಡಿದ್ದಾರೆ. ಒಂದು ಡಿವಿಜನ್‌ನಲ್ಲಿ ಸದಸ್ಯನಾಗಬೇಕಾದರೆ ಅವನು ಓಟರ್ ಆಗಿರಬೇಕು ಎಂದು ಮಾಡಿದ್ದೇವೆ ನನಗೆ ತಿಳಿದಮಟ್ಟಿಗೆ ಹೇಳುವುದಾದರೆ ಯಾವ ಕ್ಷೇತ್ರದಲ್ಲಿ ಬಡ ಜನರ ಸೇವೆ ಮಾಡಿಕೊಂಡು ಬಂದಿರುತ್ತಾನೆ ಅವನನ್ನು ಬಿಟ್ಟು ಯಾರೋ ಎಲ್ಲಿಯೋ ಇದ್ದವನನ್ನು ಅಲ್ಲಿಗೆ ನಿಲ್ಲಿಸಿ ಅವನನ್ನು ಉಮೇದುವಾರನಾಗಿ ಮಾಡುವುದು ಸರಿಯೇ ? ಆದ್ದರಿಂದ ಯಾರು ದುರ್ಬಲವರ್ಗದ ಜನರು ಎಲ್ಲಿ ಇರುತ್ತಾರೆ ಅಲ್ಲಿ ಅವರಿಗೆ ಅವಕಾಶವಿದ್ದರೆ ಅನುಕೂಲವೆಂದು ಉದಾರ ಭಾವನೆಯಿಂದ ಹೇಳಿದ್ದೇವೆ. ಜನ ಯಾರೇ ಟೀಕೆ ಮಾಡುವಾಗ ಯೋಗ್ಯವಾದ ಟೀಕೆ ಮತ್ತು ಸಲಹೆಗಳನ್ನು ಮಾಡಬೇಕು. ಪ್ರಜಾಪ್ರಭುತ್ವ ಕೊಲೆಯಾಗಿದೆ ಎಂದು ಹೇಳಿದರೆ ಸರಿಯಾದುದು ಅಲ್ಲ. ಮಾನ್ಯ ಸದಸ್ಯರು ಮಂತ್ರಿಗಳಾಗಿದ್ದಾಗ ಕಾನೂನಿಗೆ ತಿದ್ದುಪಡಿ ಬಂದಿವೆ. ಇದರ ಬಗ್ಗೆ ಒಬ್ಬ ಪ್ರಖ್ಯಾತ ಶಾಸ್ತ್ರಜ್ಞರು "ಲಾ ಈಸ್ ಸೋಷಿಯಲ್ ಅಡ್‌ಜಸ್ಟ್‌ಮೆಂಟ್" ಸಮಯಕ್ಕೆ ಅನುಗುಣವಾಗಿ ಕಾನೂನನ್ನು ಬದಲಾವಣೆ ಮಾಡುವುದು ಅತ್ಯವಶ್ಯಕವೆಂದು ಎಂದು ಹೇಳಿದ್ದಾರೆ. ನನಗೆ ಈಗ ಭಾವನೆ ಬರುತ್ತಾ ಇರುವುದು ಏನೆಂದರೆ ಮಾನ್ಯ ಸದಸ್ಯರು ಜನತಾ ಪಕ್ಷದಲ್ಲಿರುವುದರಿಂದ ಕೂಡಲೇ ಮಂತ್ರಿಯಾಗಬಹುದು ಎಂದು ಒಂದು ರೀತಿಯ ಚಳುವಳಿ ಹೂಡಿದ್ದಾರೋ ಏನೋ. ಮಾನ್ಯ ಅಧ್ಯಕ್ಷರೇ, ಇಂತಹ ವಾದವನ್ನು ಯಾವರೀತಿಯಿಂದ ಮಾಡಿದ್ದಾರೆನ್ನುವುದನ್ನು ಈ ಸದನದ ಮುಂದೆ ತರಬಯಸುತ್ತೇನೆ. ಇನ್ನು ಪ್ರಾಪರ್ಟಿ ಟ್ಯಾಕ್ಸ್ ಬಗ್ಗೆ ಮಾನ್ಯ ಪುಟ್ಟಸ್ವಾಮಿಯವರು, ನಾಗಣ್ಣನವರು ಮತ್ತು ಶ್ರೀಮಾನ್ ಕೃಷ್ಣನ್‌ರವರು ಮಾತನಾಡಿದ್ದಾರೆ.

ಮಾನ್ಯ ಅಧ್ಯಕ್ಷರೇ, ಪ್ರಾಪರ್ಟಿ ಟ್ಯಾಕ್ಸ್ ಹೆಚ್ಚಿಸಿದುದನ್ನು ಪುರಸಭೆಗಳಿಗೆ ಬಿಡಬೇಕಾಗಿತ್ತು ಎಂದು ಮಾನ್ಯ ಸದಸ್ಯರಾದ ಶ್ರೀ ಕೆ. ಪುಟ್ಟಸ್ವಾಮಿಯವರು ವಾದವನ್ನು ಮಂಡಿಸಿದರು. ಅವರು 1964ರಲ್ಲಿ ಮುನಿಸಿಪಲ್ ಆಕ್ಟ್‌ನಲ್ಲಿ ಏನು ಮಾಡಿದ್ದಾರೆ ಎಂದರೆ ಅದರಲ್ಲಿ, (Section 92-2(b)

not less than 12½ town municipality; and not less than 17½
in respect of City Municipality ಎಂದು ಮಾಡಿದ್ದಾರೆ.

ಮ್ಯಾಕ್ಸಿಮಂ ಹಾಕಲಿಲ್ಲ. ಆದರೆ 1949ರ ಬೆಂಗಳೂರು ಕಾರ್ಪೋರೇಷನ್ ಆ್ಯಕ್ಟ್ ಏನಿದೆ ಅದರಲ್ಲಿ ಸೆಕ್ಷನ್ 99 (2)ರ ಪ್ರಕಾರ, not less than 15% and not more than 25 percent ಎಂದು ಇದೆ. ಮಾನ್ಯ ಅಧ್ಯಕ್ಷಣೀಯವರೇ ಈಗ ನಾವು ಹೊಸ ಕಾನೂನಿನಲ್ಲಿ ಏನು ಹಾಕಿದ್ದೇವೆ ಎಂದರೆ, not less than 20% and not more than 25 percent ಎಂದು ಮಾಡಿದ್ದೇವೆ. ಅಂದರೆ 15 ಇದ್ದುದನ್ನು 20 ಮಾಡಿದ್ದೇವೆ ಮತ್ತು 25 ಮ್ಯಾಕ್ಸಿಮಂ ಅದನ್ನು ಹಾಗೆಯೇ ಉಳಿಸಿದ್ದೇವೆ. ಆ ಬಗ್ಗೆ ಮಾನ್ಯ ಸದಸ್ಯರು ಹೊಸ ಕಾನೂನಿನ ಸೆಕ್ಷನ್ 108 ಕ್ಲಾಜ್ (2) ಇದನ್ನು ನೆರಬಡಬೇಕು. ಮಾನ್ಯ ಶ್ರೀ ಕೆ. ಪುಟ್ಟಸ್ವಾಮಿಯವರು ಮಾತನಾಡುತ್ತಾ, ಮ್ಯಾಗ್ಸಿಮಂ ಏತಕ್ಕೆ ಇಟ್ಟೇಕೆಂದು ಹೇಳಿದರು, ಅದಕ್ಕೆ ಕಾರಣವೇನೆಂದರೆ ಅದಕ್ಕಿಂತ ಹೆಚ್ಚಿಗೆ ಹಾಕುವುದಕ್ಕೆ ಚಾನ್ಸ್ ಇನ್ನು ಬಾರದೆಂದು ಬೆಂಗಳೂರು ನಗರ ಕಾರ್ಪೋರೇಷನ್ನಿನ ಕಾನೂನು ಇದರಲ್ಲಿ ಅಳವಡಿಸಿದ್ದೇವೆ. ಅದಕ್ಕೆ ಮಿನಿಮಂ 20 ಮಾಡುವ ಬಗ್ಗೆ ಕೆಲವೊಂದು ಟೀಕೆಗಳನ್ನು ಮಾನ್ಯ ಸದಸ್ಯರು ಮಾಡಿದ್ದಾರೆ. ನಾನಾ ತಮಗೆ ಹೇಳುವುದಾದರೆ ಮಾನ್ಯ ಶ್ರೀ ಟಿ ಆರ್. ಶಾಮಣ್ಣನವರು ಕಾರ್ಪೋರೇಷನ್ನಿನಲ್ಲಿ ಒದ್ದಲ್ಲವ ರೀತಿಯಲ್ಲಿ ಕಾರ್ಯಕಲಾಪಗಳನ್ನು ನಡೆಸಿದ್ದಾರೆ, ಒಳ್ಳೆಯ ಅನುಭವವನ್ನು ಪಡೆದಿದ್ದಾರೆ ಎಲ್ಲಾ ನ್ನೂ ನಾವು ಒಪ್ಪಿಕೊಂಡಿದ್ದೇವೆ. ಹೀಗಾಗಿ ಅವರು ಈ ಟ್ಯಾಕ್ಸ್ ಒಂದನ್ನು ಬಿಟ್ಟು ಟಿ. ಆರ್. ಸಂಪೂರ್ಣವಾಗಿ ಒಪ್ಪಿಕೊಂಡಿದ್ದೇವೆಂದು ಹೇಳಿದ್ದಾರೆ. ಆದುದರಿಂದ ಮಾನ್ಯ ಶ್ರೀ ಗಮನಕ್ಕೆ ಶಾಮಣ್ಣನವರಿಗೆ ಒಂದು ಸೋಜಿಗವಾದಂಥ ವಿಷಯವನ್ನು ತಮ್ಮ ಮುಖಾಂತರ ಅವರ ಸ್ಟ್ಯಾಂಡಿ ತರಬಯಸುತ್ತೇನೆ. ಶ್ರೀಮಾನ್ ಟಿ. ಆರ್. ಶಾಮಣ್ಣನವರು 1960-61ರಲ್ಲಿ ಆಗಿದ್ದರು ಂಗ್ ಕಮಿಟಿ ಆನ್ ಟ್ಯಾಕ್ಸೇಷನ್ ಅಂಡ್ ಫೈನಾನ್ಸ್ ಕಮಿಟಿ ಚೇರ್ಮನ್ ರೇಷನ್ನಿನ ಅವರು ಆಗ ಅಧಿಕಾರದಲ್ಲಿದ್ದಾಗ ಏನು ಹೇಳಿದ್ದಾರೆ ಎಂದರೆ ಈಗ ಕಾರ್ಪೋ ಟ್ಯಾಕ್ಸ್ ಏನಿದೆ ಅದು ಸರಿಯಿಲ್ಲ ಅದನ್ನು ಹೆಚ್ಚು ಮಾಡಬೇಕು ಎಂದು ಹೇಳುತ್ತಾ,

> "The Taxation and Finance Committee hold the latter view on the ground that in our term of office we have already raised this tax by way of lighting tax 1% and steps may be taken in the coming years to enhance the property tax to the maximum viz., 16% and at a later date get the Act amended to charge higher rate." ಎಂಬ ಈ ಮಾತನ್ನು 1961ನೇ ಇಸ್ವಿಯಲ್ಲಿಯೇ ಹೇಳಿದ್ದಾರೆ. 16 ಪರ್ಸೆಂಟ್ ಆಗಿರಬೇಕೆಂದು ಆಗಲೇ ಹೇಳಿದ್ದಾರೆ. ಅದನ್ನು ಮಾನ್ಯ ಶ್ರೀ ಟಿ. ಆರ್. ಶಾಮಣ್ಣನವರೇ ಹೇಳಿದ್ದು.

ಶ್ರೀ ಟಿ. ಆರ್. ಶಾಮಣ್ಣ.—13½ ಮತ್ತು 16 ಪರ್ಸೆಂಟ್ ಇತ್ತು, ಅದಕ್ಕೆ ಯೂನಿಫಾರಂ ಆಗಿ ಟ್ಯಾಕ್ಸ್ ಹಾಕಿ ಎಂದು ಹೇಳಿದ್ದೆ.

ಶ್ರೀ ಡಿ. ಕೆ. ನಾಯ್ಕರ್,—ಮುಂದೆ ಹೇಳುತ್ತೇನೆ. ಇನ್ನೂ ಇದೆ, ಮಾನ್ಯ ಅಧ್ಯಕ್ಷಣಿಯವರೇ, 1964-65ರಲ್ಲಿ ಮಾನ್ಯ ಶ್ರೀ ಟಿ. ಆರ್. ಶಾಮಣ್ಣನವರು ಸ್ಟ್ಯಾಂಡಿಂಗ್ ಕಮಿಟಿಯು ಅಂದರೆ ಅದೇ ಕಮಿಟಿಯ ಸದಸ್ಯರಾಗಿದ್ದಾಗ ಶ್ರೀ ಹಾಜಿ ಸತ್ತಾರ್ ಸೇಠ್‌ರವರು ಚೇರ್ಮನ್ ಆಗಿದ್ದರು. ಆಗ ಇವರು ಈ ರೀತಿ ಭಾಷಣ ಮಾಡಿದ್ದಾರೆ.

> "Properties in these lay-outs are likely to yield sizeable revenue, Even so, it has to be pointed out that the rates of property tax in Bangalore namely 13½% and 15 per cent of the annual values of properties are very low. The Madras Corporation has recently enhanced the rate of property tax on higher annual values from 25% to 30%. A smaller Corporation like the Hubli-Dharwar Corporation levies property tax at a much higher rate than Bangalore. A growing city like ours needs large sums to finance development activities of an urgent nature which cannot be delayed." ಮಾನ್ಯ ಅಧ್ಯಕ್ಷರೇ ಇದು ಆವಾಗ ಪ್ರಾಪರ್ಟಿ ಟ್ಯಾಕ್ಸ್ ಬಗ್ಗೆ ಹೇಳಿರ ತಕ್ಕಂಥಾದ್ದು.

ಶ್ರೀ ಎಂ. ಎಸ್. ಕೃಷ್ಣನ್.—ಆವಾಗ ಮಾನ್ಯ ಶ್ರೀ ಟಿ. ಆರ್. ಶಾಮಣ್ಣನವರು ಹಾಗೆ ಹೇಳಿದ್ದಾರೆ ಎಂದು ನೀವು ಈಗ ಟ್ಯಾಕ್ಸ್ ರೈಜ್ ಮಾಡಿದ್ದು ಸರಿಯೆಂದು ಹೇಳುತ್ತಿದ್ದೀರೋ ಹೇಗೆ ? ಇದು ಅದಕ್ಕೆ ಜಸ್ಟಿಫಿಕೇಷನ್ನೇ ? ಮೂಲಭೂತ ಸಮಸ್ಯೆ ಏನಿದೆ......

ಶ್ರೀ ಡಿ. ಕೆ ನಾಯ್ಕರ್.—ಮೂಲಭೂತ ಸಮಸ್ಯೆಯ ಬಗ್ಗೆ ಈಗ ಹೇಳುತ್ತೇನೆ ಅದನ್ನು ತಾವು ಒಪ್ಪುತ್ತೀರಾ ಎಂದು ನನಗೆ ನಂಬಿಕೆ ಇದೆ, ಮಾನ್ಯ ಅಧ್ಯಕ್ಷಣೀಯವರೇ ಇದನ್ನು ನೀವು ಅವಾಗಲೇ ಏರಿಸಬೇಕಾಗಿತ್ತು ಎಂದು ಮಾನ್ಯ ಶ್ರೀ ಶಾಮಣ್ಣನವರು ಹೇಳಿದ್ದಾರೆ. ನಾಗಣನವರು ಪಾಪ್ಯುಲರ್ ಕೌನ್ಸಿಲ್ ಇಲ್ಲದಾಗ ಟ್ಯಾಕ್ಸ್ ರೈಜ್ ಮಾಡುವುದಕ್ಕೆ ನಮಗೆ ಹಕ್ಕು ಎಲ್ಲಿದೆ ಎಂದು ಕೇಳಿದ್ದಾರೆ. ಬೆಂಗಳೂರು ನಗರ ಕಾರ್ಪೊರೇಷನ್ ಆ್ಯಕ್ಟನ್ನು 1949ನೇ ಇಸ್ವಿಯಲ್ಲಿ ಯಾವ ಸರ್ಕಾರ ಮಾಡಿತ್ತೋ ಆ ಸರ್ಕಾರಕ್ಕೆ ಅದನ್ನು ಹಾಕುವಂಥಾ ಅಧಿಕಾರವಿದ್ದುದರಿಂದ ಆ ಹಕ್ಕು ನಮಗೂ ಇದೆ. ಆ ಹಕ್ಕನ್ನು ಚಲಾವಣೆಯ ಪ್ರಕಾರ ಮಾಡಿದ್ದೇವೆ. ಅದನ್ನು ಮಾಡಿದಾಕ್ಷಣ ನಾವು ಕಾರ್ಪೊರೇಷನ್ನಿನಲ್ಲಿ ಇದನ್ನು ಅಳವಡಿಸಿಕೊಂಡು ಟ್ಯಾಕ್ಸನ್ನು ಇನ್ನು ಇಂಪೋಜ್ ಮಾಡಲಿಲ್ಲ ತೆರಿಗೆಯನ್ನು ವಸೂಲಿ ಮಾಡಿಲ್ಲ ಅದು ಯಾವ ಹಂತದಲ್ಲಿದೆ ಎಂಬುದನ್ನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಯ ಪಡಿಸುತ್ತೇನೆ. ಈಗ ನಾವು ರೂಲ್ಸನ್ನು ಮಾತ್ರ ಮಾಡಿದ್ದೇವೆ ಅದರಲ್ಲಿ 10 ಜುಲೈ 1977ರವರೆಗೆ ಆಬ್ಜೆಕ್ಷನ್ ಫೈಲ್ ಮಾಡುವಂಥಾ ಅವಕಾಶವಿದೆ ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳವರೂ ಕೂಡ ಸ್ಟೇಟ್‌ಮೆಂಟ್ ಮಾಡಿದ್ದಾರೆ. ಇದರಿಂದ ಜನತೆಗೆ ಹರ್ರ್ಯಾಸ್‌ಮೆಂಟ್ ಆಗುತ್ತಿದ್ದರೆ ನಾವು ಅದರ ಬಗ್ಗೆ ಪುನಃ ಪರಿಶೀಲನೆ ಮಾಡಿ ತೀರ್ಮಾನ

ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಆದುದರಿಂದ ಅದು ಇನ್ನೂ ಜಾರಿ ಆಗಿಲ್ಲ. ಹಾಗೂ ಮುಗಿದು ಹೋಗಿಲ್ಲ. ಈಗ ಏನಾಗಿದೆಂದರೆ ಇದನ್ನು ನಾವೇ ಹೊಸದಾಗಿ ಮಾಡಿದ್ದೇವೆ ಎನ್ನುವ ರೀತಿಯಲ್ಲಿ ಅಪಾದನೆಯನ್ನು ಮಾನ್ಯ ಸದಸ್ಯರು ಮಾಡುತ್ತಿದ್ದಾರೆ. ಆದುದರಿಂದ ಅಧ್ಯಕ್ಷರೇ, ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಯಪಡಿಸುವುದೇನೆಂದರೆ 1949ರ ಕಾರ್ಪೊರೇಷನ್ ಟ್ಯಾಕ್ಸ್ ಏನಿದೆ ಅದರಲ್ಲಿರತಕ್ಕಂಥ ಕಾನೂನನ್ನೇ ಇಲ್ಲಿ ಅಳವಡಿಸಿದ್ದೇವೆ ಮತ್ತು 15 ರಿಂದ 20ಕ್ಕೆ ಮಾತ್ರ ಏರಿಸಿದ್ದೇವೆ ಎಂದು ಹೇಳಿದ್ದೇವೆ ಉಳಿದಿದ್ದೆಲ್ಲಾ ಹಾಗೆಯೇ ಇದೆ. ಇನ್ನು ಮೆಥಡ್ ಆಫ್ ಅಸೆಸ್‌ಮೆಂಟ್ ಬಗ್ಗೆ ಮಾನ್ಯ ಶ್ರೀ ಕೆ. ಪುಟ್ಟಸ್ವಾಮಿಯವರು ಮಾತನಾಡುತ್ತಿರುವಾಗ ಅವರು ಒಂದು ಉದ್ಗಾರವನ್ನು ತೆಗೆದಿದ್ದಾರೆ. ಅವರ ಶಬ್ದವನ್ನೇ ಬರೆದುಕೊಂಡಿದ್ದೇನೆ, ಅದು ಏನೆಂದರೆ "ಇದು ಎಲ್ಲಿಂದ ಯೋಚನೆ ಹೊಳೆಯಿತೋ ?,, ಎಂದು ನನಗೆ ಅವರು ಹೇಳಿದರು. ಇದು ನಾನು ಹೊಸದಾಗಿ ಮಾಡಿದ್ದೇನೆ ಎನ್ನುವ ಭಾವನೆ ಬಂದ ಹಾಗೆ ಕಾಣುತ್ತದೆ. ಮಾನ್ಯ ಶ್ರೀ ಕೆ. ಪುಟ್ಟಸ್ವಾಮಿಯವರು ಹಿಂದೆ ಪೌರಾಡಳಿತ ಸಚಿವರಾಗಿದ್ದು ಅಧಿಕಾರವನ್ನು ನಡೆಸಿದ್ದಾರೆ ಮತ್ತು ಮಂತ್ರಿಗಳಾಗಿಯೂ ಅಧಿಕಾರವನ್ನು ನಡೆಸಿದ್ದಾರೆ. 1949ರ ಬೆಂಗಳೂರು ಸಿಟಿ ಕಾರ್ಪೊರೇಷನ್ ಆ್ಯಕ್ಟ್‌ನಲ್ಲಿ 100 ನೇ ಕಲಂನಲ್ಲಿಯ ಕ್ಲಾಜ್ (2)ರಲ್ಲಿ ಏನಿದೆ ಅದನ್ನು ಹೊಸ ಕಾನೂನಿನಲ್ಲಿ 109ನೇ ಕಲಂ ಆಗಿ ಮಾಡಿಕೊಂಡಿದ್ದೇವಷ್ಟೆ. ಅದರಲ್ಲಿರತಕ್ಕಂಥ ಶಬ್ದವನ್ನು ಮತ್ತು ಹೊಸದಾಗಿ ಮಾಡಿರತಕ್ಕಂಥ ಕಾನೂನಿನಲ್ಲಿರತಕ್ಕಂಥವರ ಬಗ್ಗೆ ಇರತಕ್ಕಂಥ ಶಬ್ದವನ್ನೂ ತಾವು ವೆರಿಫೈ ಮಾಡಿ ನೋಡಬಹುದು. ಇದನ್ನು ಏತಕ್ಕೆ ತಮ್ಮ ಅವಗಾಹನೆಗೆ ತರುತ್ತೇನೆ ಎಂದರೆ, ಅವರು ನನಗೆ ಇದು ಎಲ್ಲಿಂದ ಯೋಚನೆ ಹೊಳೆಯಿತೋ ಎನ್ನುವ ಭಾವನೆಯನ್ನು ಶ್ರೀ ಪುಟ್ಟಸ್ವಾಮಯ್ಯನವರು ಹೇಳಿದರು, ಹಾಗೆ ಅವರು ಹೇಳುವ ಹಾಗಿದ್ದರೆ ಹಿಂದೆ 1949ರ ಕಾರ್ಪೊರೇಷನ್ನಿನ ಆ್ಯಕ್ಟ್‌ನಲ್ಲಿ ಏನಿತ್ತು ಎನ್ನುವುದನ್ನು ಮಾನ್ಯ ಸದಸ್ಯರು ಅರ್ಥ ಮಾಡಿಕೊಂಡಿರಲಿಲ್ಲವೇ ಎನ್ನುವಂಥಾದದ್ದು ಅರ್ಥವಾಗುತ್ತದೆ. ಆ ಮಟ್ಟಕ್ಕೆ ಇಳಿಯಬಾರದೆಂದು ನಾನು ಸುಮ್ಮನೆ ಇದ್ದೇನೆ. ಇನ್ನು ಮಾನ್ಯ ಶ್ರೀ ಎಂ. ಎಸ್. ಕೃಷ್ಣನ್‌ರವರು ಮಾತನಾಡುತ್ತಾ ಉದಾಹರಣೆಗೆ ಅವರ ಮನೆ 40—60ಗೆ ಸಾವಿರ ಗಟ್ಟಲೆ ಹೆಚ್ಚು ಕೊಡಬೇಕಾಗಿ ಇರುತ್ತದೆ ಮತ್ತು ಮಂತ್ರಿಗಳ ಬಂಗಲೆಗೆ 5 ಸಾವಿರ ಬರುತ್ತದೆ ಇದನ್ನು ಜನ ಹೇಗೆ ಸಹಿಸಿಯಾರು ಎಂದು ಹೇಳಿದ್ದಾರೆ. ಶ್ರೀ ಮಾನ್ ಕೆ. ಪುಟ್ಟಸ್ವಾಮಿಯವರು ಮತ್ತು ಶ್ರೀ ನಾಗಣ್ಣನವರು ಮಾತನಾಡುತ್ತಾ, "ನೀವು ಮಾರ್ಕೆಟ್ಟಿನ ಕಡೆಗೆ ಅಡ್ಡಾಡಲೂ ಹೋದರೆ ಜನ ನಿಮ್ಮನ್ನು ಬಡಿಯುತ್ತಾರೆ, ನಿಮ್ಮನ್ನು ಉಳಿಸುವುದಿಲ್ಲ,, ಎನ್ನುವ ಮಟ್ಟಿಗೆ ಅವರು ಹೇಳಿದ್ದಾರೆ,

ಶ್ರೀ ಕೆ. ಎಂ. ನಾಗಣ್ಣ.—ಅದನ್ನು ನಾನು ಹೇಳಿದ್ದು, ಶ್ರೀ ಮಾನ್ ಕೆ. ಪುಟ್ಟಸ್ವಾಮಿಯವರು ಹೇಳಲಿಲ್ಲ.

ಶ್ರೀ ಡಿ. ಕೆ. ನಾಯ್ಕರ್.—ಇಲ್ಲ ಅವರೂ ಹೇಳಿದ್ದಾರೆ, ಅವರು ಹೇಳಿದ್ದನ್ನೂ, ನಾನು ಬರೆದುಕೊಂಡಿದ್ದೇನೆ, ಇಲ್ಲವೆಂದರೆ ತೆಗೆದು ಹಾಕುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಿಯವರು.—ಬಡಿಯುತ್ತಾರೆ ಎನ್ನುವ ಶಬ್ದ ಹೇಳಲಿಲ್ಲ ಬೇರೆ ಹೇಳಿರಬಹುದು.

ಒಂದು ದಿನವನ್ನು ಗೊತ್ತು ಮಾಡಿ, ಆ ದಿನದಂದು ಮಾರುಕಟ್ಟೆಯಲ್ಲಿ ಎಲ್ಲ ಮಂತ್ರಿಗಳು ಓಡಾಡಲಿ. ಆಗ ಜನಗಳು ಏನು ಮಾಡುತ್ತಾರೆಂಬುದು ಗೊತ್ತಾಗುತ್ತದೆ ?

ಶ್ರೀ ಎಂ. ಎಸ್. ಕೃಷ್ಣನ್.—ನೀವು ನಡೆದುಕೊಂಡು ಓಡಾಡಿದರೆ ಜನ ನಿಮ್ಮನ್ನು ಬಿಡುವುದಿಲ್ಲ ಎಂದು ಮಾನ್ಯ ಸದಸ್ಯರು ಹೇಳಿದರೆ ವಿನಹ, ಫ್ಲಾಗನ್ನು ಮುಚ್ಚಿಟ್ಟು ಕಾರಿನಲ್ಲಿ ಓಡಾಡಬೇಡಿ ಎಂದೇನೂ ಹೇಳಿಲ್ಲ;

ಶ್ರೀ ಡಿ. ಕೆ. ನಾಯ್ಕರ್.—ಈ ರೀತಿ ಹೇಳಿದ್ದನ್ನಾದರೂ ಒಪ್ಪಿಕೊಳ್ಳುತ್ತೀರಲ್ಲ ?

ಶ್ರೀ ಕೆ. ಎಂ. ನಾಗಣ್ಣ.—ಹಾಗೆ ಹೇಳಿದೆನೆಂದು ನಾನು; ಒಪ್ಪಿಕೊಳ್ಳುತ್ತೇನೆ.

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಶ್ರೀ ನಾಗಣ್ಣನವರು ಹಿರಿಯ ಸದಸ್ಯರು. ಅವರಲ್ಲಿ ನನಗೆ ಗೌರವವಿದೆ. ಅವರು ಎಲ್ಲಿಯವರೆಗೆ ಹೋಗಿದ್ದಾರೆಂದರೆ ನಾಯ್ಕರ್‌ರವರು ಬೆಂಗಳೂರಿನಲ್ಲೇನಾದರೂ ಚುನಾವಣೆಯಲ್ಲಿ ಸ್ಪರ್ಧಿಸಿದರೆ ಠೇವಣಿ ಸಿಗುವುದಿಲ್ಲವೆಂದು ಹೇಳಿದ್ದಾರೆ. ಇರ

ಬಹುದು ; ಏಕೆಂದರೆ ನಾನು ಈ ಊರಿನವನಲ್ಲ. ಮಾನ್ಯ ನಾಗಣ್ಣನವರು ನನ್ನ ಸವಾಲನ್ನು ಸ್ವೀಕರಿಸಿ ಧಾರವಾಡದಲ್ಲಿ ಬಂದು ಚುನಾವಣೆಯಲ್ಲಿ ಸ್ಪರ್ಧಿಸಿದರೆ ಅವರಿಗೂ ಅದೇ ಗತಿ ಎನ್ನುವುದನ್ನು ಅವರೂ ಒಪ್ಪಬೇಕು. ಕೆಲವು ಮಾನ್ಯ ಸದಸ್ಯರೇ ತೆರಿಗೆಯ ಕ್ರಮವನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲವೋ ಅಥವಾ ಅದನ್ನು ವಿಪರೀತವಾಗಿ ಅರ್ಥ ಮಾಡಿಕೊಂಡಿದ್ದಾರೋ—ನನಗೆ ಗೊತ್ತಾಗುತ್ತಿಲ್ಲ. ಮಾನ್ಯ ಸದಸ್ಯರೆಲ್ಲರ ಗಮನ ಓನರ್ ಆಕ್ಯುಪೆಂಟ್ ಹೌಸ್ ಬಗ್ಗೆ ಇದೆ. ಬಾಡಿಗೆ ಮನೆಗಳ ಬಗ್ಗೆ ಅವರ ತಕರಾರೇನಿಲ್ಲ. ಇದರ ಬಗ್ಗೆ ಎಲ್ಲರೂ ಒಪ್ಪಿಕೊಂಡಿದ್ದಾರೆ.

In the Bangalore Corporation Act, Section 100 says as follows :—

"Section 100.—Method of Assessment

Clause (2)—The annual value of the building or a land shall be deemed to be the gross annual rent at which such building or land may at the time of assessment reasonably be expected building to let from month to month or from year to year......."

Further the Proviso says as follows :—

"Provided that——

in the case of any Government or railway building of a class not ordinarily let, the gross annual rent of which can not in the opinion of the Commission be estimated."

ಇಲ್ಲಿ ಪ್ರಶ್ನೆ ಬರುವುದು ಮಾರ್ಕೆಟ್ ವ್ಯಾಲ್ಯೂ ಗೊತ್ತು ಮಾಡಿರುವುದರಲ್ಲಿ........

Government buildings, railway buildings and buildings where it is not easy to determine the rental value. ಪ್ಯಾಲೆಸ್, ಚೌಲ್ಟ್ರಿ ಮುಂತಾದ ಈ ರೀತಿಯ ಸಂಸ್ಥೆಗಳಿಗೆ ನಿರ್ದಿಷ್ಟವಾಗಿ ಇಷ್ಟೇ ಎಂದು ರೆಂಟಲ್ ವ್ಯಾಲ್ಯೂ ಫಿಕ್ಸ್ ಮಾಡುವುದು ಅವಶಕ್ಯವಲ್ಲ. ಆದುದರಿಂದ,

In such cases, the Act says as follows :—

"The annual value of the premises shall be deemed to be 6% of the total essimated market value of the land at the time of assesement and estimated cost of erecting the building at such time atfer deducting for depriciation a reasonable amount which shall in no case be less than ten per cent."

In our Act, Section 109, Clause (2) says as follows :—

"Section 109—Method of Assessment of Property :

Clause (2).—The reteable value of a building or land shall be deemed to be the gross annual rent at which such building or land may at the time of assessment reasonably be expected to let from month to month or from year to year........"

ಶ್ರೀ ಎಂ. ಎಸ್. ಕೃಷ್ಣನ್.—ರೇಟಬಲ್ ವ್ಯಾಲ್ಯೂಗೂ ಮಾರ್ಕೆಟ್ ವ್ಯಾಲ್ಯೂಗೂ ಬಹಳ ವ್ಯತ್ಯಾಸವಿದೆ.

SRI D. K. NAIKAR.—I would like to read the Proviso given under Section 109 which says as follows :—

"Provided that—

(a) in the case of—

(i) any Government or railway building ; or

(ii) any building of a class not ordinarily let, the gross annual rent of which cannot in the opinion of the Commissioner be estimated, the reteable value of the premises shall be deemed to be six per cent of the total of the estimated market value of the land at the time of assessment......."

ಹೀಗಿರುವುದರಿಂದ ಜನರ ಮನಸ್ಸಿನಲ್ಲಿ ಕಸಿವಿಸಿ ಭಾವನೆ ಬರುವ ಹಾಗೆ ಮಾತನಾಡುವುದು ಸರಿಯಲ್ಲ. ಅಲ್ಲದೆ, ಹಳೆಯ ಕಟ್ಟಡಗಳಿಗೆ ಎಪ್ಪತ್ತು ಪರ್ಸೆಂಟ್ ಡಿಡಕ್ಷನ್ ಕೊಡಬೇಕೆಂದು ಇದರಲ್ಲಿ ಅಳವಡಿಸಿದ್ದೇವೆ. ಇದಕ್ಕೂ ಜನ ಒಪ್ಪಿಗೆ ಕೊಡದೆ ಹೋದರೆ, ಅವರಿಗೇನಾದರೂ ತೊಂದರೆಯಿದ್ದರೆ, ಅದನ್ನು ನಾವು ಗಮನದಲ್ಲಿಟ್ಟುಕೊಂಡು ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದೇವೆ. ಆದುದರಿಂದ, ತೆರಿಗೆ ಬಗ್ಗೆ ಈ ರೀತಿಯ ವಾದವಿವಾದ ಮಾಡುವುದು ಸರಿಯಲ್ಲವೆಂದು ನಾನು ಹೇಳಬಯಸುತ್ತೇನೆ.

SRI M. S. KRISHNAN.—According to Proviso, Railway Buildings and buildings which are not capable of being rented come under it. But even ordinary buildings which are owner-occupied also come under it. Therefore, clarification should be issued in this connection. ಬದಲಾವಣೆಯಾದ ಮೇಲೆ, ನಾನು ಹಾಕಿರುವ ರೆಕ್ಕಾಚಾರದಷ್ಟು ಬೀಳುತ್ತ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ, ಆದುದರಿಂದ, ಮಾನ್ಯ ಮಂತ್ರಿಗಳು ಇದರ ಬಗ್ಗೆ ಸ್ಪಷ್ಟೀಕರಣ ನೀಡಬೇಕು.

ಶ್ರೀ ಡಿ. ಕೆ. ನಾಯ್ಕರ್.—ಅಬ್ಜೆಕ್ಷನ್ಸ್, ಏನಾದರೂ ಇದ್ದರೆ ಅದನ್ನು ಫೈಲ್ ಮಾಡುವುದಕ್ಕೆ ಹತ್ತನೇ ತಾರೀಖು ಕೊನೆಯ ದಿನ. ನಿಮ್ಮ ಅಬ್ಜೆಕ್ಷನ್ಸ್ ಇದ್ದರೆ, ಕೊಡಿ, ಅದಕ್ಕೆ ಸರ್ಕಾರ ಕ್ಲಾರಿಫೈ ಮಾಡುವುದಕ್ಕೆ ಸಿದ್ಧವಿದೆ. ಇನ್ನು ಇದೇನೂ ಫೈನಲ್ಲ್ ಆಗಿಲ್ಲ. ತಾವೆಲ್ಲಾ ಈಗಲೇ ಏತಕ್ಕೆ ಇಷ್ಟು ಕಷ್ಟಪಡುತ್ತಿದ್ದೀರಿ ? ತೆರಿಗೆಯ ವಿಚಾರದಲ್ಲಿ ನನಗೆ ತಿಳಿದಮಟ್ಟಿಗೆ ಸಾಕಷ್ಟು ವಿಷಯಗಳ ಬಗ್ಗೆ ವಿಶದೀಕರಿಸಿದ್ದೇನೆ ಎನ್ನುವ ನಂಬಿಕೆ ನನಗಿದೆ.

ಶ್ರೀ ಟಿ. ಆರ್. ಶಾಮಣ್ಣ.— ಮನೆ ಕಟ್ಟಿದ ದಿನದಿಂದ ಇದನ್ನು ತೆಗೆದುಕೊಳ್ಳಬೇಕೇ ಹೊರತು ಇವತ್ತಿನಿಂದ ತೆಗೆದುಕೊಳ್ಳಬಾರದು, ಏಕೆಂದರೆ, ಆಗಿನ ದರಕ್ಕೂ ಈಗಿನ ದರಕ್ಕೂ ಬಹಳ ವ್ಯತ್ಯಾಸವಿದೆ. ಅಲ್ಲದೆ,

"In determining the rateable value, every owner of the building shall whenever it is notified that the property tax shall be levied, furnish within the time specified, the following:—

(i) The rent actually realised; or the rent which may be realised;

(ii) The market value of the land on which the building stands;

(iii) The estimated cost of the construction of the building;

(iv) The date of erection; and

(v) The depreciation claimed

ಆದುದರಿಂದ, ನಾವು ಮಾನ್ಯ ಮಂತ್ರಿಗಳನ್ನು ಸುಲಭವಾಗಿ ಬಿಡುವುದಿಲ್ಲ. ನಾವು ಉಳಿಯಬೇಕು, ಇಲ್ಲ ನೀವು ಉಳಿಯಬೇಕು.

ಶ್ರೀ ಕೆ. ಪುಟ್ಟಸ್ವಾಮಿ.— ಇಬ್ಬರೂ ಉಳಿಯಬೇಕು.

SRI T. R. SHAMANNA —We will see that it is reduced.

2–30 P.M.

ಶ್ರೀ ಡಿ. ಕೆ. ನಾಯ್ಕರ್.— ಮಾನ್ಯ ಅಧ್ಯಕ್ಷರೇ, ರೂಲ್ಸ್ ಬಗ್ಗೆ ಮಾತನಾಡುವಾಗ ಮಾನ್ಯ ಸದಸ್ಯರಾದ ಪುಟ್ಟಸ್ವಾಮಿಯವರು ಒಂದು ವಿಚಾರವನ್ನು ಸದನದ ಗಮನಕ್ಕೆ ತಂದಿದ್ದಾರೆ. ಏನು ಅಂದರೆ ಮಾಲೀಕರು ಡಿಕ್ಲೇರೇಷನ್ ಕೊಡಬೇಕು. ಕೊಡದೆ ಹೋದರೆ ರೂಲ್ಸ್ ಪ್ರಕಾರ ಅಧಿಕಾರಿಗಳು ಏನು ನಿರ್ಧಿಷ್ಟವಾಗಿ ಮಾಡುತ್ತಾರೋ ಅದು ಫೈನಲ್ ಆಗುತ್ತದೆ. ಇದರಿಂದ ಅಜ್ಞಾನಿ ಜನಗಳನ್ನು ಫಾಸಿ ಪಡಿಸಿದಂತಾಗುತ್ತದೆಂದು ಹೇಳಿದ್ದಾರೆ. ಸರ್ಕಾರದ ಉದ್ದೇಶ ಅದಲ್ಲ, ರೂಲ್ಸ್‌ನಲ್ಲಿ ಏನು ಹೇಳಿದೆ ಅದರ ಪ್ರಕಾರ ಅಳತೆಗೋಲು ಪ್ರಕಾರ ಕೊಡಬೇಕು. ಫಾಸಿಪಾಸಿ ಮಾಡತಕ್ಕ ಉದ್ದೇಶ ಏನೂ ಇಲ್ಲ. ಒಂದು ಯಾವುದಾದರೂ ಕಾರಣದಿಂದ ತಿಳಿಯದೆ ಕೊಡದಹೋದರೆ ಟೈಮ್ ಕೊಡಬೇಕೆಂತಲೂ ಇದೆ. ಸುಮ್ಮನೆ ಟೀಕೆ ಮಾಡುವುದು ಸರಿಯಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಮಾನ್ಯ ಪುಟ್ಟಸ್ವಾಮಿಯವರು ಅಕ್ರಾಯಿಯನ್ನು ತೆಗೆಯಬೇಕೆಂಬ ಸೂಚನೆ ಕೊಟ್ಟಿದ್ದಾರೆ. ನಾನು ಕೂಡ ಅನೇಕ ಸಂದರ್ಭದಲ್ಲಿ ಗಮನ ಸೆಳೆಯುವ ಸೂಚನೆಗಳು ಬಂದಾಗ, ಪ್ರಶ್ನೆಗಳು ಬಂದಾಗ ಉತ್ತರ ಕೊಟ್ಟಿದ್ದೇನೆ. ಕೇಂದ್ರ ಸರ್ಕಾರದವರು ಇದರ ಬಗ್ಗೆ ತೀರ್ಮಾನ ಮಾಡಬೇಕಾಗುತ್ತದೆ. ಯಾವುದೇ ರೀತಿಯಿಂದಲೂ ನಾವು ಮುಂದುವರಿಸಬೇಕೆಂಬ ಹವ್ಯಾಸ ನಮಗೆ ಇಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದೇನೆ. ಕಾರ್ಗೆ ಸಮಿತಿಯವರು ಕೂಡ ತಮ್ಮ ಶಿಫಾರಸ್ಸಿನಲ್ಲಿ ಮುಂದುವರಿಸಬೇಕು ಎಂದು ಕೊಟ್ಟಿದ್ದಾರೆ, ಆ ರೀತಿಯಾಗಿ ಮುಂದುವರಿಸುತ್ತಿದ್ದೇವೆ. ಅಕ್ರಾಯಿ ಹೋಗಬೇಕು ಎನ್ನುವವರ ಪೈಕಿ ನಾನು ಒಬ್ಬ. ನಾವು ಬೇಡ ಎಂದು ಹೇಳುವುದಿಲ್ಲ. ಇನ್ನೂ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಸರ್ಕಾರ ಅವುಗಳನು ವಿಚಾರ ಮಾಡುತ್ತದೆ.

ಇನ್ನು ನಾಗಣ್ಣನವರು ಟ್ಯಾಕ್ಸ್ ಬಗ್ಗೆ ಮಾತನಾಡುವಾಗ ಸ್ವಂತ ಮನೆ ಇರುವವರಿಗೆ ಬಾಡಿಗೆ ಏನು ಬರುತ್ತಿತ್ತು. ಇನ್ನು ಅವರಿಗೆ ಬಹಳ ಕಷ್ಟವಾಗುತ್ತದೆ ಎಂದು ಹೇಳಿದ್ದಾರೆ, ಈ ವಿಚಾರದಲ್ಲಿ ನಾನಾಗಲೇ ಉತ್ತರ ಕೊಟ್ಟಿದ್ದೇನೆ. ಕಲಾಸಿಪಾಳ್ಯಂನಲ್ಲಿ ಒಂದು ಮೋರಿಯನ್ನು ಮುಚ್ಚಬೇಕಾಗಿದ್ದುದನ್ನು ವರ್ಷಕ್ಕೆ ಮೂರು ಸಾವಿರ ರೂಪಾಯಿನಂತೆ 30 ವರ್ಷಗಳ ಲೀಸ್‌ಗೆ ಕೊಟ್ಟಿದ್ದಾರೆ. ಅವನು ಆರು ಸಾವಿರ ರೂಪಾಯಿ ದುಡಿಯುತ್ತಿದ್ದಾನೆ ಎಂದು ಹೇಳಿದರು. ಅಧ್ಯಕ್ಷರೆ, ನನ್ನ ಮೇಲೆ ಕಮೀಷನ್ ಮುಂದೆ ಇರತಕ್ಕ ಚಾರ್ಜಿನಲ್ಲಿ ಇದೂ ಒಂದು. ನಾನು ಸ್ಪಷ್ಟವಾಗಿ ಕಮೀಷನ್ ಮುಂದೆ ಹೇಳುತ್ತೇನೆ. ನಾನು ಏನೇನೇ ಹೇಳಿರುತ್ತೇನೆ, ಅದು ಬರುತ್ತದೆ. ಹಿರಿಯ ಸದಸ್ಯರಾದ ನಾಗಣ್ಣನವರು ನನ್ನಿಂದ ಹೇಳಿಕೆ ಪಡೆಯುವುದಕ್ಕೆ ಆಸೆ ಪಡುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅಲ್ಲದೆ ಚುನಾವಣೆಯನ್ನು ಯಾವಾಗ ಮಾಡುತ್ತೀರಿ ಎಂದು ಕೇಳಿದ್ದಾರೆ. ಅದಷ್ಟು ತೀವ್ರವಾಗಿ ಚುನಾವಣೆಗಳನ್ನು ಮಾಡುತ್ತೇವೆ. ಹೊಸ ಆಕ್ಟ್ ಪ್ರಕಾರ ಕಾರ್ಯಕ್ರಮ ಕೈಗೊಳ್ಳುತ್ತೇವೆ. ಡಿವಿಜನ್ ಫಾರ್ಮೇಷನ್ ತೀವ್ರಗತಿಯಲ್ಲಿ ಮಾಡಿ ಸರ್ಕ್ಯುಲರ್ ಕೊಡುತ್ತೇವೆ. ಕಾನೂನು ರೀತಿ ಡಿವಿಜನ್ ಡಿಟರ್ಮೈನ್ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

ಇನ್ನು ಮಾನ್ಯ ಸದಸ್ಯರಾದ ಸತ್ಯನಾರಾಯಣಸಿಂಗ್‌ರವರು ಚುನಾವಣಾ ಸಭೆಗಳು ಎಲ್ಲಿಯೂ ಇಲ್ಲ, ರಾಜಕೀಯವಾಗಿ ಸೂಪರ್‌ಸೀಡ್ ಮಾಡಿದ್ದನ್ನು 2–3 ಓದಿದ್ದಾರೆ. ನಾನು ಈಗಾಗಲೇ ಹೇಳಿದ್ದೇನೆ. 16 ಚಾರ್ಜಸ್‌ಗಳನ್ನು ಡೆಪ್ಯೂಟಿ ಕಮೀಷನರ್‌ರವರು ಎನ್‌ಕ್ವೈರಿ ಮಾಡಿ,

ಡಿವಿಜನಲ್ ಕಮೀಷನರ್‌ರವರಿಗೆ ಶಿಫಾರಸ್ಸು ಮಾಡಿದ್ದಾರೆ, ದಯವಿಟ್ಟು ತಿಳಿದುಕೊಂಡು ಓದಬೇಕು. ಚಾರ್ಜ್ ಸರಿಯಾಗಿಲ್ಲ ಅಂದರೆ ಚಾಲೆಂಜ್ ಮಾಡಬಹುದು, ಅಡ್ಮಿನಿಸ್ಟ್ರೇಟರ ನೇಮಕದ ವಿಚಾರದಲ್ಲಿ ಕಾನೂನು ಪ್ರಕಾರ ಮುಂದುವರಿದಿಲ್ಲ ಎಂದು ಹೇಳಿದ್ದಾರೆ. ಅಲ್ಲದೆ ಒಂದು ಸಂದರ್ಭದಲ್ಲಿ ಅಡ್ಮಿನಿಸ್ಟ್ರೇಟರನ್ನು ಏತಕ್ಕೆ ನೇಮಿಸಲಿಲ್ಲ ಎಂದು ಇವರೇ ಕೇಳಿದ್ದಾರೆ.

ಶ್ರೀ ಬಿ. ಸತ್ಯನಾರಾಯಣ ಸಿಂಗ್.—ನಿಮಗೆ ಬೇಕಾದವರಿಗೆ ಕಾನೂನು ಅನ್ವಯಿಸುವುದಿಲ್ಲ. ಬೇಡದವರಿಗೆ ಕಾನೂನು ಅನ್ವಯಿಸುತ್ತೆ.

ಶ್ರೀ ಡಿ. ಕೆ. ನಾಯ್ಕರ್.—ಮುಂದೆ ಚುನಾವಣೆ ಆಗುವವರೆಗೆ ಕಲಮಿನಲ್ಲಿರುವ ಪ್ರಕಾರ, ಹೊಸದಾಗಿ ರಚಿತವಾದ ಬಾಡಿ ಆಗೋ ತನಕ ಮುಂದುವರಿಯಬಹುದು ಎನ್ನುವ ಬಗ್ಗೆ ಅಳವಡಿಸಿದ್ದೇವೆ.

The Hon'ble Member Sri Sayanak has made a statement that the Belguam Municipality was superseded in 1973, Madam Speaker, it is not correct. According to my information, the Administrator to TMC, Belgaum was appointed on 1st March 1974 after the expire of the term of the Council and not superseded. Then, the another allegation made by the Hon'ble Member was that myself and Mr. Koujalgi were measuring the road with no staff.

SRI B. B. SAYANAK.— I have said that both yourself and the staff were measuring the road. It is not the duty of the Minister.

SRI D. K. NAIKAR.— I am extremely sorry, Madam Speaker, the Hon'ble Member has not properly understood the position. Myself and Mr. Koujalgi both had been there. But there was previous instruction that widening of the road must be taken up and because officers wanted to show to what extent the measurement should be taken and what should be the extent of the widening of the road we were there to observe what our staff doing.

The Hon'ble Member has also mentioned about the shortage of water supply to the Belgaum City and my statement previously made in this House is not correct; that is not the fact. Madam, with all respect to the Hon'ble Member, I may submit that the augmentation of water supply scheme has already been approved and the work is in great progress.

SRI B. B. SAYANAK.— It has not yet been started. Chairman was there. It was inaugurated only this month.

SRI D. K. NAIKAR.— Madam Speaker, I have to submit that there are number of items of piece work and even construction of new filter bed. Therefore, my friend Sri Sayanak may not be scared away by a simple function attended by the Chairman.

SRI B. B. SAYANAK.—There is shortage of water in Belgaum City.

SRI D. K. NAIKAR.— That is why I said in my statement previously, that the Government is keen in supplying sufficient water. Then, Madam Speaker, the Hon'ble Member Sri Sayanak, has also suggested

in his statement that some encroachments are made and the officials have taken no action. In such cases, if instances are brought to my notice by the Hon'ble Member, I am sure suitable action will be taken.

Another point raised about bringing car by the Chairman, etc., I will have to go into the details and study the position as to what has really happened. Madam Speaker, another point he has raised is about the development charges. For this I submit that this point was considered in the board meeting and it was decided unanimously that there should be a reduction from Rs. 8 to 6

ಶ್ರೀಮಾನ್ ಬಂಗೇರಾರವರು ಮಂಗಳೂರು ಪೌರಕಾರ್ಮಿಕರ ಬಗ್ಗೆ ಮಾತನಾಡುತ್ತಾ ಅವರಿಗೆ ಸರಿಯಾದ ಸೌಲಭ್ಯಗಳನ್ನು ಕೊಟ್ಟಿಲ್ಲ, ನಾರಾಯಣ ಪೈ ಕಮೀಷನ್ನಿನ ಸಂಬಳವನ್ನು ಇದುವರೆವಿಗೂ ನಿಗದಿಮಾಡಿಲ್ಲ ಎಂದು ಹೇಳಿದರಲ್ಲದೆ ಅವರಿಗೆ ಡ್ರೆಸ್, ಸೋಪು ವಗೈರೆ ಕೊಟ್ಟಿಲ್ಲ ಎಂದು ಹೇಳಿದರು. ಅಲ್ಲದೆ ಆಕಾಮ್ರಾಯ ಬಗ್ಗೆ ಕೂಡ ಹೇಳಿದ್ದಾರೆ. ಸರ್ಕಾರ ಈ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳುತ್ತದೆಂದು, ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಇನ್ನು ಮಾನ್ಯ ಸದಸ್ಯರಾದ ಎಂ. ಎಸ್. ಕೃಷ್ಣನ್‌ರವರು ಚುನಾವಣೆ ಬಗ್ಗೆ ಕೆಲವು ವಿಚಾರ ಹೇಳಿದ್ದಾರೆ, ತೆರಿಗೆ ಬಗ್ಗೆ ಹೇಳಿದ್ದಾರೆ, ಜಯನಗರ ಆಸ್ಪತ್ರೆ ಬಗ್ಗೆ ಹೆಚ್ಚಿಗೆ ಹಣ ಕೊಟ್ಟಿದ್ದನ್ನು ಹೇಳಿದ್ದಾರೆ. ಮೊದಲಿನಿಂದ ಕಾಂಟ್ರಾಕ್ಟ್ ತೆಗೆದುಕೊಂಡವರು 5-6 ವರ್ಷದಲ್ಲಿ ಕೆಲಸ ಮಾಡದೇ ಇದ್ದುದರಿಂದ ಹೊಸ ಕಂಟ್ರಾಕ್ಟ್ ಕೊಡುವಾಗ ರೇಟ್ ಜಾಸ್ತಿಯಾಗಿದೆ ಎಂದು ಹೇಳಿದ್ದೇನೆ. ಆದುದರಿಂದ ಮಾನ್ಯ ಸದಸ್ಯರು ಈ ಬಗ್ಗೆ ಹೆಚ್ಚಿನ ವಿವರಣೆ ಕೇಳಲಿಕ್ಕಿಲ್ಲ ಎಂದು ನನ್ನ ಅಭಿಪ್ರಾಯ.

ಶ್ರೀ ಕೆ. ಪುಟ್ಟಸ್ವಾಮಿ.— ಜಯನಗರ ಆಸ್ಪತ್ರೆ ಬಗ್ಗೆ ಹೊಸ ಕಂಟ್ರಾಕ್ಟರಿಗೆ ಕೊಟ್ಟಿದ್ದರಿಂದ ಸ್ವಲ್ಪ ಹಣ ಜಾಸ್ತಿಯಾಯಿತು. ಆದರೆ ಈ ಯುಟಿಲಿಟಿ ಬಿಲ್ಡಿಂಗ್‌ಗೆ ಹಳೇ ಕಂಟ್ರಾಕ್ಟರ್ ಕೆಲಸ ಮಾಡಿದರು ಅವರಿಗೆ ಏತಕ್ಕೆ ರೇಟ್ ಜಾಸ್ತಿ ಕೊಟ್ಟಿದ್ದೀರಾ ?

ಶ್ರೀ ಡಿ. ಕೆ. ನಾಯ್ಕರ್.—ಇದರ ಬಗ್ಗೆ ಎಕ್ಸ್‌ಪರ್ಟ್ ಒಪಿನಿಯನ್ ತೆಗೆದುಕೊಂಡು ಕೊಟ್ಟಿದ್ದೇವೆ. ತಮಗೆ ಸವಿಸ್ತಾರವಾಗಿ ಬೇಕು ಎಂದರೆ ನಂತರ ನೋಡಿ ವಿವರ ಕೊಡುತ್ತೇನೆ. ಇನ್ನು ಮಾನ್ಯ ಕೃಷ್ಣನ್‌ರವರು ಶಿಕ್ಷಕರನ್ನು ಹೆಚ್ಚು ನೇಮಿಸಿದ್ದಾರೆ ಎಂದು ಹೇಳಿದರು, ನಂತರ ಸ್ಲಮ್ ಬೋರ್ಡ್ ಕೆಲಸ ಮಾಡಿಲ್ಲ ಎಂದು ಹೇಳಿದರು ಈ ಬಗ್ಗೆ ತಮಗೆ ತಿಳಿಸಬೇಕು ಎಂದರೆ ಬೆಂಗಳೂರು ನಗರ ಕಾರ್ಪೊರೇಷನ್ ವಶದಲ್ಲಿರತಕ್ಕಂಥಾದ್ದಕ್ಕೆ 70 ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. ಇನ್ನು ಮಿಕ್ಕ 16 ನಗರಗಳಿಗೆ 15 ಲಕ್ಷ ರೂಪಾಯಿ ಕೊಟ್ಟಿದ್ದೇವೆ ಎಂದು ಹೇಳಿದ್ದೇನೆ ಹುಬ್ಬಳ್ಳಿ ಧಾರವಾರ್‌ನಲ್ಲಿ 20 ಲಕ್ಷಕ್ಕೂ ಹೆಚ್ಚು ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಮೈಸೂರಿನಲ್ಲಿ 14 ಲಕ್ಷಕ್ಕೂ ಹೆಚ್ಚು ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ಇನ್ನು ಮಾಡುವಂತಹ ಕೆಲಸಗಳನ್ನು ನಡೆಸುತ್ತಿದ್ದೇವೆ. ಈಗ ಸ್ಲಮ್‌ನಲ್ಲಿ ಬಡವರಿಗೆ ಸೈಟುಗಳನ್ನು ಕೊಡುವ ಬಗ್ಗೆ ನಾವು 70 ಲಕ್ಷ ರೂಪಾಯಿ ಕೊಟ್ಟಿದ್ದೇವೆ. ಈಗಾಗಲೇ 25 ಸಾವಿರಕ್ಕೂ ಹೆಚ್ಚು ಸೈಟುಗಳನ್ನು ಹಂಚಿದ್ದೇವೆ. ಇನ್ನೂ ಹಂಚುವ ಕಾರ್ಯ ನಡೆದಿದೆ. ಈಗ ಸ್ಲಮ್ ಬೋರ್ಡ್ ಅಧ್ಯಕ್ಷರಾದ ಶ್ರೀ ಬಸವಣ್ಣಪ್ಪನವರು ನನಗೆ ಒದಗಿಸಿರತಕ್ಕ ಮಾಹಿತಿ ಪ್ರಕಾರ 5,977 ಸೈಟುಗಳನ್ನು ಹಂಚಲಿಕ್ಕೆ ಸಾಧ್ಯವಾಗಿದೆ ಎಂದು ಇನ್‌ಫರ್‌ಮೇಷನ್ ಕೊಟ್ಟಿದ್ದಾರೆ,

ಶ್ರೀ ಎಂ. ಎಸ್. ಕೃಷ್ಣನ್.—ಇವೊತ್ತು ಸ್ಲಮ್ ಕ್ಲಿಯರೆನ್ಸ್ ಬೋರ್ಡ್ ಮಾಡಿದ ಮೇಲೆ ಕೆಲವು ಅಧಿಕಾರಗಳನ್ನು ಅವಕ್ಕೆ ಕೊಡಬೇಕಾಗಿತ್ತು, ಅದನ್ನು ಕೊಟ್ಟಿಲ್ಲ ಎಂದು ಹೇಳುತ್ತೇನೆ.

ಶ್ರೀ ಡಿ. ಕೆ. ನಾಯ್ಕರ್.—ಈಗ ಅವರು 33 ಲಕ್ಷ ರೂಪಾಯಿಗಳ ಪ್ರಪೋಸಲ್ ಕಳುಹಿಸಿದ್ದಾರೆ, ಆ ಬಗ್ಗೆ ಇನ್ನು ಮಂಜೂರು ಆಗಿಲ್ಲ. ಇಲ್ಲಿಯವರೆಗೆ ಸೋಷಿಯೋ ಎಕನಾಮಿಕ್ ಸರ್ವೆ ಮಾಡಿದ್ದಾರೆ, ಮತ್ತೆ ಹೈಕೋರ್ಟ್‌ನವರು ಮೊದಲು ನೋಟಿಫಿಕೇಷನ್ ಸ್ಟ್ರಕ್‌ಡೌನ್ ಮಾಡಿದ್ದರಿಂದ ವಿಳಂಬ ಆಗಿದೆ ಎಂದು ಹೇಳಿದ್ದೇನೆ. ಇನ್ನು ಮಾನ್ಯ ಸದಸ್ಯರಾದ ವೆಂಕಟಲಿಂಗಯ್ಯನವರು 25

ಹಳ್ಳಿಗಳನ್ನು ಮೈಸೂರು ಕಾರ್ಪೊರೇಷನ್‌ಗೆ ಕೊಡಿಸಿದ್ದಾರೆ ಎಂದು ಹೇಳಿದರು. ಅವರು ಜನತೆ ಅಭಿಪ್ರಾಯ ಕೇಳಿಲ್ಲ ಅಂತಾ ಟೀಕೆ ಮಾಡಿದ್ದಾರೆ. ಅಲ್ಲಿ 25 ಹಳ್ಳಿ ಕೊಡಿಸಿಲ್ಲ ತಮಗೆ ಯಾರೋ ತಪ್ಪು ಮಾಹಿತಿ ಕೊಟ್ಟಿರಬೇಕು ಎಂದು ಕಾಣುತ್ತದೆ. ಅಲ್ಲಿ ಮುನಿಸಿಪಾಲಿಟಿ ಏರಿಯಾ ಏನು ಇದೆ ಅದನ್ನು ಮಾತ್ರ ಮಾಡಿದ್ದೇವೆ ಅಲ್ಲಿ ಏನು ಮಾಡಬೇಕಾದರೂ ಸೆಕ್ಷನ್ 4 ರ ಪ್ರಕಾರ 3 ತಿಂಗಳ ಅವಧಿ ಕೊಡಬೇಕಾಗುತ್ತದೆ. ನಂತರ ಕ್ರಮ ಕೈಗೊಳ್ಳಬೇಕಾಗುತ್ತದೆ. ಇನ್ನು ಸೊಂಡೂರು ವಿಚಾರದ ಬಗ್ಗೆ ಅಲ್ಲಿಗೆ ಹೆಚ್ಚು ಹಣ ಕೊಟ್ಟಿದ್ದಾರೆ ಎಂದು ಹೇಳಿದರು. ಇದರಲ್ಲಿ ಏನಾಗಿದೆ ಎಂದರೆ ಸಣ್ಣಸಣ್ಣ ಮುನಿಸಿಪಾಲಿಟಿಗಳು ಏನು ಇವೆ ಅವು ಒಂದೇ ವರ್ಷದಲ್ಲಿ ಸ್ಟ್ರೈಟ್ ಮಾಡಿಕೊಳ್ಳಲಿ ಎಂದು ಕೊಟ್ಟಿದ್ದೇವೆ. ಇನ್ನು ಮಾನ್ಯ ಸದಸ್ಯರನೇಕರು ಕೊಟ್ಟಂತ ಸಲಹೆಗಳಿಗೆ ಕೃತಜ್ಞತೆಯನ್ನು ಸಲ್ಲಿಸಿ, ಮಾನ್ಯ ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುವುದು ಇಷ್ಟು. ಈಗ ನಾನು ಮಂಡಿಸಿರತಕ್ಕಂತ ಬೇಡಿಕೆಗೆ ಮಂಜೂರಾತಿ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ.—ಅಧ್ಯಕ್ಷರೆ, 1961ನೇ ಇಸವಿಯಲ್ಲಿ ಕಾರ್ಪೊರೇಷನ್‌ನಲ್ಲಿ ಮಾತನಾಡಿದ್ದರ ಬಗ್ಗೆ ಮಾನ್ಯ ಮಂತ್ರಿಗಳು ಒಂದು ಕೊಟೇಷನ್ ಹಾಕಿದ್ದಾರೆ. ಹಿಂದೆ 2.25 ಲಕ್ಷ ರೂಪಾಯಿ ಆದಾಯ ಬರುತ್ತಿತ್ತು, ಈಗ 16 ಕೋಟಿ ರೂಪಾಯಿ ಆದಾಯ ಇದೆ. ಅದೇ ಪ್ರಕಾರ ಆಕ್ಟ್ರಾಯಿ ಹಿಂದೆ 35 ಲಕ್ಷ ರೂಪಾಯಿ ಇದ್ದದು ಇವೊತ್ತು 9 ಕೋಟಿ ರೂಪಾಯಿ ಆಗಿದೆ. ಅವೊತ್ತಿನ ಸನ್ನಿವೇಶಕ್ಕೆ ನಾನು ಏನೋ ಹೇಳಿದ್ದನ್ನು ತಂದು ಇವೊತ್ತು ನನ್ನ ಮೇಲೆ ಗೂಬೆ ಕೂರಿಸಲಿಕ್ಕೆ ಮಾಡಿದ್ದಾರೆ.

ಶ್ರೀ ಡಿ. ಕೆ ನಾಯ್ಕರ್.—ಮಾನ್ಯ ಸದಸ್ಯರು ಅಧಿಕಾರದಲ್ಲಿ ಇದ್ದಾಗ ಇದು ಉಪಯೋಗ ಎಂದು ಹೇಳುವುದು ಈಗ ಇಲ್ಲ ಎಂದು ಹೇಳುವುದು ಬೇಡ.

MADAM SPEAKER.— The question is :

"That the respective sums not exceeding the amounts mentioned in the list of Demands inclusive the sum granted "on account" be granted to the Government to defray the charges which will come in course of payment for the year ending 31st March 1978 in respect of Demand Nos. 21, 26 27 and 32"

The Motion was adopted and the sums were granted

The Motion of Demands for grants adopted by the House are reproduced below :

DEMAND No. 26— HOUSING (EXCLUDING GOVERNMENT RESIDENTIAL BUILDINGS)

"That a sum not exceeding Rs. 10,35,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of Housing (Excluding Government Residential Buildings)"

DEMAND No. 21—YOUTH SERVICE ART AND CULTURE

"That a sum not exceeding Rs. 3,77,48,000 inclusive of the sum granted on account' be granted to the Government to defray the charges which will come in course of payment during the financial

year ending 31st day of March 1978 in respect of 'Youth Services, Art and Culture"

DEMAND NO. 27—URBAN DEVELOPMENT ETC.,

"That a sum not exceeding Rs. 6 18 90,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of "Urban Development etc."

DEMAND NO. 32. –POLITICAL PENSIONS

"That a sum not exceeding Rs 65 00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of Political Pensions".

Demand No.—20 and 22

SRI S. M. YAHYA (Minister for University Education and Wakfs) Madam, on the recommendation of the Governor, I beg to move

"That a sum not exceeding Rs. 21,20 14,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of Demand No 20 Higher Education and Wakfs".

MADAM SPEAKER.— Motion moved :

"That a sum not exceeding Rs. 21,20,14,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of Demand No. 20 Higher Education and Wakfs".

SRI MALLIKARJUNA KHARGE.—Madam, on the recommendation of the Governor, I beg to move :

"That a sum not exceeding Rs. 108,36.48,000 inclusive of the sum granted 'on account' be granted to the Government to defray the chages which will come in course of payment during the financial year ending 31st day of march 1978 in respet of Demand No. 22 'Primary and Secondary Education'

MADAM SPEAKER.—Motion moved:

"That a sum not exceeding Rs. 108,36,48,000 inclusive of the sum granted 'on account' be granted to the Government to defray the charges which will

come in course of payment during the financial year ending 31st day of March 1978 in respect of Demand No. 22 'Primary and Secondary Education''.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಸನ್ಮಾನ್ಯ ಅಧ್ಯಕ್ಷಿಣಿಯವರೇ ಈ ವಿದ್ಯಾ ಇಲಾಖೆಗೆ ಸಂಬಂಧಪಟ್ಟಂತೆ ನಮ್ಮ ಮುಂದಿಟ್ಟಿರುವ ಎರಡೂ ಬೇಡಿಕೆಗಳನ್ನು ವಿರೋಧಿಸುತ್ತಾ ಕೆಲವು ಮಾತುಗಳನ್ನಾಡಬೇಕೆಂದು ಇಷ್ಟಪಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಇವತ್ತು ಒಂದು ರಾಷ್ಟ್ರದ ಅಥವಾ ಒಂದು ಸಮಾಜದ ಭವಿಷ್ಯವನ್ನು ನಿರ್ಧಾರ ಮಾಡತಕ್ಕಂಥಾದ್ದು ವಿದ್ಯಾಭ್ಯಾಸ. ಈ ಇಲಾಖೆ ಸಮಾಜದ ದೃಷ್ಟಿಯಿಂದ ಮತ್ತು ಗಾತ್ರದ ದೃಷ್ಟಿಯಿಂದ ಕೂಡ ಅಷ್ಟೇ ಪ್ರಾಮುಖ್ಯವಾದ ಪಾತ್ರವನ್ನು ವಹಿಸಿದೆ ಎಂದು ಹೇಳಿದರೆ ಹೆಚ್ಚಾಗಲಿಕ್ಕಿಲ್ಲ. ಆದರೆ ದುರ್ದೈವವಶಾತ್ ಈ ನಾಡಿನ ಎಲ್ಲ ಮಕ್ಕಳು ಒಂದೇ ತರಹ ವಿದ್ಯಾಭ್ಯಾಸ ಪಡೆದು ಒಂದೇ ಸಮಾಜದ ಭಾಗವಾಗಿ ಬಾಳುವುದಕ್ಕೆ ಈ ಇಲಾಖೆ ಶ್ರಮಿಸುತ್ತಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ತಾರತಮ್ಯ ಇದೆ, ವ್ಯತ್ಯಾಸ ಇದೆ. ಸಮಾಜದಲ್ಲಿ ಹೇಗೆ ಮೇಲು ಕೀಳು, ದೊಡ್ಡವನು, ಸಣ್ಣವನು ಎನ್ನುವ ಬೇಧಭಾವ ಇದೆ ಅದೇ ರೀತಿ ಇಲ್ಲೂ ಕೂಡ ತಾರತಮ್ಯ ಇದೆ. ಇದನ್ನು ನಿವಾರಣೆ ಮಾಡುವುದಕ್ಕೆ ಈ ಸರ್ಕಾರ ಮನಸ್ಸು ಹರಿಸುತ್ತಿಲ್ಲ ಎಂದು ನಾನು ಬಹಳ ಕಟುವಾಗಿ ಟೀಕಿಸ ಬೇಕಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರಿಗೂ ಸಮಾನ ಅವಕಾಶ ಸಿಕ್ಕದಿದ್ದರೂ ಚಿಂತೆಯಿಲ್ಲ. ನಮಗೆ ಸಿಕ್ಕುವ ವಿದ್ಯಾಭ್ಯಾಸವಾದರೂ ಏಕರೂಪವಾಗಿರಲಿ. ಒಬ್ಬರ ಮಕ್ಕಳು ಬಾಲ್ಡ್‌ವಿನ್ ಸ್ಕೂಲ್‌ನಲ್ಲಿ ಓದುವುದು, ಇನ್ನೊಬ್ಬರ ಮಕ್ಕಳು ಕಿತ್ತೂರು ಚನ್ನಮ್ಮ ಸ್ಕೂಲ್‌ನಲ್ಲಿ ಓದುವುದು, ಮತ್ತೊಬ್ಬರ ಮಕ್ಕಳು ಸೊಂಡೂರು ಮಹಾರಾಜರ ಅಂದರೆ ಹಣಕಾಸಿನ ಸಚಿವರ ಸ್ಕೂಲ್‌ನಲ್ಲಿ ಓದುವುದು ಮಗದೊಬ್ಬರ ಮಕ್ಕಳು ಸರಿಯಾಗಿ ಕೂತುಕೊಳ್ಳುವುದಕ್ಕೆ ಛಾವಣಿ ಇಲ್ಲದೇ ಇರುವಂಥ ಸ್ಥಳದಲ್ಲಿ ಓದುವುದು ಈ ರೀತಿ ವಿದ್ಯಾಭ್ಯಾಸ ಸಿಕ್ಕುವುದಾದರೆ, ಸಮಾಜದಲ್ಲಿ ಎಲ್ಲ ಮಕ್ಕಳೂ ಒಳ್ಳೆಯ ವ್ಯಕ್ತಿತ್ವವನ್ನು ಪಡೆಯುವುದಕ್ಕೆ ಸಾಧ್ಯವೇ ? ಎಂಬುದನ್ನು ಸರ್ಕಾರ ದವರು ಗಮನಿಸಬೇಕು.

ಇವತ್ತು ಪ್ರಾಥಮಿಕ ಶಿಕ್ಷಣದ ಇಲಾಖೆಯನ್ನು ಹೊತ್ತಿರತಕ್ಕ ಮಾನ್ಯ ಸಚಿವರು ದುರ್ಬಲ ವರ್ಗದಿಂದ ಆರಿಸಿ ಬಂದಿದ್ದಾರೆ, ಶೋಷಿತ ವರ್ಗದಿಂದ ಆರಿಸಿ ಬಂದಿದ್ದಾರೆ. ಇಂಥವರ ಕೈಗೆ ಈ ಒಂದು ಇಲಾಖೆಯು ಸಿಕ್ಕಿರುವಾಗ ಬಡ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಅವರು ಯೋಚನೆ ಮಾಡುತ್ತಿಲ್ಲವೆಂದರೆ ನಾವು ಇವತ್ತು ವಿಷಾದಪಡಬೇಕಾಗುತ್ತದೆ. ನಮ್ಮ ರಾಜ್ಯದ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಕೊಡಬೇಕು. ಅವರಿಗೆ ಸಮಾಜದಲ್ಲಿ ಉತ್ತಮ ಸ್ಥಾನಮಾನ ಸಿಕ್ಕ ಬೇಕೆಂದಿರುವಾಗ ಇದರ ಬಗ್ಗೆ ತಮಗೆ ಕಳಕಳಿ ಇಲ್ಲದಿದ್ದರೆ ಕಲ್ಪನೆ ಇಲ್ಲದಿದ್ದರೆ ನಿಮಗೆ ಈ ಇಲಾಖೆಯನ್ನು ಕೊಟ್ಟಿದ್ದಕ್ಕೆ ಏನು ಸಾರ್ಥಕವಾಯಿತು ಎಂದು ತಮ್ಮನ್ನು ಕೇಳಬೇಕಾಗುತ್ತದೆ. ನಿಮಗೆ ಒಳ್ಳೆಯ ಜವಾಬ್ದಾರಿ ಸ್ಥಾನ ಸಿಕ್ಕಿದ್ದರೂ ಅದನ್ನು ಸದುಪಯೋಗ ಮಾಡಿಕೊಳ್ಳಲಿಲ್ಲವಲ್ಲಾ ಎಂದು ವಿಷಾದಿಸಬೇಕಾಗಿದೆ.

ಮಾನ್ಯ ಅಧ್ಯಕ್ಷರೇ, ನಮ್ಮ ಸರ್ಕಾರದವರೇ ಕೊಟ್ಟಿರುವ ವರದಿಯಂತೆ ಇವತ್ತು ನಮ್ಮ ರಾಜ್ಯದಲ್ಲಿ 1242 ನರ್ಸರಿ ಶಾಲೆಗಳಿವೆ. ಇದರಲ್ಲಿ 6 ವರ್ಷದ ಕೆಳಗಿರುವ ಸುಮಾರು 86,189 ಮಕ್ಕಳು ವಿದ್ಯಾಭ್ಯಾಸವನ್ನು ಪಡೆಯುತ್ತಿವೆ. ಅದರಲ್ಲೂ ಈ ಸ್ಕೂಲುಗಳಲ್ಲಿ ಸುಮಾರು 75 ಪರ್ಸೆಂಟನಷ್ಟು ಮೈಸೂರು, ಬೆಂಗಳೂರು, ಹುಬ್ಬಳ್ಳಿ ಮುಂತಾದ ದೊಡ್ಡ ದೊಡ್ಡ ನಗರಗಳಲ್ಲಿವೆ. ತಾಲ್ಲೂಕು ಮಟ್ಟದಲ್ಲಿ ಅಥವಾ ಗ್ರಾಮ ಪಂಚಾಯಿತಿಗಳ ಮಟ್ಟದಲ್ಲಿ ಬಹಳ ಕಡಿಮೆ ಇವೆ. ಅದೂ ಹೋಗಲಿ ನಮ್ಮ ರಾಜ್ಯದಲ್ಲಿ 26 ಸಾವಿರ ಗ್ರಾಮಗಳಿವೆ. ಪ್ರತಿಯೊಂದು ಗ್ರಾಮಕ್ಕೂ ಒಂದೊಂದು ನರ್ಸರಿ ಶಾಲೆ ಎಂದರೂ 26 ಸಾವಿರ ಸ್ಕೂಲ್‌ಗಳಿರಬೇಕಾಗಿತ್ತು. ಅದೂ ಹೋಗಲಿ ನಮ್ಮ ರಾಜ್ಯ ದಲ್ಲಿ 5 ಸಾವಿರ ಪಂಚಾಯಿತಿಗಳಿವೆ, ಒಂದೊಂದು ಪಂಚಾಯಿತಿಗೆ ಒಂದೊಂದು ಶಾಲೆ ಎಂದರೂ 5 ಸಾವಿರ ಶಾಲೆಗಳು ಇರಬೇಕಾಗಿತ್ತು. 6 ವರ್ಷದ ಕೆಳಗಿರುವ ಮಕ್ಕಳ ಮನಸ್ಸನ್ನು ಉತ್ತಮ ಮಾರ್ಗದಲ್ಲಿ ತಿರುಗಿಸುವುದಕ್ಕೆ, ಅವರಿಗೆ ಒಂದು ಒಳ್ಳೆಯ ನೆಲೆಗಟ್ಟನ್ನು ಹಾಕುವ ಸಲುವಾಗಿ

ಪ್ರತಿಯೊಂದು ಗ್ರಾಮಗಳಲ್ಲೂ ಒಂದೊಂದು ಶಾಲೆಯನ್ನು ತೆರೆಯಬೇಕೆಂದು ನಾನು ಬಹಳ ಹಿಂದೆಯೇ ಹೇಳಿದ್ದೇನೆ. ಇದರ ಬಗ್ಗೆ ತಾವು ಯಾವುದೇ ಒಂದು ಸಾಧನೆಯನ್ನೂ ಮಾಡಿಲ್ಲವೆಂದು ಹೇಳಬೇಕಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಹರಿಜನ ಗಿರಿಜನರು, ದುರ್ಬಲ ವರ್ಗದವರು, ಕೂಲಿಕಾರರೇ ಜಾಸ್ತಿಯಾಗಿರುತ್ತಾರೆ, ಇವರು ತಮ್ಮ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಆಸಕ್ತಿ ವಹಿಸುವುದಿಲ್ಲ. ಆದುದರಿಂದ ಪ್ರತಿಯೊಂದು ಗ್ರಾಮ ಪಂಚಾಯಿತಿಗಳಲ್ಲೂ ಒಂದೊಂದು ನರ್ಸರಿ ಶಾಲೆಗಳನ್ನು ತೆರೆಯಲು ವ್ಯವಸ್ಥೆ ಮಾಡಬೇಕೆಂದು ಹೇಳಬಯಸುತ್ತೇನೆ.

ಇವತ್ತು ನಮ್ಮ ರಾಜ್ಯದಲ್ಲಿ ಪ್ರಾಥಮಿಕ ಶಾಲೆಗಳು 33,137 ಇದ್ದು ಅದರಲ್ಲಿ 34 ಲಕ್ಷ 44 ಸಾವಿರ ಮಕ್ಕಳು ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಗಣನೀಯ ಮಟ್ಟದಲ್ಲಿ ಶಾಲೆಗಳಲ್ಲಿ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದೀರಿ. ಎನ್‌ರೋಲ್‌ಮೆಂಟ್ ಎಷ್ಟು ಎಂದು ಹೇಳುತ್ತಿದ್ದೀರಿ. ಆದರೆ 1, 2, 3, 4ನೇ ತರಗತಿಗಳಲ್ಲಿ ಪ್ರತಿವರ್ಷ ಸರಾಸರಿ ಹಾಜರಾತಿ ಎಷ್ಟು ಎಂಬುದನ್ನು ಮಾತ್ರ ಸರ್ಕಾರದವರು ಕೊಡುತ್ತಿಲ್ಲ. ನಿಮ್ಮ ಜನಗಣತಿ ಪ್ರಕಾರ 6 ವರ್ಷದಿಂದ 10 ವರ್ಷದವರೆಗಿರುವ ಮಕ್ಕಳ ಹಾಜರಾತಿ ಈ ಪ್ರಾಥಮಿಕ ಶಾಲೆಗಳಲ್ಲಿ ಎಷ್ಟಿದೆ ಎಂಬುದನ್ನು ಇವತ್ತಿನವರೆಗೂ ಹೇಳಿಲ್ಲ. ನನಗೆ ತಿಳಿದಿರುವ ಪ್ರಕಾರ ನಗರ ಪ್ರದೇಶಗಳಲ್ಲಿ ಮಕ್ಕಳ ಸರಾಸರಿ ಹಾಜರಾತಿ 60 ಕ್ಕಿಂತ ಹೆಚ್ಚಿಗೆ ಹೋಗಿಲ್ಲ, ಹಳ್ಳಿಗಳಲ್ಲಿ 50 ಕ್ಕಿಂತ ಹೆಚ್ಚಿಗೆ ಹೋಗಿಲ್ಲ ಅದರಲ್ಲೂ ನಗರ ಪ್ರದೇಶಗಳಲ್ಲಿ ಹರಿಜನ ಗಿರಿಜನರ ಮಕ್ಕಳ ಹಾಜರಾತಿ ಸರಾಸರಿ 40 ಗ್ರಾಮಾಂತರ ಪ್ರದೇಶಗಳಲ್ಲಿ 20ಕ್ಕೆ ಕೂಡ ಹೋಗಿಲ್ಲ. ಶಾಲೆಗಳಲ್ಲಿ ಮಕ್ಕಳಿಗೆ ಪೌಷ್ಟಿಕಾಹಾರವನ್ನು ಹಂಚುವ ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ ಮಕ್ಕಳು ಅದರ ಘಮ ಘಮ ವಾಸನೆಗೆ ಬಂದು ಬಿಡುತ್ತವೆ ಇದರಿಂದಾಗಿ ಶಾಲೆಗಳಲ್ಲಿ ಮಕ್ಕಳ ಹಾಜರಾತಿ ಜಾಸ್ತಿಯಾಗುತ್ತಿದೆ ಮತ್ತು ಇದಕ್ಕಾಗಿ ನಾವು 6 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆಂದು ಮಾನ್ಯ ಸಚಿವರು ಹೇಳುತ್ತಾರೆ. ಇದರ ಬಗ್ಗೆ ನಾನು ಬಹಳ ಹಿಂದೆಯೇ ಹೇಳಿದ್ದೇನೆ. ಈ 6 ಕೋಟಿ ರೂಪಾಯಿಗಳನ್ನು ತಾವು ಏನು ತೆಗೆದಿಟ್ಟಿದ್ದೀರಿ ಇದನ್ನು ಮಧ್ಯದಲ್ಲಿ ಯಾರೋ ನುಂಗಿ ಹಾಕುತ್ತಾರೆ, ಆ ಮಕ್ಕಳಿಗೆ ಇದು ಸಿಕ್ಕುವುದಿಲ್ಲ ಎಂದು. ಒಟ್ಟಿನಲ್ಲಿ ಹೇಳುವುದಾದರೆ ಗ್ರಾಮಾಂತರ ಪ್ರದೇಶದ ಶಾಲೆಗಳಲ್ಲಿ ಮಕ್ಕಳ ಹಾಜರಾತಿಯನ್ನು ಜಾಸ್ತಿ ಮಾಡುವುದಕ್ಕೆ ಯಾವುದೇ ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನೂ ಕೂಡ ತಾವು ಹಾಕಿಕೊಳ್ಳಲಿಲ್ಲವೆಂದು ಹೇಳಬಯಸುತ್ತೇನೆ

3-00 ಪಿ.ಎಂ.

ಮಾನ್ಯ ಅಧ್ಯಕ್ಷರೇ ಮತ್ತೊಂದು ವಿಷಯವನ್ನು ಹೇಳುತ್ತೇನೆ. ಇದರ ಬಗ್ಗೆ ಕನಿಷ್ಟಪಕ್ಷ ಪ್ರಾಥಮಿಕ ಶಿಕ್ಷಣವನ್ನಾದರೂ ಸರ್ಕಾರ ವಹಿಸಿಕೊಳ್ಳಬೇಕೆಂದು ಹಿಂದೆ ಬೇಕಾದಷ್ಟು ಸಲ ವಾದ ಮಾಡಿದ್ದೇವೆ. ಇದು ಖಾಸಗಿಯವರ ಕೈಯಲ್ಲಿ ನಡೆಯುತ್ತಿರುವುದರಿಂದ ಅವರು ಇದರಿಂದ ಲಾಭ ಪಡೆಯುವುದಕ್ಕೆ ಬಹಳ ಅನುಕೂಲಮಾಡಿಕೊಟ್ಟಂತಾಗಿರುತ್ತದೆ. ಇದನ್ನು ತಪ್ಪಿಸಲು ಪ್ರಾಥಮಿಕ ಶಿಕ್ಷಣವನ್ನು ಸರ್ಕಾರವೇ ವಹಿಸಿಕೊಳ್ಳಬೇಕೆಂದು ಹೇಳುತ್ತೇನೆ. ನಾನು ಮೊದಲೇ ಹೇಳಿದಂತೆ ಈ ಒಂದು ಹಂತದಲ್ಲಿಯೇ ಸಮಾನತೆಯ ವಿದ್ಯಾಭ್ಯಾಸದ ಅವಕಾಶ ಎಲ್ಲ ಮಕ್ಕಳಿಗೆ ಸಿಗಬೇಕು. ಇಲ್ಲದಿದ್ದರೆ ಒಂದು ರೀತಿಯಾದ ಡಿಸ್‌ಪ್ಯಾರಿಟಿ ವಿದ್ಯಾಭ್ಯಾಸದಲ್ಲಿ ಉಂಟಾಗುವುದಕ್ಕೆ ಅವಕಾಶವಾಗುತ್ತದೆ. ನಮ್ಮ ಊರಿನಲ್ಲಿ ಪ್ರೈಮರಿ ಶಾಲೆಗೆ ಹೋಗತಕ್ಕಂಥ ಮಕ್ಕಳು ಏಳನೇ ಕ್ಲಾಸ್‌ನಲ್ಲಿ ಓದುತ್ತಿದ್ದರೂ ಕೂಡ ಅವರಿಗೆ ಗುಣಾಕಾರ ಭಾಗಕಾರ ಮಾಡುವುದಕ್ಕೆ ಬರುವುದಿಲ್ಲ. ಅದೇ ಪಟ್ಟಣದಲ್ಲಿರುವ ಮಕ್ಕಳು ಕಾನ್‌ವೆಂಟ್‌ಗಳಂಥ ಸ್ಕೂಲ್‌ಗಳಲ್ಲಿ ಓದಿ ಇಂಗ್ಲೀಷ್‌ನಲ್ಲಿ ಮಾತನಾಡಲು ಕಲಿತು ಬಿಟ್ಟಿರುತ್ತಾರೆ. ನಮ್ಮ ಹುಡುಗರಿಗೆ 5ನೇ ಕ್ಲಾಸಿನಿಂದ 7ನೇ ಕ್ಲಾಸಿಗೆ ಬಂದಿದ್ದರೂ ಕೂಡ ಆಲ್ಫಬೆಟ್ಸ್ ಎ.ಬಿ.ಸಿ.ಡಿ. ಯನ್ನು ಸರಿಯಾಗಿ ಓದಲು ಬರುವುದಿಲ್ಲ. ಸೋಫಿಯಾ ಕಾನ್‌ವೆಂಟ್‌ನಂಥ ಶಾಲೆಗಳಲ್ಲಿ ಪ್ರಾರಂಭದಿಂದಲೇ ಮಕ್ಕಳಿಗೆ ಇಂಗ್ಲೀಷ್‌ನಲ್ಲಿ ವಿದ್ಯಾಭ್ಯಾಸವನ್ನು ಆರಂಭಿಸುತ್ತಾರೆ. ಆದ್ದರಿಂದ ಅವರ ವಿದ್ಯಾಭ್ಯಾಸದ ಮಟ್ಟವು ಕಾಲೇಜ್ ಮಟ್ಟದಲ್ಲಿ ಉತ್ತಮವಾಗಿರುತ್ತದೆ. ಆದರೆ ಹಳ್ಳಿಗಳಲ್ಲಿ ವಿದ್ಯಾಭ್ಯಾಸ ಮಾಡಿದ ಮಕ್ಕಳಿಗೆ ಈ ಒಂದು ಸೌಲಭ್ಯವಿಲ್ಲದಿರುವು

ದರಿಂದ ಅವರು ಹಿಂದುಳಿಯುವುದಕ್ಕೆ ಕಾರಣವಾಗಿರುತ್ತದೆ ಆದ್ದರಿಂದ ನಾನು ಸ್ಪಷ್ಟವಾಗಿ ಪ್ರಾಥಮಿಕ ಶಿಕ್ಷಣವನ್ನು ಸರ್ಕಾರವೇ ವಹಿಸಿಕೊಳ್ಳಬೇಕೆಂದು ಹೇಳುತ್ತೇನೆ. ಇದರಿಂದ ಸರ್ಕಾರಕ್ಕೆ ಹಣಕಾಸಿನ ಪರಿಸ್ಥಿತಿಯಿಂದಾಗಲೀ, ವ್ಯವಹಾರ ದೃಷ್ಟಿಯಿಂದಾಗಲೀ ಯಾವ ವಿಧವಾದ ಭಾರವಾಗುವುದಿಲ್ಲ. ಇದನ್ನು ಸುಲಭವಾಗಿ ಸರ್ಕಾರವೇ ವಹಿಸಿಕೊಳ್ಳುವಂಥ ಸಂದರ್ಭವಿರುತ್ತದೆ.

ಸರ್ಕಾರದವರೇ ಕೊಟ್ಟಿರತಕ್ಕಂಥ ಅಂಕಿ ಅಂಶಗಳನ್ನು ನೋಡಿದರೆ ನಮಗೆ ಸ್ಪಷ್ಟವಾಗಿ ಇದರಿಂದ ಗೊತ್ತಾಗುವುದೇನೆಂದರೆ ಇದರಿಂದ ಯಾವ ಭಾರವೂ ಬೀಳುವುದಿಲ್ಲವೆಂದು ತಿಳಿಯುತ್ತದೆ. ಈವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಲೋಯರ್ ಪ್ರೈಮರಿ ಸ್ಕೂಲ್ ಸರ್ಕಾರದ ಕೈಯಲ್ಲಿ 21,397 ಇದೆ. ಖಾಸಗಿಯವರ ಕೈಯಲ್ಲಿ 407 ಶಾಲೆಗಳು ಇವೆ. ಹೈಯರ್ ಪ್ರೈಮರಿ ಶಾಲೆಗಳು ಸುಮಾರು 10,500 ಇದೆ. ಖಾಸಗಿಯವರ ಕೈಯಲ್ಲಿ 1,138 ಶಾಲೆಗಳು ಇವೆ. ಒಟ್ಟು ಸರ್ಕಾರದವರ ಕೈಯಲ್ಲಿ 33,137 ಪ್ರಾಥಮಿಕ ಶಾಲೆಗಳು ಇದ್ದಂತಾಯಿತು. ಖಾಸಗಿಯವರ ಕೈಯಲ್ಲಿರತಕ್ಕಂಥದ್ದು 1540 ಶಾಲೆಗಳಷ್ಟಾಗುತ್ತದೆ. ಈವತ್ತು 33 ಸಾವಿರ ಶಾಲೆಗಳನ್ನು ನಡೆಸತಕ್ಕಂಥ ನಮಗೆ 1500 ಶಾಲೆಗಳನ್ನು ವಹಿಸಿಕೊಂಡು ನಡೆಸುವುದಕ್ಕೆ ಆಗುವುದಿಲ್ಲವೆಂದು ಹೇಳಿದರೆ ನಮ್ಮ ದುರ್ಬಲತೆಯನ್ನು ತೋರಿಸಿದಂತಾಗುತ್ತದೆ. ಇದರಲ್ಲಿ ಖಾಸಗಿ ಶಾಲೆಗಳು ಬೆಂಗಳೂರಿನಲ್ಲಿಯೇ ಜಾಸ್ತಿ ಇದೆ ಎಂದು ಹೇಳಿದರೆ ತಪ್ಪಾಗಲಾರದು. ಲೋಯರ್ ಪ್ರೈಮರಿ ಶಾಲೆಗಳು ಸೌತ್ ಬೆಂಗಳೂರಿನಲ್ಲಿ 80 ಇದ್ದರೆ ಹೈಯರ್ ಪ್ರಾಥಮಿಕ ಶಾಲೆಗಳು 223 ಇದೆ. ಬೆಂಗಳೂರು ಸಿಟಿ ನಾರ್ತ್‌ನಲ್ಲಿ 98 ಲೋಯರ್ ಪ್ರೈಮರಿ ಶಾಲೆಗಳು ಇದ್ದರೆ ಅಪ್ಪರ್ ಪ್ರೈಮರಿ ಶಾಲೆಗಳು 144 ಇವೆ. ಬೆಂಗಳೂರನ್ನು ಬಿಟ್ಟರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೌತ್ ಕೆನರಾದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪ್ರೈಮರಿ ಶಾಲೆಗಳು ಖಾಸಗಿಯವರ ಕೈಯಲ್ಲಿಯೇ ಇರುತ್ತದೆ ಇದನ್ನು ನಾವು ವಹಿಸಿಕೊಳ್ಳುವುದರಿಂದ ನಮಗೆ ಯಾವ ಬಾಧಕವೂ ಆಗುವುದಿಲ್ಲವೆಂದು ಹೇಳುತ್ತೇನೆ. ಜೊತೆಗೆ ಹಣಕಾಸಿನ ಪರಿಸ್ಥಿತಿಯ ದೃಷ್ಟಿಯಿಂದಲೂ ಆಲೋಚನೆ ಮಾಡುವುದಾದರೆ ನಮಗೆ ಏನು ಬಾಧಕವಾಗುವುದಿಲ್ಲವೆಂದು ಹೇಳುತ್ತೇನೆ. ಏತಕ್ಕೆಂದರೆ ಸರ್ಕಾರದವರು ಕೊಟ್ಟಿರತಕ್ಕಂಥ ಹಣಕಾಸಿನ ವರದಿಯನ್ನು ನೋಡುವುದಾದರೆ ಪ್ರೈಮರಿ ಎಜುಕೇಷನ್‌ಗೆ ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆಂದರೆ ಸುಮಾರು ಪ್ಲಾನ್‌ಗೆ 9 ಕೋಟಿ 70 ಲಕ್ಷ ಇದ್ದರೆ ನಾನ್ ಪ್ಲಾನ್‌ಗೆ 62 ಕೋಟಿ 63 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿರುತ್ತಾರೆ. ಇದರಲ್ಲಿ ಅಸಿಸ್ಟೆನ್ಸ್ ಟು ನಾನ್ ಗೌವರ್ನಮೆಂಟ್ ಪ್ರೈಮರಿ ಸ್ಕೂಲ್ಸ್ ಎಂದು ಇದೆ. 6.32 ಕೋಟಿ ರೂಪಾಯಿಗಳು ಮಾತ್ರ ಈವತ್ತು ಖಾಸಗಿಯವರು ನಡೆಸುತ್ತಿರತಕ್ಕಂಥ ಪ್ರಾಥಮಿಕ ಶಾಲೆಗಳಿಗೆ ಈವತ್ತಿನ ದಿವಸ ನಾವು ಹಣವನ್ನು ಕೊಡುತ್ತಿದ್ದೇವೆ. ಸುಮಾರು 112 ಕೋಟಿ ರೂಪಾಯಿಗಳಷ್ಟು ಪ್ರಾಥಮಿಕ ಶಿಕ್ಷಣಕ್ಕಾಗಿ ಖರ್ಚು ಮಾಡುತ್ತಿದ್ದೇವೆಂದರೆ ಸೆಕೆಂಡರಿ ಶಿಕ್ಷಣಕ್ಕಾಗಿ ನಾವು 6 ಕೋಟಿ, ಇನ್ನೂ ಹೆಚ್ಚಿಗೆ ಅಂದರೆ 7 ಕೋಟಿ ರೂಪಾಯಿಗಳವರೆಗೂ ಖರ್ಚು ಮಾಡುತ್ತಿದ್ದೇವೆ. ಆದ್ದರಿಂದ ಪ್ರಾಥಮಿಕ ಶಿಕ್ಷಣ ಮಟ್ಟದಲ್ಲಿಯಾದರೂ ನಾವು ಸಂಪೂರ್ಣವಾಗಿ ಸರ್ಕಾರದ ಹತೋಟಿಯಲ್ಲಿ ಎಲ್ಲವನ್ನೂ ತರುವುದಕ್ಕೆ ಸಾಧ್ಯತೆ ಇದೆ. ಇದನ್ನು ಏತಕ್ಕೆ ಪ್ರಯತ್ನ ಮಾಡುತ್ತಿಲ್ಲವೆಂದು ನನಗಾದರೂ ಬಹಳ ಆಶ್ಚರ್ಯವಾಗುತ್ತಿದೆ. ಆಡಳಿತ ದೃಷ್ಟಿಯಿಂದಲೂ ಸುಲಭವಾಗಿದ್ದು, ಹಣಕಾಸಿನ ಪರಿಸ್ಥಿತಿಯ ದೃಷ್ಟಿಯಿಂದಲೂ ಸುಲಭವಾಗಿದ್ದು ಯೂನಿವರ್ಸಿಟಿ ಎಜುಕೇಶನ್‌ಗೆ 21 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ. ಇಷ್ಟೊಂದು ದುಡ್ಡನ್ನು ಯಾವ ಬಾಬಿಗೂ ಖರ್ಚು ಮಾಡುತ್ತಿಲ್ಲ ಆದುದರಿಂದ ನಾನು ಹೇಳುತ್ತೇನೆ ಈವತ್ತಿಗೂ ನಾನು ಬೆಂಬಲ ಕೊಡುವುದಕ್ಕೆ ತಯಾರಾಗಿದ್ದೇನೆ, ಪ್ರಾಥಮಿಕ ಶಿಕ್ಷಣವನ್ನು ಸಂಪೂರ್ಣವಾಗಿ ಸರ್ಕಾರದವರೇ ತಮ್ಮ ಹತೋಟಿಗೆ ತೆಗೆದುಕೊಳ್ಳುವುದಾದರೆ 6 ಕೋಟಿಯಲ್ಲ 10 ಕೋಟಿಯಾದರೂ ಚಿಂತೆ ಇಲ್ಲ ಇದನ್ನು ನಿರ್ವಹಿಸಲೇಬೇಕು ಎಂದು ಹೇಳುತ್ತೇನೆ. ನಮಗೆ ಸ್ವಾತಂತ್ರ್ಯ ಬಂದು 30 ವರ್ಷಗಳಾದರೂ ಈವತ್ತಿನವರೆಗೂ ಪ್ರಾಥಮಿಕ ಶಿಕ್ಷಣ ಮಟ್ಟದಲ್ಲಿಯಾದರೂ ಸಮಾನತೆಯ ವ್ಯವಸ್ಥೆಯಲ್ಲಿ ವಿದ್ಯಾಭ್ಯಾಸವನ್ನು ತರಲಿಲ್ಲವೆಂದರೆ ಪ್ರಜಾಪ್ರಭುತ್ವ ವ್ಯವಸ್ಥೆ ಏನೆಂದು ಅರ್ಥವಾಗುವುದಿಲ್ಲ. ಇನ್ನೂ ಕೂಡ ಪ್ರಾಥಮಿಕ ಶಿಕ್ಷಣವು ವ್ಯಾಪಾರಸ್ಥರಿಗೆ, ಲಾಭಕೋರರಿಗೆ, ಸ್ವಜನ ಪಕ್ಷಪಾತ ಜನರಿಗೆ ಲಾಭ ಗಳಿಸಲು ಅವಕಾಶವಾಗುತ್ತಿದೆ. ನನಗೆ ತಿಳಿದ ಮಟ್ಟಿಗೆ ಹೇಳುವುದಾದರೆ

ಬೆಂಗಳೂರು ನಗರದಲ್ಲಿ ಪ್ರಾಥಮಿಕ ಶಾಲೆಗಳು ನಡೆಯುತ್ತಿರುವ ಅನೇಕ ಖಾಸಗಿ ಶಾಲೆಗಳ ಮಾಲೀಕರು ಈವತ್ತಿನ ದಿವಸ ಎಷ್ಟೊಂದು ಅಕ್ರಮ ಲಾಭ ಪಡೆಯುತ್ತಿದ್ದಾರೆಂದು ಈ ಸಂದರ್ಭದಲ್ಲಿ ಹೇಳುವುದಾದರೆ, ಸಾವಿರಾರು ಶಾಲೆಗಳಲ್ಲಿ ಅನೇಕ ಜನ ಉಪಾಧ್ಯಾಯರು ಕೆಲಸ ಮಾಡದಿದ್ದರೂ ಕೂಡ ಸಂಬಳವನ್ನು ತೆಗೆದು ಕೊಳ್ಳುತ್ತಿದ್ದಾರೆ. ಹೆಬ್ಬೆಟ್ಟಿನ ಗುರುತು ಕಾರ್ಬೆಟ್ಟಿನ ಗುರುತು ಹಾಕಿಸಿಕೊಂಡು ಖಾಸಗಿ ಶಾಲೆಯವರು ಲಾಭ ಪಡೆಯುತ್ತಿರುವಂಥ ಜನರು ಇದ್ದಾರೆ. ಬೆಂಗಳೂರು ಜಾಯಿಂಟ್ ಡೈರೆಕ್ಟರ್ ಆಫ್ ಎಜ್ಯುಕೇಷನ್ ಅವರು ತನಿಖೆ ಮಾಡಿದಾಗ ಸುಮಾರು 8 ನೂರು ಜನ ಉಪಾಧ್ಯಾಯರು ಬೇರೆಯವರ ಹೆಸರಿನಲ್ಲಿ ಸಂಬಳವನ್ನು ಪಡೆಯುತ್ತಿದ್ದಾರೆ ಎನ್ನುವ ವರದಿ ಸರ್ಕಾರಕ್ಕೆ ಕೊಟ್ಟಿದ್ದಾರೆ ಇದರ ಬಗ್ಗೆ ಈವತ್ತಿನವರೆಗೂ ಏನು ಕ್ರಮ ಕೈಗೊಂಡಿಲ್ಲ. ಜೊತೆಗೆ ಸುಮಾರು ಒಂದು ಕೋಟಿ ರೂಪಾಯಿಗಳಷ್ಟು ಇಂಪರ್ಸನೇಷನ್ ಮಾಡಿ ಸಂಬಳವನ್ನು ಪಡೆಯುತ್ತಿದ್ದಾರೆ ಬೆಂಗಳೂರು ನಗರದಲ್ಲಿ ಈ ರೀತಿಯಾದ ದುರುಪಯೋಗ ನಡೆಯುತ್ತಿದೆ. ಆದುದರಿಂದ ಈ ಬಗ್ಗೆ ಸರ್ಕಾರಕ್ಕೆ ದೂರನ್ನು ಕೊಟ್ಟರೂ ಕೂಡ ಯಾವ ವಿಧವಾದ ಕಾರ್ಯಕ್ರಮವನ್ನೂ ಕೈಗೊಂಡಿಲ್ಲವೆಂದರೆ ನನಗೆ ಬಹಳ ಆಶ್ಚರ್ಯವಾಗುತ್ತದೆ ಸರ್ಕಾರದವರು ಏತಕ್ಕಾದರೂ ಆಡಳಿತವನ್ನು ನಡೆಸುತ್ತಿದೆ ಎಂದು ಕೇಳಬೇಕಾಗಿದೆ. ಸರ್ಕಾರದವರು ಇನ್ನಾದರೂ ಕೂಡ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳದಿದ್ದರೆ ಅಧಿಕಾರಿಗಳ ಜೊತೆಗೆ ಮಂತ್ರಿಗಳೂ ಕೂಡ ಸೇರಿಕೊಂಡು ಶಾಮೀಲಾಗಿ ದುಡ್ಡನ್ನು ಹೊಡೆಯುತ್ತಿದ್ದಾರೆಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ

ಅಧ್ಯಕ್ಷರೆ, ಪ್ರಾಥಮಿಕ ಶಾಲಾ ಶಿಕ್ಷಣದ ಬಗ್ಗೆ ಅನೇಕ ತರಹ ದೂರುಗಳು ಸರ್ಕಾರಕ್ಕೆ ಬಂದಿರುತ್ತದೆ ಅನೇಕ ಜನರ ಮೇಲೆ ದೂರುಗಳು ಬಂದು ಪೋಲೀಸ್ ಕೇಸ್‌ಗಳಾಗಿ ರಿಜಿಸ್ಟರ್ ಆಗಿ ತನಿಖೆ ನಡೆಯುತ್ತಿದೆ. ಅಂಥವರ ಮೇಲೆ ಏನು ಕಾರ್ಯಕ್ರಮ ಕೈಗೊಂಡಿಲ್ಲ. ಉದಾಹರಣೆಗೆ ಹೇಳುವುದಾದರೆ ಶ್ರೀಮತಿ ಶಾಂತಲಕ್ಷ್ಮಿ ಎಂಬುವರ ಮೇಲೆ 30—11—1972ರಲ್ಲಿ ಕೇಸ್ ರಿಜಿಸ್ಟರ್ ಮಾಡಿದ್ದಾರೆ. ಮತ್ತೆ ಅವರ ಮೇಲೆ 20—3—1976 ರಲ್ಲಿ ಪೋಲೀಸ್ ಕೇಸ್ ರಿಜಿಸ್ಟರ್ ಆಗಿರುತ್ತದೆ. ಹಾಗೆಯೇ ಕೆ ನಾಗೇಶ್ ಹತ್ವಾರ್, ಜನರಲ್ ಸೆಕ್ರೆಟರಿ ಭಾರತೀಯ ವಿದ್ಯಾಪೀಠ, ಕುಮಾರ ಪಾರ್ಕ್ ಇವರ ಮೇಲೆ 9—7—1975 ರಲ್ಲಿ ಒಂದು ಫಿರ್ಯಾದು ದಾಖಲಾತಿಯಾಗಿರುತ್ತದೆ. ಅವರ ಮೇಲೆ 5ನೇ ಜುಲೈ 1975ರಲ್ಲಿ ಮತ್ತೊಂದು ಕೇಸ್ ದಾಖಲಾಗಿದೆ. ಶ್ರೀ ಕೆ. ನಾಗೇಶ್ ಹತ್ವಾರ್ ಅವರ ಮೇಲೆ 10ನೇ ಮೇ 1975ರಲ್ಲಿ ಮತ್ತೊಂದು ಕೇಸ್ ದಾಖಲಾಗಿದೆ ಶ್ರೀ ಕೆ. ಎ. ಅಶ್ವತ್ಥನಾರಾಯಣ, ಮ್ಯಾನೇಜಿಂಗ್ ಟ್ರಸ್ಟಿ, ಶ್ರೀ ಸುದರ್ಶನ ವಿದ್ಯಾ ಮಂದಿರ ನರ್ಸರಿ ಸ್ಕೂಲ್ ಜಯನಗರ, ಬೆಂಗಳೂರು ಇವರ ಮೇಲೆ 10ನೇ ಜುಲೈ 1975ರಲ್ಲಿ ಒಂದು ಫಿರ್ಯಾದಿ ದಾಖಲಾಗಿದೆ ಹಾಗೆಯೇ ಶ್ರೀ ಎಂ ಎಸ್. ಶೇಷಗಿರಿರಾವ್ ಅವರ ಮೇಲೆ 10ನೇ ಮಾರ್ಚ್ 1976ರಲ್ಲಿ ಒಂದು ಫಿರ್ಯಾದಿ ದಾಖಲೆಯಾಗಿದೆ. ಹಾಗೆಯೇ ಶ್ರೀ ಕೆ ಎನ್. ಅಡವೀಶ ಆರಾಧ್ಯ ಅವರ ಮೇಲೆ 8ನೇ ಜನವರಿ 1976ರಲ್ಲಿ ಒಟ್ಟು 4 ಕೇಸ್‌ಗಳು ದಾಖಲಾಗಿದೆ. ಹಾಗೆಯೇ ಶ್ರೀ ಕೆ ಎಸ್. ಶಿವಣ್ಣ, ಪ್ರೈಮರಿ ಸ್ಕೂಲ್, ಹಿಂದಿ ಮಹಾಪ್ರಚಾರ ಸಭಾ, ರಾಜಾಜಿನಗರ, ಬೆಂಗಳೂರು ಇವರ ಮೇಲೆ 10ನೇ ಜೂನ್ 1974ರಲ್ಲಿ ಒಂದು ಕೇಸ್ ದಾಖಲಾಗಿದೆ. ಶ್ರೀಮತಿ ಎನ್. ಎಸ್. ಹಾಲವತಿ ಭಾರತಿ ಯೂನಿವರ್ಸಲ್ ಉರ್ದು ನರ್ಸರಿ ಸ್ಕೂಲ್, ಅವರ ಮೇಲೆ ತಾರೀಖು 10ನೇ ಜೂನ್ 1976ರಲ್ಲಿ ಒಂದು ಕೇಸ್ ದಾಖಲಾಗಿದೆ. ಇದೇ ತಾರೀಖಿನಲ್ಲಿ ಶ್ರೀಮತಿ ಮಹದೇವಮ್ಮ ಅವರ ಮೇಲೆ ಒಂದು ಕೇಸ್ ದಾಖಲಾಗಿದೆ ಮತ್ತೆ ಶ್ರೀ ಅಡವೀಶ ಆರಾಧ್ಯರ ಮೇಲೆ ತಾರೀಖು 20ನೇ ಜೂನ್ 1974ರಲ್ಲಿ ಒಟ್ಟು 5 ಕೇಸ್‌ಗಳು ದಾಖಲಾಗಿದೆ, ಹಾಗೆಯೇ ಹೆಡ್‌ಮಿಸ್ಟ್ರೆಸ್ ಹೆಚ್.ಎಂ.ಎಂ. ತಮಿಳ್ ಸ್ಕೂಲು, ಗಂಗೇನಹಳ್ಳಿ ಇವರ ಮೇಲೆ 22ನೇ ಏಪ್ರಿಲ್ 1976ರಲ್ಲಿ 3 ಕೇಸ್‌ಗಳು ದಾಖಲಾಗಿವೆ. ಹಾಗೆಯೇ ಟಿ. ಲಕ್ಷ್ಮೀಪತಿ ಅವರ ಮೇಲೆ ತಾರೀಖು 28ನೇ ಜೂನ್ 1976ರಲ್ಲಿ 2 ಕೇಸ್‌ಗಳು ದಾಖಲಾಗಿವೆ. ಶ್ರೀ ಕನ್‌ಮಣಿ, ಹೆಡ್‌ಮಾಸ್ಟರ್ ನೆಹರೂ ಪ್ರೈಮರಿ ಅಂಡ್ ನರ್ಸರಿ ಇಂಗ್ಲೀಷ್ ಸ್ಕೂಲ್ ಬೆಂಗಳೂರು ಅವರ ಮೇಲೆ ತಾರೀಖು 26ನೇ ಅಕ್ಟೋಬರ್ 1976ರಲ್ಲಿ ಒಂದು ಕೇಸ್ ದಾಖಲಾಗಿದೆ. ಶ್ರೀ ಧರ್ಮರಾಜ್ ಅವರ ಮೇಲೆ ತಾರೀಖು 26ನೇ ಅಕ್ಟೋಬರ್ 1976ರಲ್ಲಿ ಒಂದು ಕೇಸ್ ದಾಖಲಾಗಿದೆ. ಶ್ರೀ ಟಿ. ದೊಡ್ಡತಿಮ್ಮಯ್ಯ ಶ್ರೀ ವೆಂಕಟೇಶ್ವರಸ್ವಾಮಿ ಹೈಯರ್ ಸೆಕೆಂಡರಿ

ಸ್ಕೂಲ್, ಅವರ ಮೇಲೆ 26ನೇ ಅಕ್ಟೋಬರ್ 1976ರಲ್ಲಿ ಒಂದು ಕೇಸ್ ದಾಖಲಾಗಿದೆ. ಮತ್ತು ಶ್ರೀ ಧರ್ಮರಾಜ್ ಅವರ ಮೇಲೆ ಅದೇ 26ನೇ ಅಕ್ಟೋಬರ್ 1976ರಲ್ಲಿ ಮತ್ತೊಂದು ಕೇಸ್ ದಾಖಲಾಗಿದೆ. ಶ್ರೀ ಆರ್. ಚಂದ್ರನ್ ಹೆಡ್ ಮಾಸ್ಟರ್, ಅಪ್‌ಗ್ರೇಡೆಡ್ ಪ್ರೈಮರಿ ಸ್ಕೂಲ್, ಬೆಂಗಳೂರು. ಅವರ ಮೇಲೆ 2ನೇ ನವೆಂಬರ್ 1976ರಲ್ಲಿ ಒಂದು ಕೇಸ್ ದಾಖಲಾಗಿದೆ. ಶ್ರೀ ಎನ್. ಧರ್ಮರಾಜ್ ಅವರ ಮೇಲೆ ತಾರೀಖು 18ನೇ ನವೆಂಬರ್ 1976ರಲ್ಲಿ ಮತ್ತೊಂದು ಕೇಸ್ ದಾಖಲಾಗಿದೆ, ಅವರ ಜೊತೆಗೆ ಶ್ರೀಮತಿ ಫಿಲೋಮಿನ ಅವರ ಮೇಲೆ ಒಂದು ಕೇಸನ್ನು ದಾಖಲು ಮಾಡಿದ್ದಾರೆ ಹೀಗೆ ಈ ಕೇಸ್‌ಗಳ ಬಗ್ಗೆ ಒಂದು, ಸಾಮಾನ್ಯ ಪಟ್ಟಿಯನ್ನು ಕೊಟ್ಟಿದ್ದೇನೆ. ಇವೆಲ್ಲಾ ಕೇಸ್‌ಗಳ ಬಗ್ಗೆ ವಿಚಾರಣೆ ನಡೆದು ವಿದ್ಯಾ ಇಲಾಖೆಗೆ ಒಂದು ವರದಿಯೂ ಬಂದಿದೆ. ಈಗಾಗಲೇ ಪೋಲೀಸರು ಅದರ ಮೇಲೆ ತನಿಖೆ ಮಾಡಿದ್ದಾರೆ ಅವರು ತನಿಖೆ ಮಾಡಿದ ಮೇಲೆ ಸರ್ಕಾರದವರು ಅವರಮೇಲೆ ಯಾವ ಕ್ರಮವನ್ನು ಕೈಕೊಂಡಿದ್ದಾರೆ ಎಂಬುದನ್ನು ಇವತ್ತಿನವರೆಗೂ ಬಹಿರಂಗಪಡಿಸಿಲ್ಲ. ನಮಗೆ ತಿಳಿದಿರುವ ಪ್ರಕಾರ ಇವತ್ತು ಅನೇಕ ಜನ ಮಾನ್ಯ ಮುಖ್ಯಮಂತ್ರಿಯವರ ಮೊರೆ ಹೋಗಿದ್ದಾರೆಂದು ಒಂದು ಅಪಾದನೆ ನಮ್ಮ ಮುಂದೆ ಬಂದಿದೆ. ಆದ್ದರಿಂದ ಅವರ ಮೊರೆ ಹೋಗಿರುವ ಕಾರಣಕ್ಕಾಗಿ ಅವರ ಮೇಲೆ ಕೇಸ್ ರಿಜಿಸ್ಟರ್ ಮಾಡಿದ್ದಾರೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿರುವ ವಿಚಾರಗಳನ್ನು ನಾನು ಒಪ್ಪುತ್ತೇನೆ. ಅದರಲ್ಲಿ 766 ಕೇಸ್‌ಗಳು ಇಂಪರ್ಸೊನೇಷನ್ ಆಗಿ ಬಂದಿದೆ. ಅದರಲ್ಲಿ ಈಗಾಗಲೇ ನಾವು ಪೋಲೀಸ್ ಕೇಸ್ ಮಾಡಿ ಯಾರ್ಯಾರರ ವಿರುದ್ಧ ಅಲಿಗೇಷನ್ ಬಂದಿದೆ ಅಂತಹವರನ್ನು ತೆಗೆದುಹಾಕಿದ್ದೇವೆ ಕೆಲವು ಇನ್‌ಸ್ಟಿಟ್ಯೂಷನ್‌ನಲ್ಲಿ, ಪೇರೆಂಟ್ಸ್ ಮತ್ತು ಟೀಚರ್ಸ್ ಅಸೋಸಿಯೇಷನ್‌ನಲ್ಲಿ ಈ ರೀತಿ ಆಗಿರುವುದನ್ನು ನಾವು ಸರಿಪಡಿಸಿದ್ದೇವೆ. 1974ನೇ ಇಸವಿಯಲ್ಲಿ ಆಗಿರುವಂಥ ಕೇಸ್‌ಗಳಲ್ಲಿ ಅನೇಕ ಕೇಸ್‌ಗಳನ್ನು ನಾವು ಸೆಟ್ಲ್ ಮಾಡಿದ್ದೇವೆ. ಉಳಿದವರ ಕೇಸ್‌ಗಳು ಪೋಲೀಸರ ಹತ್ತಿರ ಇದೆ, ಅವರು ಚಾರ್ಜ್‌ಷೀಟ್ ಹಾಕುತ್ತಾರೆ. ಆಮೇಲೆ ನಾವು ಯಾವರೀತಿಯ ಕ್ರಮವನ್ನು ತೆಗೆದುಕೊಳ್ಳಬೇಕೋ, ಆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಮಂತ್ರಿಯವರಿಗೆ ಈ ಒಂದು ಲಿಸ್ಟನ್ನು ನಾನು ಕೊಡುವುದಕ್ಕೆ ತಯಾರು ಇದ್ದೇನೆ. ಇದರಲ್ಲಿ ಎಲ್ಲಾ ಡೀಟೈಲ್ಸ್ ಇವೆ. ಸಮಯಾಭಾವದಿಂದ ಇದರಲ್ಲಿರತಕ್ಕಂಥ ಎಲ್ಲಾ ಡೀಟೈಲ್ಸನ್ನು ನಾನು ಹೇಳುವುದಕ್ಕೆ ಹೋಗಿಲ್ಲ. ಈ ಪಟ್ಟಿಯಲ್ಲಿ ಯಾವ ಯಾವ ಕೇಸ್‌ಗಳು ಇವೆ, ಅವುಗಳನ್ನು ಯಾವಯಾವ ಕಾರಣಕ್ಕಾಗಿ ರಿಜಿಸ್ಟರ್ ಮಾಡಿದ್ದಾರೆ. ಇದರಲ್ಲಿ ಯಾವ ಹಂತದವರೆಗೆ ಕ್ರಮಗಳನ್ನು ಕೈಗೊಂಡಿದ್ದಾರೆ ಎಂಬ ಬಗ್ಗೆ ವಿವರವನ್ನು ಅವರೇ ಹೇಳಲಿ. ಈ ಬಗ್ಗೆ ಒಂದು ಸ್ಪೆಷಲ್ ರಿಪೋರ್ಟನ್ನು ಈ ಸದನದ ಮುಂದೆ ಇಡಲಿ ಎಂದು ಹೇಳುತ್ತೇನೆ. ಇವತ್ತು ಏನಾಗಿದೆ ಎಂದರೆ ತಪ್ಪು ಮಾಡಿದಂತ ಜನರ ಮೇಲೆ ಕೇಸ್ ದಾಖಲಾಗಿದ್ದರೂ ಕೂಡ ಮಾನ್ಯ ಮುಖ್ಯಮಂತ್ರಿಯವರ ಮೊರೆ ಹೋಗುವುದಕ್ಕೆ ದಳ್ಳಾಳಿಗಳ ಸಹಾಯವನ್ನು ತೆಗೆದುಕೊಂಡಿದ್ದಾರೆ. ಅದರಲ್ಲಿ ಮಾನ್ಯ ಮುಖ್ಯಮಂತ್ರಿಯವರ ಸಂಬಂಧಿಕರೂ ಸೇರಿದ್ದಾರೆ. ಆ ದಳ್ಳಾಳಿಗಳು ಈ ತಪ್ಪಿತಸ್ಥರನ್ನು ಬಚಾವಣೆ ಮಾಡಿದ್ದಾರೆ

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮುಖ್ಯಮಂತ್ರಿಯವರ ಅಳಿಯಂದಿರು ಕೆಲವು ಸಂಸ್ಥೆಗಳಿಗೆ ಅಧ್ಯಕ್ಷರಾಗಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಕಮಲಾ ನೆಹರೂ ವಿದ್ಯಾ ಸಂಸ್ಥೆಯವರ ಅಪಾದನೆ ಗೊತ್ತಾದ ಮೇಲೆ ಅವರ ಮೇಲೆ ಕೇಸ್ ದಾಖಲು ಮಾಡಿದ್ದಾರೆ. ಕೇಸ್ ದಾಖಲೆ ಮಾಡಿದ ಮೇಲೆ ಶ್ರೀ ನಟರಾಜ್ ಅವರನ್ನು ಕರೆದುಕೊಂಡು ಹೋಗಿ ಈ ಸಂಸ್ಥೆಗೆ ಅಧ್ಯಕ್ಷರನ್ನಾಗಿ ಮಾಡಿಕೊಂಡು ತಪ್ಪಿತಸ್ಥರನ್ನು ಎಲ್ಲಾ ತರಹದಲ್ಲೂ ಬಚಾವಣೆ ಮಾಡಿಕೊಂಡಿದ್ದಾರೆ. ನಾನು ಮೊದಲು ಮಾನ್ಯ ಮುಖ್ಯಮಂತ್ರಿಯವರ 'ಸಂಬಂಧೀಕರು' ಎಂದು ಸೂಕ್ಷ್ಮವಾಗಿ ಹೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರ ಅಳಿಯಂದಿರು ಆಗಿರತಕ್ಕಂಥಾವರು ಬೆಂಗಳೂರು ನಗರದಲ್ಲಿರುವ ಎಷ್ಟೋ ಪ್ರೈಮರಿ ಶಾಲೆಗಳ ಅಧ್ಯಕ್ಷರಾಗಿದ್ದಾರೆ. ಅವರು ತಪ್ಪಿತಸ್ಥರನ್ನು ಬಚಾವ್ ಮಾಡುತ್ತಿದ್ದಾರೆ ಇವತ್ತು ಎಷ್ಟು ಸಂಸ್ಥೆಗಳ ಸಂಬಂಧದಲ್ಲಿ ಕೇಸ್‌ಗಳನ್ನು ದಾಖಲೆ ಮಾಡಿದ್ದಾರೆ, ಎಷ್ಟು ಕೇಸ್‌ಗಳ ಬಗ್ಗೆ ಚಾರ್ಜ್‌ಷೀಟ್ ಹಾಕಿದ್ದಾರೆ ಎಂಬ ಬಗ್ಗೆ ವಿವರಗಳನ್ನು ಮಾನ್ಯಮಂತ್ರಿಯವರು ಈ ಸಭೆಯ ಮುಂದೆ

ಇಟ್ಟರೆ, ಇದರಲ್ಲಿ ನಮ್ಮ ತಪ್ಪಿದ್ದರೆ ನಾವು ತಿದ್ದಿಕೊಳ್ಳುವುದಕ್ಕೆ ನಾವು ತಯಾರು ಇದ್ದೇವೆ. ಈ ಪಟ್ಟಿಯಲ್ಲಿ ಕಂಡುಬಂದಿರತಕ್ಕ ಅಪಾದನೆಗಳ ಬಗ್ಗೆ ಯಾವ ನಿರ್ದಿಷ್ಟವಾದ ಕ್ರಮವನ್ನು ಕೈಗೊಂಡಿದ್ದಾರೆ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕೆಂದು ನಾನು ಒತ್ತಾಯಪೂರ್ವಕವಾಗಿ ಕೇಳುತ್ತಿದ್ದೇನೆ. ಇನ್ನು ನಮ್ಮ ಸೆಕೆಂಡರಿ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ವಿಷಯವನ್ನು ಹೇಳುವುದಾದರೆ, ಇವತ್ತು ನಮ್ಮ ರಾಜ್ಯದಲ್ಲಿ ಸರ್ಕಾರದವರ ಕೈಯಲ್ಲಿರತಕ್ಕಂಥ ಹೈಸ್ಕೂಲುಗಳು ಒಂದು ಕಡೆ ಇದ್ದರೆ ಖಾಸಗಿಯವರ ಕೈಯಲ್ಲಿ ಕೆಲವು ಹೈಸ್ಕೂಲುಗಳು ಇವೆ. ಇವತ್ತು ಸರ್ಕಾರಕ್ಕೆ ಅವುಗಳಿಂದ ಹೆಚ್ಚಿನ ಬಾಧಕವೇನೂ ಇಲ್ಲ. ಈ ಹೈಸ್ಕೂಲುಗಳಿಗೆ ಎಲ್ಲಾ ತರಹದ ನೆರವನ್ನೂ ನಮ್ಮ ಸರ್ಕಾರದವರು ಕೊಡುತ್ತಿದ್ದಾರೆ. ಉಪಾಧ್ಯಾಯರ ಸಂಬಳವನ್ನು ಸರ್ಕಾರದವರು ನೇರವಾಗಿ ಕೊಡುತ್ತಿದ್ದಾರೆ. ಫರ್ನಿಚರ್ ಗ್ರಾಂಟ್ ಮೊದಲ್ಗೊಂಡು ಎಲ್ಲಾ ತರಹದ ಗ್ರಾಂಟನ್ನು ಕೊಡುತ್ತಿದ್ದಾರೆ. ಈರೀತಿ ನಮ್ಮ ದುಡ್ಡಿನಿಂದ ಬೇರೆಯವರ ಕೈಯಲ್ಲಿ ಹೈಸ್ಕೂಲುಗಳ ಆಡಳಿತವನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಡುತ್ತಾ ಇರುವುದು, ಇದಕ್ಕಿಂತ ಮೂರ್ಖತನದ ಕೆಲಸ ಮತ್ತೊಂದು ಇಲ್ಲ ಎಂದು ಹೇಳಬೇಕಾಗಿದೆ. ಈ ಸೆಕೆಂಡರಿ ಹೈಸ್ಕೂಲುಗಳಿಗೆ ಖರ್ಚಾಗತಕ್ಕಂಥ ಎಲ್ಲಾ ಹಣವನ್ನೂ ಸರ್ಕಾರದವರೇ ನಿರ್ವಹಿಸುತ್ತಾ ಇರಬೇಕಾದರೆ ಈ ಹೈಸ್ಕೂಲುಗಳನ್ನೆಲ್ಲಾ ಖಾಸಗೀ ಜನರ ಕೈಯಿಂದ ತಪ್ಪಿಸುವುದಕ್ಕೆ ಸರ್ಕಾರ ಏತಕ್ಕೆ ಪ್ರಯತ್ನ ಮಾಡುತ್ತಿಲ್ಲ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಸರ್ಕಾರದವರ ಈ ಒಂದು ಖರ್ಚಿನ ಬಾಬತ್ತನ್ನು ನಾವು ಲೆಕ್ಕ ಹಾಕಿದರೆ ಅವರು ಎಷ್ಟರಮಟ್ಟಿಗೆ ಬುದ್ಧಿವಂತರಿದ್ದಾರೆ ಎಂಬುದನ್ನು ಅದರಿಂದ ಊಹಿಸಬಹುದು. ಗೌರ್ನಮೆಂಟ್ ಸೆಕೆಂಡರಿ ಸ್ಕೂಲ್ಸ್ ಅವರಿಗೆ ಪ್ಲಾನ್‌ನಲ್ಲಿ 17 ಲಕ್ಷ ರೂಪಾಯಿಗಳು ಖರ್ಚಾಗುತ್ತಾ ಇದ್ದರೆ ನಾನ್ ಪ್ಲಾನ್‌ನಲ್ಲಿ 844 ಲಕ್ಷ ರೂಪಾಯಿಗಳು ಖರ್ಚಾಗುತ್ತಿದೆ, ಈ ನಾನ್‌ಗೌರ್ನಮೆಂಟ್ ಸೆಕೆಂಡರಿ ಸ್ಕೂಲಿಗೆ ಪ್ಲಾನ್‌ನಲ್ಲಿ 20 ಲಕ್ಷ ರೂಪಾಯಿಗಳು ಖರ್ಚಾಗುತ್ತಿದ್ದರೆ. ನಾನ್‌ಪ್ಲಾನ್‌ನಲ್ಲಿ 15 ಕೋಟಿ 58 ಲಕ್ಷ ರೂಪಾಯಿಗಳು ಖರ್ಚಾಗುತ್ತಿದೆ, ಸುಮಾರು 16 ಕೋಟಿ ರೂಪಾಯಿಗಳನ್ನು ಇವತ್ತು ಖಾಸಗೀ ಹೈಸ್ಕೂಲುಗಳಿಗಾಗಿ ಖರ್ಚುಮಾಡುತ್ತಿದ್ದಾರೆ. ಸರ್ಕಾರದ ಕೈಯಲ್ಲಿರತಕ್ಕಂಥ ಹೈಸ್ಕೂಲುಗಳಿಗೆ ಖರ್ಚು ಮಾಡುತ್ತಿರತಕ್ಕಂಥಾದ್ದು 8½ ಕೋಟಿ ರೂಪಾಯಿಗಳು ಮಾತ್ರ. ಆದರೆ ಖಾಸಗೀ ಹೈಸ್ಕೂಲುಗಳಿಗೆ 15 ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕಂಥ ಸರ್ಕಾರ ಅದರ ಆಡಳಿತವನ್ನು ವಹಿಸಿಕೊಳ್ಳುವುದಕ್ಕೆ ಆಗುವುದಿಲ್ಲ ಎಂದರೆ, ಈ 15 ಕೋಟಿ ರೂಪಾಯಿಗಳನ್ನು ಯಾರೋ ಬೇರೆಯವರ ಕೈಗೆ ಕೊಟ್ಟು 'ನಿಮ್ಮ ಮನಸ್ಸಿಗೆ ಬಂದ ಹಾಗೆ ನಡೆಸಿಕೊಂಡು ಹೋಗಿ' ಎಂದು ಹೇಳಿದರೆ ಅದು ನಮಗೆ ಅರ್ಥವಾಗುತ್ತಾ ಇಲ್ಲ. ಈ 15 ಕೋಟಿ ರೂಪಾಯಿಗಳನ್ನು ಖಾಸಗೀ ಜನರ ಕೈಯಲ್ಲಿ ಕೊಟ್ಟು, ಹೈಸ್ಕೂಲುಗಳನ್ನು ನಡೆಸತಕ್ಕಂಥ ಕೆಲಸವನ್ನು ಅವರಿಗೆ ಬಿಟ್ಟಿದ್ದಾರಾದ್ದರಿಂದ ಆ ಜನರು ತಮ್ಮ ಮನಸ್ವೇಚ್ಛೆಯಿಂದ ಹಣವನ್ನು ಲೂಟಿ ಹೊಡೆಯುತ್ತಿದ್ದಾರೆ. ಈ ಖಾಸಗೀ ಸಂಸ್ಥೆಗಳನ್ನು ನಡೆಸತಕ್ಕಂಥ ಜನರು ಪ್ರತಿವರ್ಷ 3 ಕೋಟಿ ರೂಪಾಯಿಗಳನ್ನು ತಿಂದು ತೇಗುತ್ತಿದ್ದಾರೆ. ಇದೇ ನಮ್ಮ ಮುಖ್ಯವಾದ ಅಪಾದನೆ. ಅದಕೋಸ್ಕರ ಹೇಳುತ್ತಿದ್ದೇನೆ ಈ ಪ್ರಾಥಮಿಕ ಶಿಕ್ಷಣದ ಜೊತೆಯಲ್ಲಿ ಈ ಪ್ರೌಢಶಿಕ್ಷಣದ ಸಂಪೂರ್ಣ ಹತೋಟಿಯನ್ನು ಸರ್ಕಾರದವರು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ ಅವರಲ್ಲಿ ಆಸ್ತಿ ಏನೂ ಇಲ್ಲ, ಆಸ್ತಿ ಇರುವುದು ಕಟ್ಟಡ ಮಾತ್ರ. ಅದನ್ನು ಸಂಪೂರ್ಣವಾಗಿ ವಹಿಸಿಕೊಳ್ಳಬೇಕು, ಕಟ್ಟಡದ ಗ್ರಾಂಟನ್ನೂ ಕೂಡ ಶೇಕಡ 50 ರಷ್ಟು ಸರ್ಕಾರವೇ ಕೊಡುತ್ತಿದೆ. ಕಟ್ಟಡಗಳನ್ನು ಕೂಡ ಸರ್ಕಾರದ ಗ್ರಾಂಟಿನಿಂದಲೇ ಕಟ್ಟುತ್ತಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಕಟ್ಟಡಗಳನ್ನು ಕಟ್ಟದೇ ಹಾಗೆಯೇ ಕೆಲವರು ಗ್ರಾಂಟುಗಳನ್ನು ತೆಗೆದುಕೊಂಡಿದ್ದಾರೆ,

ಶ್ರೀ ಕಾಗೋಡು ತಿಮ್ಮಪ್ಪ.—ಅದೂ ಕೂಡ ಕೆಲವು ಕಡೆ ನಡೆದಿದೆ. ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಏನಿದೆ ಇದು ಬಹು ಮುಖ್ಯವಾದ ಶಿಕ್ಷಣ. ಬಹಳ ಮಕ್ಕಳು ಇದಕ್ಕಿಂತ ಜಾಸ್ತಿ ಶಿಕ್ಷಣ ಪಡೆಯುವುದಕ್ಕೆ ಆಗುತ್ತಿಲ್ಲ. ಈ ಒಂದು ಹಂತದಲ್ಲಿ ಸರ್ಕಾರದ ಸಂಪೂರ್ಣ ಹತೋಟಿ ಇಟ್ಟುಕೊಳ್ಳಬೇಕು, ಮಾನ್ಯ ನಾಯ್ಕರ್ ಅವರು ಆಗಲೇ ಹೇಳುತ್ತಿದ್ದರು ಪಿ ಡಬ್ಲ್ಯು.ಡಿ. ಕಂಟ್ರಾಕ್ಟರ್‌ಗೆ ತಾವೇ ಕಬ್ಬಿಣ ಒದಗಿಸುವುದೆಂದು ಅಗ್ರಿಮೆಂಟಿನಲ್ಲಿದ್ದರೂ ಕೂಡ ಸರ್ಕಾರದವರೇ ಸರಳವಾದ ಕಬ್ಬಿಣ ಒದಗಿಸಿ ಸುಮಾರು 80 ಲಕ್ಷ ರೂಪಾಯಿನಷ್ಟು ಲುಕ್ಸಾನು ಸರ್ಕಾರಕ್ಕೆ ಅಥವಾ ಕಾರ್ಪೊ

ರೇಷನ್ನಿಗೆ ಆಯಿತು ಎಂದು ಹೇಳಿದರು. ಅದು ಸಮುದ್ರ, ಅಲ್ಲಿ ನಡೆಯುವುದು ಸಾಮಾನ್ಯ ವಾಗಿಬಿಟ್ಟಿದೆ. ಆದರೆ ಈ ವಿದ್ಯಾಭ್ಯಾಸ ಕ್ಷೇತ್ರದಲ್ಲೂ ಕೂಡ ಈ ಪ್ರಮಾಣದ ಲಂಚರುಷುವತ್ತು, ಮೋಸ, ವಂಚನೆ, ಇದೆ ಎಂದು ಹೇಳಿದರೆ ನಾವು ಯಾವ ಸಮಾಜವನ್ನು ಸೃಷ್ಟಿಮಾಡುತ್ತೇವೆ, ಯಾವ ಭವಿಷ್ಯವನ್ನು ದೇಶದಲ್ಲಿ ನಿರ್ಧಾರ ಮಾಡುತ್ತೇವೆ ಎಂಬುದನ್ನು ಯೋಚನೆ ಮಾಡಬೇಕಾಗು ತ್ತದೆ. ಈ ವಿಷಯದಲ್ಲಾದರೂ ಸರಿಯಾದ ಆಸಕ್ತಿ ವಹಿಸುವುದು ಬೇಡವೆ? ಈಗಲೂ ಕೂಡ ಮಾನ್ಯ ಸಚಿವರಲ್ಲಿ ವಿನಂತಿಪೂರ್ವಕವಾಗಿ ಒತ್ತಾಯಮಾಡುತ್ತೇನೆ, ದಯವಿಟ್ಟು ಸಂಪೂರ್ಣವಾಗಿ ಪ್ರಾರ್ಥಮಿಕ ಮತ್ತು ಪ್ರೌಢಶಾಲೆಗಳ ಹತೋಟಿಯನ್ನು ಸರ್ಕಾರವೇ ತೆಗೆದುಕೊಳ್ಳುವುದಕ್ಕೆ ಕೂಡಲೇ ಶೀಘ್ರವಾದಂಥ ತೀರ್ಮಾನ ಮಾಡಬೇಕು ಎಂದು ಒತ್ತಾಯ ಮಾಡುವುದಕ್ಕೆ ಇಷ್ಟಪಡು ತ್ತೇನೆ ನಮ್ಮ ಮಾನ್ಯ ಸಚಿವರಾದ ಯಾಹ್ಯಾ ಅವರಿಗೆ ಸಂಬಂಧಪಟ್ಟ ಉನ್ನತ ಮಟ್ಟದ ವಿದ್ಯಾ ಭ್ಯಾಸದ ವಿಷಯವಾಗಿ ಕೆಲವು ಮಾತುಗಳನ್ನು ಆಡುವುದಕ್ಕೆ ಇಷ್ಟಪಡುತ್ತೇನೆ ಇವತ್ತು ರಾಜ್ಯ ದಲ್ಲಿ ಖಾಸಗಿಯವರು ನಡೆಸತಕ್ಕ ಅನೇಕ ಕಾಲೇಜುಗಳಿವೆ ಮತ್ತು ಸರ್ಕಾರ ನಡೆಸತಕ್ಕ ಅನೇಕ ಕಾಲೇಜುಗಳಿವೆ. ಖಾಸಗಿಯವರು ನಡೆಸತಕ್ಕ ಕಾಲೇಜುಗಳಿಗೆ ಸುಮಾರು 80 ಭಾಗ ಮೈಂಟಿನೆನ್ಸ್ ಗ್ರಾಂಟನ್ನು ಮತ್ತು 50 ಭಾಗ ಎಕ್ವಿಪ್‌ಮೆಂಟ್ ಗ್ರಾಂಟನ್ನು ಸರ್ಕಾರ ಕೊಡುತ್ತಿದೆ ಎಂದು ವರದಿ ಯಲ್ಲಿ ಹೇಳಿದ್ದೀರಿ. ಇವತ್ತು ಸುಮಾರು 3 ಕೋಟಿ ರೂಪಾಯಿಗಳನ್ನು ಅವರಿಗೆ ಕೊಡುತ್ತಿದ್ದೇವೆ. ಶೇಕಡ 80 ರಷ್ಟು ಹಣವನ್ನು ಸರ್ಕಾರ ಕೊಡುತ್ತಿರುವುದರಿಂದ ಶೇಕಡ 20 ರಷ್ಟು ಹಣವನ್ನು ಮಾತ್ರ ಅವರು ಹೊಂದಿಸಬೇಕಾಗಿದೆ. 61 ಲಕ್ಷ ರೂಪಾಯಿ ಮಾತ್ರ ಅವರು ಕೊಡುವುದು. 61ಲಕ್ಷ ರೂಪಾಯಿ ಮಾತ್ರ ಅವರು ಕೊಡುವ ಕಾರಣಕ್ಕೆ ಮೂರು ಕೋಟಿ ರೂಪಾಯಿಯನ್ನು ಅವರ ಕೈಯಲ್ಲಿ ಕೊಡುತ್ತಿದ್ದೀರಿ. ಇದು ಬುದ್ಧಿವಂತಿಕೆಯ ಲಕ್ಷಣವೇ? ಇಂಪ್ರುಮೆಂಟ್ಸ್‌ಗೆ 50 ಪರ್ಸೆಂಟ್ ಕೊಡುತ್ತೀರಿ.

SRI S M YAHYA.—80 percent of the total deficit but not 80 percent of the total amount.

SRI H. D DEVEGOWDA —He wants complete nationalisation so far as management is concerned

ಶ್ರೀ ಕಾಗೋಡು ತಿಮ್ಮಪ್ಪ.—ಮೈಂಟಿನೆನ್ಸ್ ಗ್ರಾಂಟನಲ್ಲಿ ಶೇಕಡ 80 ಭಾಗ ಕೊಟ್ಟು ಅವರು 20 ಪರ್ಸೆಂಟನಷ್ಟು ಹಾಕಿಕೊಳ್ಳುತ್ತಾರೆ, ಇದಲ್ಲದೆ ಎಕ್ವಿಪ್‌ಮೆಂಟ್ ಗ್ರಾಂಟೂ ಕೂಡ ಸರ್ಕಾರವೇ ಕೊಡುತ್ತದೆ. ಇನ್ನು ಮಿಕ್ಕ 50 ಪರ್ಸೆಂಟ್ ಅವರೇ ಹಾಕಿಕೊಳ್ಳುತ್ತಾರೆ ಪೂರ್ತಿ ಯಾಗಿ ಎಲ್ಲವನ್ನೂ ಸರ್ಕಾರವೇ ವಹಿಸಿಕೊಳ್ಳುವುದಾದರೆ ಎಷ್ಟು ಖರ್ಚು ಸರ್ಕಾರಕ್ಕೆ ಬರುತ್ತದೆ? 61 ಲಕ್ಷ ಆಗಬಹುದು, ಅಥವಾ ಒಂದು ಕೋಟಿ ರೂಪಾಯಿಯಾಗಬಹುದು. 1 ಕೋಟಿ ರೂಪಾಯಿ ಮಾತ್ರ ಜಾಸ್ತಿ ಕೊಡುವುದರಿಂದ ಸಂಪೂರ್ಣವಾಗಿ ಸರ್ಕಾರವೇ ನಿರ್ವಹಿಸಬಹುದು. ಮೂರು ಕೋಟಿ ರೂಪಾಯಿ ಕೊಟ್ಟು ಇನ್ನು ಒಂದು ಕೋಟಿ ರೂಪಾಯಿ ಗೋಸ್ಕರ ಯಾತಕ್ಕೆ ಹಿಂಜರಿಯ ಬೇಕು? ಸರ್ಕಾರವೇ ಯಾತಕ್ಕೆ ಪೂರ್ತಿಯಾಗಿ ಜವಾಬ್ದಾರಿಯನ್ನು ವಹಿಸಿಕೊಳ್ಳಬಾರದು ಎಂದು ನನ್ನ ಪ್ರಶ್ನೆ ಆ ರೀತಿ ವಹಿಸಿಕೊಳ್ಳುವುದರಿಂದ ಆಗತಕ್ಕ ಸಾಧಕ ಬಾಧಕ ಏನು ಎಂಬುದನ್ನು ದಯ ವಿಟ್ಟು ಹೇಳಬೇಕು ಇವತ್ತು ನಮ್ಮ ಶಾಲೆಗಳಿಗಾಗಿ ಅಪವ್ಯಯವಾಗುತ್ತಿರುವ ವಿಷಯದಲ್ಲಿ ಸಣ್ಣ ಪ್ರಮಾಣದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸರ್ಕಾರದವರು ಕೊಟ್ಟಿರತಕ್ಕ ಅಂಕಿಅಂಶಗಳನ್ನು ಗಣನೆಗೆ ತೆಗೆದು ಕೊಂಡರೆ ಖರ್ಚು ಮಾಡುತ್ತಾ ಇರತಕ್ಕ ಹಣ ಎಷ್ಟು ಮಟ್ಟಿಗೆ ಅಪವ್ಯಯವಾಗು ತ್ತಿದೆ ಮತ್ತು ವಿದ್ಯಾರ್ಥಿಗಳು ನಿಜವಾಗಿ ಅದರ ಉಪಯೋಗವನ್ನು ಪಡೆಯುತ್ತಿಲ್ಲ ಎಂಬ ಅಭಿ ಪ್ರಾಯ ಸ್ಪಷ್ಟವಾಗಿ ನಮಗೆ ಎದ್ದು ಕಾಣುತ್ತದೆ. ಇವತ್ತು ಪ್ರಾಥಮಿಕ ಶಿಕ್ಷಣದ ಮೊದಲನೇ ತರಗತಿಯಲ್ಲಿ 6,88,160 ಹುಡುಗರಿದ್ದರೆ, ಹುಡುಗಿಯರು 5 70,8?9 ಜನ ಇದ್ದಾರೆ ಇವರು ಸುಮಾರು ನಾಲ್ಕನೇ ತರಗತಿಗೆ ಹೋಗುವುದರೊಳಗೆ 2,95 000 ಜನ ಹುಡುಗರು ಕಡಿಮೆಯಾಗು ತ್ತಾರೆ ಹುಡುಗಿಯರಲ್ಲಿ 2,90,000 ಜನ ಕಡಿಮೆಯಾಗುತ್ತಾರೆ, ಹಾಗೆಯೇ ಇವತ್ತು 7ನೇ ತರಗತಿಯಲ್ಲಿ 1,9?,450. ಜನ ಹುಡುಗರು ಮತ್ತು 1,09 855 ಜನ ಹುಡುಗಿಯರು ಇದ್ದಾರೆ. 7ನೇ ತರಗತಿ ಹೋಗುವುದರೊಳಗೆ ಹುಡುಗರಲ್ಲಿ 45 ಸಾವಿರ ಜನ, ಹುಡುಗಿಯರಲ್ಲಿ 34 ಸಾವಿರ

ಜನ ಕಡಿಮೆಯಾಗುತ್ತಾರೆ. 7ನೇ ತರಗತಿಯಲ್ಲಿ 1,50,773 ಹುಡುಗರು ಮತ್ತು 75,587 ಜನ ಹುಡುಗಿಯರು ಇದ್ದರೆ 10ನೇ ತರಗತಿಗೆ ಹೋಗುವುದರೊಳಗಾಗಿ ಹುಡುಗರಲ್ಲಿ 48,107 ಜನ ಕಡಿಮೆಯಾಗುತ್ತಾರೆ, ಮತ್ತು 25,527 ಜನ ಹುಡುಗಿಯರಲ್ಲಿ ಕಡಿಮೆಯಾಗುತ್ತಾರೆ. 1ನೇ ತರಗತಿಯಿಂದ 7ನೇ ತರಗತಿವರೆಗೆ, 8ನೇ ತರಗತಿಯಿಂದ 10ನೇ ತರಗತಿವರೆಗೆ ಪ್ರತಿವರ್ಷ ಹುಡುಗರು ಸೇರತಕ್ಕ ಸಂಖ್ಯೆಯನ್ನು ನೋಡಿದರೆ 1ನೇ ತರಗತಿಯಲ್ಲಿ ಸೇರತಕ್ಕ ಹುಡುಗರು ಎಷ್ಟು, ಅವರಲ್ಲಿ ಎಷ್ಟು ಪ್ರಮಾಣದಲ್ಲಿ ಎಸ್.ಎಸ್.ಎಲ್.ಸಿ. ವಿದ್ಯಾಭ್ಯಾಸಕ್ಕೆ ಹೋಗುತ್ತಾರೆ ಎಂಬುದನ್ನು ಲೆಕ್ಕ ಹಾಕಿದರೆ ಹೆಚ್ಚುಕಡಿಮೆ ಸುಮಾರು ಪ್ರಾಥಮಿಕ ಮೊದಲನೇ ತರಗತಿಯಲ್ಲಿ ಆರು ಲಕ್ಷ ಜನ ವಿದ್ಯಾರ್ಥಿಗಳಿದ್ದರೆ 10ನೇ ತರಗತಿಗೆ ಹೋಗುವುದರೊಳಗಾಗಿ ಹುಡುಗರ ಸಂಖ್ಯೆ 10 666ಕ್ಕೆ ಇಳಿಯುತ್ತದೆ. ಅಂದರೆ 5ಲಕ್ಷ ಜನ ಹುಡುಗರಲ್ಲಿ ಕಡಿಮೆಯಾಗುತ್ತಾರೆ ಹುಡುಗಿಯರಲ್ಲಿ ಪ್ರಾಥಮಿಕ ಮೊದಲನೇ ತರಗತಿಯ 5,70829 ಜನ ಹುಡುಗಿಯರಿದ್ದರೆ 10ನೇ ತರಗತಿಗೆ ಅವರ ಸಂಖ್ಯೆ 50065ಕ್ಕೆ ಇಳಿಯುತ್ತದೆ. ಅಂದರೆ ಒಂದನೇ ತರಗತಿಯಿಂದ 10ನೇ ತರಗತಿಯವರೆಗೂ ಪ್ರತಿ ಹಂತದಲ್ಲೂ ಕೂಡ ವಿದ್ಯಾಭ್ಯಾಸಕ್ಕೆ ಸೇರಿದಂಥ ಮಕ್ಕಳು ತಾನೇತಾನಾಗಿ ವಿದ್ಯಾಭ್ಯಾಸವನ್ನು ನಿಲ್ಲಿಸಿ ವಾಪಸ್ ಹೋಗುತ್ತಿದ್ದಾರೆ. ಈ ವ್ಯವಸ್ಥೆಯಿಂದ ಎಷ್ಟು ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡುವುದಕ್ಕೆ ಒಂದನೇ ತರಗತಿಗೆ ಸೇರಿಸುತ್ತೇವೆಯೋ ಅಷ್ಟು ಮಕ್ಕಳಿಗೂ ಕನಿಷ್ಠ ಪ್ರಮಾಣವಾದ 10ನೇ ತರಗತಿವರೆಗೆ ಪೂರ್ಣವಾಗಿ ವಿದ್ಯಾಭ್ಯಾಸವನ್ನು ಈ ರಾಜ್ಯದಲ್ಲಿ ಕೊಡತಕ್ಕ ವ್ಯವಸ್ಥೆ ಆಗಿಲ್ಲ. ಶೇಕಡ 25ರಷ್ಟು ಮಕ್ಕಳು ಮಾತ್ರ ಎಸ್.ಎಸ್.ಎಲ್.ಸಿ. ವರೆಗೂ ಪೂರ್ಣ ಶಿಕ್ಷಣವನ್ನು ಪಡೆಯುತ್ತಾರೆ. ಇನ್ನು ಶೇಕಡ 75ರಷ್ಟು ಜನ ವಿದ್ಯಾಭ್ಯಾಸವನ್ನು ಬಿಟ್ಟು ವಾಪಸ್ ಮನೆಗೆ ಹೋಗಿ ಕೆಲಸ ಮಾಡಿಕೊಂಡು ಇರುವ ಪರಿಸ್ಥಿತಿ ಇದೆ. ಸುಮಾರು 30 ವರ್ಷ ಕಳೆದರೂ ಕೂಡ ವಿದ್ಯಾಭ್ಯಾಸದ ಸಂಖ್ಯೆ ಜಾಸ್ತಿಯಾಗಿಲ್ಲ. ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಏನು ಅಪವ್ಯಯ ನಡೆಯುತ್ತಿದೆ ಅದನ್ನು ತಪ್ಪಿಸುವ ಪ್ರಯತ್ನದಲ್ಲಿ ಸರ್ಕಾರ ಮಾಡಿದಂಥ ಸಾಧನೆ ಏನು ಎಂಬುದನ್ನು ನೋಡಿಲ್ಲ, ನಗರ ಪ್ರದೇಶಕ್ಕಿಂತ ಗ್ರಾಮಾಂತರ ಪ್ರದೇಶದಲ್ಲಿ ವ್ಯತ್ಯಾಸ ಜಾಸ್ತಿ ಇರುತ್ತದೆ. ನಗರ ಪ್ರದೇಶದಲ್ಲಿ ಶೇಕಡ 30 ಮುಟ್ಟಿದರೆ ಗ್ರಾಮಾಂತರ ಪ್ರದೇಶದಲ್ಲಿ ಶೇಕಡ 20ರಲ್ಲಿ ಬಂದು ಮುಟ್ಟಿರುತ್ತದೆ.

3-30 P. M.

ಆದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ನರ್ಸರಿ ಶಾಲೆಗಳ ಅವಶ್ಯಕತೆ ಜಾಸ್ತಿ ಇದೆ ಎಂದು ಹೇಳಬಯಸುತ್ತೇನೆ. ಮಾನ್ಯ ಖಾರ್ಗೆಯವರು ಬೆಂಗಳೂರಿನಲ್ಲಿ ವಾಸ ಮಾಡುತ್ತಿರುವುದರಿಂದ ಅವರಿಗೆ ನರ್ಸರಿ ಶಾಲೆಗಳ ಅವಶ್ಯಕತೆ ಇರುವುದಿಲ್ಲ. ಅವರ ಮಕ್ಕಳನ್ನು ನೇರವಾಗಿ ಒಂದನೇ ತರಗತಿಗೆ ಸೇರಿಸಬಹುದು; ಇಲ್ಲಿ ನರ್ಸರಿ ಶಾಲೆಗಳಿಲ್ಲದಿದ್ದರೂ ನಡೆಯುತ್ತದೆ. ಆದರೆ ಹಳ್ಳಿಗಳಲ್ಲಿ ನರ್ಸರಿ ಶಾಲೆಗಳನ್ನು ನಡೆಸುವುದರ ಮುಖಾಂತರ ಅಲ್ಲಿಯ ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಪ್ರೇರೇಪಣೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇನ್ನು ನೀವು ಈಗ ಖರ್ಚು ಮಾಡತಕ್ಕ 112 ಕೋಟಿ ರೂಪಾಯಿಗಳ ಜೊತೆಗೆ, ಪ್ರತಿಯೊಂದು ಗ್ರಾಮ ಪಂಚಾಯಿತಿಯ ಮಟ್ಟದಲ್ಲಿ ಒಂದು ನರ್ಸರಿ ಶಾಲೆಯನ್ನು ಕಟ್ಟುವುದಾದರೆ ಅದಕ್ಕೆ 5 ಕೋಟಿ ರೂಪಾಯಿಗಳನ್ನು ಖರ್ಚಾಗಬಹುದು. ಇವತ್ತು ಯಾವುದೋ ಖಾಸಗೀ ಸಂಸ್ಥೆಯವರಿಗೆ ಶಾಲೆಗಳನ್ನು ನಡೆಸುವುದಕ್ಕೆ ಹಣ ಕೊಡುತ್ತಿರುವುದರಿಂದ ಅವರುಗಳು ಪ್ರಾಥಮಿಕ ಶಾಲಾ ಹಂತದಲ್ಲಿ 3 ಕೋಟಿ ರೂಪಾಯಿಗಳನ್ನು ಮತ್ತು ಪ್ರೌಢಶಾಲಾ ಹಂತದಲ್ಲಿ 3 ಕೋಟಿ ರೂಪಾಯಿಗಳನ್ನು ಲೂಟಿ ಹೊಡೆಯುತ್ತಿದ್ದಾರೆ. ಈ ರೀತಿ ಲೂಟಿಯಾಗುವ ಹಣವನ್ನು ತಪ್ಪಿಸಿ ಅದೇ ಹಣವನ್ನು ಉಪಯೋಗಿಸಿ ಗ್ರಾಮ ಪಂಚಾಯಿತಿಯ ಮಟ್ಟದಲ್ಲಿ 5 ಸಾವಿರ ನರ್ಸರಿ ಶಾಲೆಗಳನ್ನು ಮಾಡಬಹುದು. ಸ್ವಲ್ಪ ದೊಡ್ಡ ದೊಡ್ಡ ಊರುಗಳಲ್ಲೂ ನರ್ಸರಿ ಶಾಲೆಗಳನ್ನು ಮಾಡಬೇಕು. ಕೊನೇ ಪಕ್ಷ ಪಂಚಾಯಿತಿ ಮಟ್ಟದಲ್ಲಾದರೂ ಒಂದೊಂದು ನರ್ಸರಿ ಶಾಲೆಗಳನ್ನು ಮಾಡುವುದಕ್ಕೆ 5 ಅಲ್ಲ 10 ಕೋಟಿ ರೂಪಾಯಿಗಳ ಮಂಜೂರಾತಿ ಕೊಡುವುದಕ್ಕೆ ನಾವು ಹಿಂತೆಗೆಯುವುದಿಲ್ಲ. ಇವತ್ತಿನ ದಿವಸ 30 ವರ್ಷದ ಸ್ವಾತಂತ್ರ ಭಾರತದಲ್ಲಿ ವಿದ್ಯಾಭ್ಯಾಸ ಮಟ್ಟ ಎಷ್ಟು ಹಿಂದುಳಿದಿದೆ ಎಂಬುದನ್ನು ಹೇಳತೀರದಾಗಿದೆ. ಇಂಥ ಸಂದರ್ಭದಲ್ಲಿ, ಮಕ್ಕಳಿಗೆ ಎರಡು ಅಕ್ಷರಗಳನ್ನಾದರೂ ಕಲಿಸಿ ಅವರ ಜೀವನ ಸಾರ್ಥಕಗೊಳಿಸತಕ್ಕ ಪ್ರಯತ್ನ ಮಾಡತಕ್ಕ ಮನುಷ್ಯ ಧರ್ಮ ನಮಗೆ ದೆಯೆಂದು ನಾನು ತಿಳಿದುಕೊಂಡಿದ್ದೇನೆ. ಆ ದಿಸೆಯಲ್ಲಿ ಈ ಕಾರ್ಯವನ್ನು ಮಾಡಬೇಕಾಗಿದೆ.

ಇವತ್ತಿನ ದಿವಸ ಇದನ್ನು ಏಕೆ ಒತ್ತಿ ಹೇಳುತ್ತಿದ್ದೇನೆಂದರೆ ಬೇರೆ ಒಬ್ಬ ಬ್ರಾಹ್ಮಣ ವರ್ಗಕ್ಕೆ ಸೇರಿದವರು ಈ ಖಾತೆಯ ಮಂತ್ರಿಗಳಾಗಿದ್ದರೆ ಅವರು ತಮ್ಮ ಮಕ್ಕಳು ವಿದ್ಯಾವಂತರಾಗಿಯೇ ಆಗುತ್ತಾರೆಂಬ ಮನೋಭಾವನೆಯನ್ನು ತಾಳಬಹುದಾಗಿತ್ತು; ಆದರೆ ಅಕ್ಷರ ಎನ್ನತಕ್ಕದ್ದು ಗಗನ ಕುಸುಮ ಎಂದು ಹೇಳತಕ್ಕ ದುರ್ಬಲ ವರ್ಗದಿಂದ ಬಂದಿರುವ ಮಂತ್ರಿಗಳು ಈ ಸ್ಥಾನಕ್ಕೆ ಬಂದಿರುವಾಗ ತಾವಾದರು ಅದನ್ನು ದೀರ್ಘವಾಗಿ ಆಲೋಚನೆ ಮಾಡದಿದ್ದರೆ ಬೇರೆ ಯಾರು ಆಲೋಚನೆ ಮಾಡಬೇಕು, ಯಾರನ್ನು ಕೇಳಬೇಕು. ಯಾರಿಗೆ ಅಧಿಕಾರ ಮಾಡಬೇಕು! ಇಂಥವರ ಕೈಗೆ ಅಧಿಕಾರ ಬಂದರೂ ಮಾಡದಿದ್ದರೆ ಯಾರನ್ನು ಶಪಿಸಬೇಕು. ನನಗೆ ಅಧಿಕಾರ ಕೊಟ್ಟಾಗ ನಾನು ಹೇಳುವ ಮಾತನ್ನು ಕಾರ್ಯಗತ ಮಾಡದಿದ್ದರೆ ನಾನು ಮೂರ್ಖನಾಗುತ್ತೇನೆಯೇ ಹೊರತು ಬುದ್ಧಿವಂತನಾಗುವುದಿಲ್ಲ. ನೀವು ಏನಾದರು ಸ್ವಲ್ಪ ದಾಕ್ಷ್ಯ ಇದ್ದರೆ ಈ ಕಾರ್ಯವನ್ನು ಕೈಗೊಳ್ಳಬೇಕೆಂದು ಹೇಳಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಶೋಷಿತ ವರ್ಗಕ್ಕೆ ಆದಿ ನಾಯಕರಾಗಿ ಪ್ರತಿಬಿಂಬಿಸುತ್ತಿದ್ದಾರೆ. ಅನೇಕ ಶಾಸಕ ಮಿತ್ರರು ಚುನಾವಣಾ ಕ್ಷೇತ್ರದಲ್ಲಿ ಹಿಂದುಳಿದವರ ಅಸ್ತಿತ್ವವೇ ಕಡಿದು ಬೀಳಬಹುದೆಂಬ ಭಯವನ್ನು ಬಹಳ ಪ್ರಾಮಾಣಿಕತನದಿಂದ ಎದುರಿಸಿ ಬಂದಿದ್ದಾರೆ. ನಾನು ಅವರಲ್ಲಿ ಈ ಬಗ್ಗೆ ಪ್ರೋತ್ಸಾಹ ಕೊಡಬೇಕೆಂದು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

ಒಬ್ಬರು ಸದಸ್ಯರು.—ಮುಂದುವರಿದವರು ಇದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಜಗತ್ತು ಕಂಡಿರತಕ್ಕದ್ದನ್ನು ಹೊಸದಾಗಿ ಹೇಳತಕ್ಕ ಅಗತ್ಯ ಇಲ್ಲ. ಆದ್ದರಿಂದ ಅನೇಕ ಹಿಂದುಳಿದ ಶಾಸಕ ಮಿತ್ರರು, ಮಾನ್ಯ ಮುಖ್ಯಮಂತ್ರಿಗಳನ್ನು ನಮ್ಮ ಅಸ್ತಿತ್ವವೇ ನಿಮ್ಮ ಮೇಲೆ ಉಳಿದಿದೆ ಎಂಬ ಅಚಲ ವಿಶ್ವಾಸವನ್ನು ಹೊಂದಿರುವವರು ಅವರನ್ನು ಕೇಳಿ ಅವರಿಂದ ಪ್ರಯೋಜನ ಪಡೆಯಿರಿ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಏನು ಪ್ರಯೋಜನವಿಲ್ಲದೆ ಸುಮ್ಮನೆ ಕಲ್ಲು ಮೂರ್ತಿಗೆ ಪೂಜೆ ಮಾಡಿದರೆ ಉಪಯೋಗವಿಲ್ಲ. ಅವರುಗಳು ತಮ್ಮ ಸ್ವಂತಕ್ಕೆ ಏನಾದರು ಮಾಡಿಕೊಂಡಿರಬಹುದು, ಆದರೆ ಸಮಾಜಕ್ಕೂ ಸಹ ಅನುಕೂಲವಾಗುವ ದಿಸೆಯಲ್ಲಿ ಪ್ರಯತ್ನಿಸಬೇಕೆಂದು ಹೇಳುತ್ತೇನೆ. ಒಬ್ಬರು ಇನ್ಸ್‌ಪೆಕ್ಟರು, ನಿಮ್ಮ ಊರಿನ ಸ್ಕೂಲ್ ಇನ್ಸ್‌ಪೆಕ್ಷನ್ನಿಗೆ ಹೋಗಿದ್ದನು; ಅಲ್ಲಿನ 70 ಮನೆಗಳ ಪೈಕಿ 10 ಹುಡುಗರು ಸಹ ಶಾಲೆಗೆ ಬರುವುದಿಲ್ಲ, ಆ ಹುಡುಗರನ್ನು ಸಹ ಆ ಶಾಲೆಯ ಉಪಾಧ್ಯಾಯರು ಇಲ್ಲಿಗೆ ಭೂತ ಬರುತ್ತದೆಂದು ಹೆದರಿಸಿ ಕಳುಹಿಸಿದ್ದರೆಂದು ಬೇರೆ ಉಪಾಧ್ಯಾಯರನ್ನು ಹಾಕಿದ್ದೇನೆ; ಈಗಲೂ ಸಹ 10 ಜನ ಹುಡುಗರು ಬರುವುದಿಲ್ಲವೆಂದೂ. ನೀವು ಊರಿಗೆ ಹೋದಾಗಲಾದರು ಹೇಳಬಾರದೆ ಎಂದು ಕೇಳಿದರು. ಹೀಗಾಗಿ ನಾವು ಅಲ್ಲಿ ತಲೆ ತಗ್ಗಿಸಬೇಕಾದ ಪರಿಸ್ಥಿತಿ ಬರುತ್ತದೆ. ಹಳ್ಳಿಯ ಶಾಲೆಗಳಲ್ಲಿ ಉಪಾಧ್ಯಾಯರು ನಿದ್ದೆ ಹೊಡೆಯುತ್ತಿರುತ್ತಾರೆ. ಹುಡುಗರಿಗೆ ಕುಳಿತುಕೊಳ್ಳಲು ಮಣೆಗಳಿರುವುದಿಲ್ಲ. ಶೇಕಡ 80 ಜನ ಉಪಾಧ್ಯಾಯರಿಗೆ ಟ್ರೈನಿಂಗ್ ಕೊಟ್ಟಿದ್ದೇವೆಂದು ಹೇಳುತ್ತೀರಿ. ಆದರೆ ಆ ಟ್ರೈನಿಂಗ್ ಆದ ಉಪಾಧ್ಯಾಯರನ್ನು ಕರೆದು 19ರ ಮಗ್ಗಿ ಹೇಳು ಎಂದರೆ ಖಂಡಿತಾ ಹೇಳುವುದಿಲ್ಲ 19 × 8 ಎಂದು ಗುಣಿಸಿ ಹೇಳುತ್ತಾನೆ. ಆದ್ದರಿಂದ ಇವತ್ತಿನ ದಿವಸ ತರಬೇತಿ ಪಡೆದಿರತಕ್ಕ ಉಪಾಧ್ಯಾಯರ ಪರಿಸ್ಥಿತಿಯು ಚಿಂತಾಜನಕವಾಗಿದೆ.

ಶ್ರೀಮತಿ ಇ. ಇವಾರಾಜ್.—19ರ ಮಗ್ಗಿ ಮಾನ್ಯ ಕಾಗೋಡು ತಿಮ್ಮಪ್ಪನವರಿಗು ಬರುವುದಿಲ್ಲ. ನನಗೂ ಬರುವುದಿಲ್ಲವೆಂದು ಕಾಣುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ನಾವು ಶಾಲೆಯಲ್ಲಿ ಇಲ್ಲ. ನಾನು ಉಪಾಧ್ಯಾಯನಾದರೆ ಯಾವ ನಿಮಿಷದಲ್ಲಿ ಯಾವ ಮಗ್ಗಿಯನ್ನು ಕೇಳಿದರೂ ಹೇಳಬೇಕು. ನನಗೆ ಬರುವುದಿಲ್ಲವೆಂಬುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಆ ವೃತ್ತಿಯನ್ನು ಮಾಡುವವರು ಅವಶ್ಯವಾಗಿ ತಿಳಿದುಕೊಂಡಿರಬೇಕು ನನ್ನಂತವನು ತಿಳಿದುಕೊಂಡು ಏನು ಮಾಡಬೇಕು ;

ಶ್ರೀ ಸಿ ಭೈರೇಗೌಡ.—ಮಾನ್ಯ ವಿದ್ಯಾಮಂತ್ರಿಗಳು ಹೇಳಲಿ ನೋಡೋಣ.

ಶ್ರೀ ಕಾಗೋಡು ತಿಮ್ಮಪ್ಪ.—ನನ್ನಂತೆಯೇ ಅವರು ಸಹ. ಇವತ್ತಿನ ದಿವಸ ಕಷ್ಟದ ಸ್ಥಿತಿಯಲ್ಲಿರುವಂಥವರು ಮಾನ್ಯ ಮುಖ್ಯಮಂತ್ರಿಗಳನ್ನು ಏನಾದರು ಉಪಯೋಗಿಸಿಕೊಳ್ಳುವುದಾದರೆ ಈ ಹಂತದಲ್ಲಿ ಸರಿಯಾಗಿ ಉಪಯೋಗಿಸಿಕೊಳ್ಳಿ.

ಶ್ರೀ ಸಿ. ಬೈರೇಗೌಡ.—19×8ರೇ ಎಷ್ಟು ಎಂದು ಇಬ್ಬರು ಮಾನ್ಯ ಮಂತ್ರಿಗಳು ಹೇಳದಿದ್ದರೆ ದಯವಿಟ್ಟು ಓಂಚು ಮೇಲೆ ನಿಲ್ಲಿಸಿ.

ಶ್ರೀ ಕಾಗೋಡು ತಿಮ್ಮಪ್ಪ.—ಇವತ್ತು ನಮ್ಮ ಮಾನ್ಯ ಮಿತ್ರರಿಗೆ ಹೇಳುವುದೇನೆಂದರೆ, ಕಬ್ಬಿಣ ಕಾಯಿದೆ, ಬಡಿದರೆ ಏನಾದರೂ ಆಯುಧ ಮಾಡಬಹುದು ಎಂದು. ಕಾಯ್ದ ಕಬ್ಬಿಣಕ್ಕೆ ಸುತ್ತಿಗೆ ತೆಗೆದುಕೊಂಡು ಹೊಡೆದರೆ ಖಂಡಿತವಾಗಿ ಬಾಯಿ ಬಿಡುತ್ತದೆ ಇವತ್ತಿನ ದಿವಸ ನೀವೇನಾದರು ಪ್ರಾಥಮಿಕ ಶಿಕ್ಷಣದ ಸಂಪೂರ್ಣ ಪ್ರಯೋಜನವನ್ನು ಪಡೆಯುವುದಾದರೆ ಖಂಡಿತಾ ಸಿಗುತ್ತದೆ. ಡಿಸಿಡೆಂಟ್ ಮಂತ್ರಿಗಳನ್ನು ತೆಗೆದು ಹಾಕಿರಿ ಎಂದು 120 ಜನ ರುಜು ಹಾಕಿದರು ಏನು ಪ್ರಯೋಜನವಿಲ್ಲ.

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಉಪಾಧ್ಯಕ್ಷರು.—ತಾವು ಡಿಮ್ಯಾಂಡ್ ಮೇಲೆ ಮಾತನಾಡಿ.

ಶ್ರೀ ಕಾಗೋಡು ತಿಮ್ಮಪ್ಪ - ಖಾಸಗೀ ಜನರ ಕೈಯಲ್ಲಿ ಶಿಕ್ಷಣ ಕೊಡುವುದನ್ನು ಬಿಟ್ಟು, ಮೊದಲು, 20 ಕೋಟಿ ರೂಪಾಯಿ ಜಾಸ್ತಿಯಾದರು ಚಿಂತೆ ಇಲ್ಲ ಅನ್ನು ಮುಖ್ಯಮಂತ್ರಿಗಳಿಂದ ತೆಗೆದುಕೊಂಡು ಸಂಪೂರ್ಣವಾಗಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಗಳನ್ನು ಸರ್ಕಾರವೇ ವಹಿಸಿಕೊಳ್ಳಲಿ ಎಂದು ಹೇಳುತ್ತೇನೆ. ಇವತ್ತಿನ ದಿವಸ ಸೈನಿಕರ ಮಕ್ಕಳಿಗೆ ಸ್ಕಾಲರ್‌ಷಿಪ್ ಕೊಡುವ ಸಂದರ್ಭದಲ್ಲಿ 80-90 ಲಕ್ಷ ರೂಪಾಯಿ ಖರ್ಚಾಗುತ್ತಿದೆ ಎಂದು ಹೇಳಿದ್ದೀರಿ. ಆದರೆ ಅದು ಸೈನಿಕರ ಮಕ್ಕಳಿಗೆ ಮುಟ್ಟಿಲ್ಲ; ಅದನ್ನು ಸೈನಿಕರ ಮಕ್ಕಳ ಹೆಸರಿನಲ್ಲಿ ಯಾರೋ ಫೋರ್ಜರಿ ರುಜು ಮಾಡಿ ಪಡೆದಿದ್ದಾರೆ. ಇದನ್ನು ಅಕೌಂಟೆಂಟ್ ಜನರಲ್‌ರವರು ಕಂಡುಹಿಡಿದರೂ ಸಹ ಇವತ್ತಿನವರೆಗು ಸರ್ಕಾರದವರು ತನಿಖೆ ಮಾಡಲಿಲ್ಲ, ಕ್ರಮ ಕೈಗೊಳ್ಳಲಿಲ್ಲ ಎಂದರೆ ಹೇಗೆ? ಆ ಸೈನಿಕರ ಮಕ್ಕಳಿಗೆ 80-90 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ, ಏನೋ ದೇಶಕ್ಕೆ ತ್ಯಾಗ ಮಾಡುತ್ತಿದ್ದೇವೆ ಎಂದು ಸರ್ಕಾರದ ಬೊಕ್ಕಸದಿಂದ ಕೊಟ್ಟರೆ, ಅದು ಆ ಮಕ್ಕಳಿಗೆ ಸಿಗುವ ಬದಲು ದಳ್ಳಾಳಿಗಳ ಬಾಯಿಗೆ ಹೋದರೆ ಈ ಬಗ್ಗೆ ಏನು ಹೇಳಬೇಕೋ ತಿಳಿಯದಾಗಿದೆ. ಆದ್ದರಿಂದ ಈ ಬಗ್ಗೆ ಅಗತ್ಯವಾಗಿ ಕ್ರಮ ಕೈಗೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಹಣ ಕೊಡುವುದು ಮುಖ್ಯವಲ್ಲ; ಕೊಟ್ಟ ಹಣ ಸದ್ವಿನಿಯೋಗವಾಯಿತೆ ಎಂಬುದು ಮುಖ್ಯ. ಆ ದೃಷ್ಟಿಯಿಂದ ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಪಿ.ಡಬ್ಲ್ಯು.ಡಿ.ಯಲ್ಲಿ ಲೂಟಿ ಹೊಡೆಯುವುದೇ ಕಸಬಾಗಿದೆ ಅವರು ಯಾವುದೋ ಒಳ್ಳೆಯ ಜನ್ಮ ಎತ್ತಿ ಬಂದಿದ್ದಾರೆ ಅದು ಯಾವಾಗ ಮುಕ್ತಾಯವಾಗುತ್ತದೆಂಬುದನ್ನು ನೋಡೋಣ. ಆದರೆ ಹೊಸ ಸಮಾಜ ಸೃಷ್ಟಿಗೆ ಬುನಾದಿಯಾಗಿರುವ ಈ ವಿದ್ಯಾಕ್ಷೇತ್ರದಲ್ಲಿ ಹಣವನ್ನು ಲೂಟಿ ಹೊಡೆಯುವುದಾದರೆ ನಾವು ನೀವು ಕಣ್ಮುಚ್ಚಿಕೊಂಡು ಕುಳಿತಂತಾಗುತ್ತದೆ. ಆದರಿಂದ ನಾವು ಈ ಬಗ್ಗೆ ಖಂಡಿತವಾಗಿ ವಿಚಾರ ಮಾಡಲೇಬೇಕಾಗಿದೆ. ಆದ್ದರಿಂದ ಈ ಸನ್ನಿವೇಶದಲ್ಲಿ ಒಂದು ಮಾತನ್ನು ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ನಮ್ಮ ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟಂತೆ ಒಂದು ಮಾತನ್ನು ಹೇಳುತ್ತೇನೆ. ಇಲ್ಲಿಯವರೆಗೆ ಒಂದು ವಾದ ಇತ್ತು, ಏನೆಂದರೆ, ಮೈಸೂರು ವಿಶ್ವವಿದ್ಯಾನಿಲಯ ಒಕ್ಕಲಿಗರಿಗೆ, ಕರ್ನಾಟಕ ವಿಶ್ವವಿದ್ಯಾನಿಲಯ ಲಿಂಗಾಯತರಿಗೆ ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯ ಬ್ರಾಹ್ಮರಿಗೆ ಎಂದು ಇದನ್ನೆಲ್ಲಾ ತಪ್ಪಿಸಬೇಕು ಎನ್ನುವ ದೃಷ್ಟಿಯಿಂದ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಇವರಿಗೆ ಸಂಬಂಧಪಟ್ಟವರೊಬ್ಬರನ್ನು ಉಪಕುಲಪತಿಗಳನ್ನಾಗಿ ಮಾಡಿದರು. ಇವರನ್ನು ನೇಮಕ ಮಾಡಿದ ಮೇಲೆ ಅಲ್ಲಿ ಉತ್ತಮವಾದ ಕೆಲಸಗಳು ಆಗಬೇಕಾಗಿತ್ತು.

ಶ್ರೀ ಎಚ್. ಡಿ ದೇವೇಗೌಡ.—ಒಂದು ರೆಸಲ್ಯೂಷನ್ ಮಾಡೋಣ. ಯಾರು ಮುಖ್ಯಮಂತ್ರಿ ಯಾಗುತ್ತಾರೋ ಅವರ ಜಾತಿಯವರನ್ನೇ ಉಪಕುಲಪತಿಗಳನ್ನಾಗಿ ಮಾಡಬೇಕೆಂದು.

ಶ್ರೀ ಕಾಗೋಡು ತಿಮ್ಮಪ್ಪ.—ಸಚಿವರು ಇಲ್ಲದ್ದಾರೆ. ಇವತ್ತಿನವರೆಗೆ ವಿಶ್ವವಿದ್ಯಾನಿಲಯದ ಸೆನೆಟ್ ಮತ್ತು ಸಿಂಡಿಕೇಟ್‌ಗಳಿಗೆ ನಾಮಕರಣ ಮಾಡಿಲ್ಲ. ಈ ಸದನದಲ್ಲಿ ಸರ್ಕಾರದವರು ಹೊಸ ಕಾನೂನನ್ನು ಇದರ ಬಗ್ಗೆ ತಂದುಬಿಟ್ಟಿದ್ದೇವೆ, ಹಿಂದುಳಿದ ಮತ್ತು ಅಲ್ಪಸಂಖ್ಯಾತರಿಗೆ, ಇದ್ದವರಿಗೆ, ಇಲ್ಲದವರನ್ನು, ಎಲ್ಲರನ್ನು ಸೇರಿಸಿ ಸೆನೆಟ್ ಮತ್ತು ಸಿಂಡಿಕೇಟ್‌ನ್ನು ಕಾನ್‌ಸ್ಟಿಟ್ಯೂಟ್ ಮಾಡುತ್ತೇವೆಂದು ಹೇಳಿದರು. ವಿದ್ಯಾರ್ಥಿ ಪ್ರತಿನಿಧಿಗಳನ್ನು ಸೆನೆಟ್ ಮತ್ತು ಸಿಂಡಿಕೇಟ್‌ಗೆ

ಹಾಕುತ್ತೇವೆಂದು ಹೇಳಿದರು. ಒಬ್ಬರು ಪ್ರತಿನಿಧಿಗಳು ಇಲ್ಲದಿದ್ದರೆ ಇವುಗಳು ಫಂಕ್ಷನ್ ಮಾಡುವುದಕ್ಕೆ ಆಗುವುದಿಲ್ಲ. ಆದರೆ ಇವತ್ತಿನವರೆಗು ಇವರು ಇವುಗಳನ್ನು ಕಾನ್ಸ್ಟಿಟ್ಯೂಟ್ ಮಾಡಲಿಲ್ಲ. ಇದನ್ನು ಮಾಡಲಿಕ್ಕೆ ಸರ್ಕಾರದವರಿಗೆ ಇನ್ನು ಎಷ್ಟು ವರ್ಷ ಬೇಕು? ಸ್ಪೂಟ್‌ನಿಕ್ ಬಿಟ್ಟು ಇಲ್ಲಿಯೆ ಕೂತುಕೊಂಡು ಅನ್ನ ತಿರುಗಾಡಿಸುವಂಥ ಕಾಲದಲ್ಲಿ ಈ ಇಲಾಖೆಗೆ ಇಬ್ಬರು ಮಂತ್ರಿಗಳು ಇದ್ದು, ಈ ಕೆಲಸವನ್ನು ಇನ್ನೂ ಇವರು ಮಾಡಿಲ್ಲ. ಒಂದು ಹಿಡಿಗೆ ಎರಡು ಕೈ.

ಶ್ರೀ ಎಚ್. ಡಿ ದೇವೇಗೌಡ.—ಇಂದಿರಾ ಬ್ರಿಗೇಡ್‌ನವರಿಂದ ಇನ್ನೂ ಯಾರನ್ನೂ ಇಲ್ಲಿಗೆ ನಾಮಿನೇಟ್ ಮಾಡಬೇಕು ಎಂದು ಶಿಫಾರಸು ಬಂದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ವಿಶ್ವವಿದ್ಯಾನಿಲಯಗಳಲ್ಲಿ ಎಲೆಕ್ಷನ್ ನಡೆಯಬೇಕಾದರೆ ಇಂದಿರಾ ಬ್ರಿಗೇಡ್‌ನವರು ಬೈಸೈಕಲ್ ಚೈನು, ಚಾಕು ಹಿಡಿದುಕೊಂಡು ಓಡಾಡುತ್ತಿದ್ದರು. ಹೋಟೆಲುಗಳಿಗೂ ಹೋಗುತ್ತಿದ್ದರು. ಆದರೆ ಈ ಕಮಿಟಿಗಳಿಗೆ ಇವತ್ತಿನವರೆಗೂ ನಾಮಕರಣ ಮಾಡಲಿಲ್ಲ. ಒಂದು ರಾಜ್ಯದಲ್ಲಿ ಎಲ್ಲಾ ವಿಶ್ವವಿದ್ಯಾನಿಲಯಗಳು ಸಮಗ್ರತೆಯಿಂದ ಇರಬೇಕೆಂದು ಹೇಳುವಾಗ ಮತ್ತು ಹರಿಜನರನ್ನು ಅಲ್ಪಸಂಖ್ಯಾತರನ್ನು ಈ ಕಮಿಟಿಗಳಲ್ಲಿ ಹಾಕುತ್ತಾರೆ, ಎಲ್ಲರಿಗೂ ಸಮನಾದ ಪ್ರಾತಿನಿಧ್ಯ ಸಿಕ್ಕುತ್ತದೆ ಎಂದು ತಿಳಿದುಕೊಂಡಿದ್ದೆವು. ಇದನ್ನು ಮಾಡತಕ್ಕಂಥ ಕಾಲದಲ್ಲಿ ಯಾವುದೋ ಒಂದು ವರ್ಗವನ್ನು ಅಲಕ್ಷ್ಯ ಮಾಡಿದ್ದಾರೆ ಎನ್ನುವ ಭಾವನೆಯನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮಾನ್ಯ ಶ್ರೀಮಾಲಿಯವರನ್ನು ವಿಸಿಟಿಂಗ್ ಪ್ರೊಫೆಸರ್ ಆಗಿ ನೇಮಕ ಮಾಡಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಅವರು ಬ್ಯಾಕ್‌ವರ್ಡ್ ಕ್ಲಾಸ್ ಅಲ್ಲವೇ?

ಶ್ರೀ ಕಾಗೋಡು ತಿಮ್ಮಪ್ಪ.—ಇವರನ್ನು ವಿಸಿಟಿಂಗ್ ಪ್ರೊಫೆಸರ್ ಆಗಿ ಹಾಕಿ ಅವರಿಗೆ ತಿಂಗಳಿಗೆ ಮೂರು ಸಾವಿರ ಸಂಬಳ ಕೊಟ್ಟು ಅವರಿಂದ ಹೆಚ್ಚಿನ ಪ್ರಯೋಜನ ಪಡೆಯುವುದಕ್ಕೆ ಅವಕಾಶ ಇದೆಯೆಂದು ನಾನು ತಿಳಿದುಕೊಂಡಿಲ್ಲ. ನಮ್ಮ ಮೈಸೂರು ವಿಶ್ವವಿದ್ಯಾನಿಯದಲ್ಲಿ ಬೇಕಾದಂಥ ಬುದ್ಧಿವಂತರು ಮತ್ತು ಮಾನ್ಯ ಕೆ. ವಿ. ಪುಟ್ಟಪ್ಪನವರಂಥ ಕವಿಗಳು ಏನನ್ನೂ ತೆಗೆದುಕೊಳ್ಳದೆ ಕೆಲಸ ಮಾಡುವುದಕ್ಕೆ ತಯಾರಾಗಿದ್ದಾರೆ ಮಾನ್ಯ ಮಾಲಿಯವರು ಕಾಂಗ್ರೆಸ್‌ನ್ನು ಸಪೋರ್ಟ್ ಮಾಡುತ್ತಿರುವುದಕ್ಕೆ ಮತ್ತು ಅವರು ಚುನಾವಣೆಯಲ್ಲಿ ಸೋತಿದ್ದಾರೆ ಎಂದು ಅವರನ್ನು ಇಲ್ಲಿಗೆ ತಂದುಬಿಟ್ಟಿದ್ದಾರೆ. ಇದು ಯಾವ ನ್ಯಾಯ. ಇವರು ಹಿಂದೆ ಇದೇ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿದ್ದಾಗ ಈಗಿನ ಉಪಕುಲಪತಿಗಳು ಅವರ ಕೈಕೆಳಗೆ ಕೆಲಸ ಮಾಡುತ್ತಿದ್ದು ಅವರ ಉಪಕಾರ ಸ್ಮರಣೆ ತೋರಿಸುವ ದೃಷ್ಟಿಯಿಂದ ಈಗಿನ ಉಪಕುಲಪತಿಗಳು ಇವರನ್ನು ವಿಸಿಟಿಂಗ್ ಪ್ರೊಫೆಸರ್ ಆಗಿ ನೇಮಕ ಮಾಡಿಕೊಂಡಿದ್ದಾರೆ. ಇದು ಸಲ್ಲದ ಮಾತು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅನೇಕ ಭ್ರಷ್ಟಾಚಾರಗಳು ನಡೆದಿವೆ. ಸಿ. ಆರ್‌ಸ್ ಅವರು ಸುಮಾರು 80 ಸಾವಿರ ರೂಪಾಯಿಗಳನ್ನು ಹೊಡೆದು, ಅವರ ಮೇಲೆ ಕ್ರಮ ಏನೂ ಕೈಗೊಂಡಿಲ್ಲ. ಕರೆಸ್ಪಾಂಡೆನ್ಸ್ ಕೋರ್ಸಿಗೆ ಸಂಬಂಧಪಟ್ಟಂತೆ, ಇಲ್ಲಿ ಒಂದು ಲಕ್ಷ ರೂಪಾಯಿಗಳಿಗೂ ಮೇಲ್ಪಟ್ಟ ದುಂದು ವೆಚ್ಚವಾಗಿದೆ. 56 ಸಾವಿರ ರೂಪಾಯಿಗಳನ್ನು ಕ್ರಾಫರ್ಡ್ ಹಾಲ್ ಶೋಭಾಯಮಾನ ಮಾಡುವುದಕ್ಕೆ ಖರ್ಚು ಮಾಡುತ್ತಿದ್ದಾರೆ. ಹಾಗೆ ಮುಖ್ಯಮಂತ್ರಿಗಳು ಅವರನ್ನು ಉಪಕುಲಪತಿಗಳನ್ನಾಗಿ ಮಾಡಿದ ಮೇಲೆ ಅವರ ತಾಲ್ಲೂಕಿಗೆ ಭರಣಿ ಯೋಜನೆಯನ್ನು ಮಾಡಿ ಅಲ್ಲಿ ಅನವಶ್ಯಕವಾದ ಹಣವನ್ನು ಖರ್ಚು ಮಾಡಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ದುಡ್ಡನ್ನು ಉಪಕುಲಪತಿಗಳು ಈ ರೀತಿಯಾಗಿ ಖರ್ಚು ಮಾಡುವುದನ್ನು ನಿಲ್ಲಿಸಬೇಕು. ಮಣಿಪಾಲ್ ಮೆಡಿಕಲ್ ಕಾಲೇಜಿಗೆ ಸಂಬಂಧಪಟ್ಟಂತೆ ಇಲ್ಲಿ ನಾವು ಸಾಕಷ್ಟು ರೋಧನ ಮಾಡಿದ್ದೇವೆ. ಒಬ್ಬರಿಗೆ ಅನಾಟಮಿ ಮತ್ತು ಫಿಸಿಯಾಲಜಿ ಫೆಸಿಲಿಟೀಸ್ ಯಾವ ಕಾರಣಕ್ಕಾಗಿ ಸ್ಯಾಂಕ್ಷನ್ ಮಾಡಿದ್ದೀರಿ? ಮೇಲಾಗಿ ಇದರ ಬಗ್ಗೆ ಹೈಪವರ್ ಕಮಿಟಿಯವರು ಏನು ಶಿಫಾರಸ್ ಮಾಡಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಸರ್ಕಾರದವರ ಮರ್ಜಿಯನ್ನು ಅನುಸರಿಸಿ ನಡೆಯಬೇಡವೇ?

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಚನ್ನಬಸಪ್ಪನವರಿಗೆ ಮಂಗಳೂರಿನಲ್ಲಿ ಮತ್ತೊಂದು ಕಾಲೇಜನ್ನು ಮಾಡಬೇಕು ಎನ್ನುವ ಆಸಕ್ತಿ ಇರಬಹುದು. ಅಲ್ಲಿಗೆ ಇನ್ನೊಂದು ಕಾಲೇಜನ್ನು ಕೊಡುವುದಾದರೆ ನಮ್ಮ ರಕ್ತ ಇಲ್ಲಿ ನೆಲದ ಮೇಲೆ ಬೀಳಬೇಕು, ಈ ದೇಶವನ್ನು ಯಾರಿಗೂ ನಾವು ಗುತ್ತಿಗೆಗಾಗಲಿ, ಮಾರಾಟವಾಗಲಿ ಮಾಡಿಲ್ಲ. ಅವರಿಗೆ ಇನ್ನೊಂದು ಕಾಲೇಜನ್ನು ಕೊಡುವುದಾದರೆ ನಮಗೂ ಒಂದು ಕಾಲೇಜು ಕೊಡಿ ನಡೆಸುತ್ತೇವೆ. ಸಾಲಕ್ಕೆ ಬ್ಯಾಂಕುಗಳನ್ನು ಇಟ್ಟುಕೊಂಡು ಕೋಟ್ಯಾಂತರ ರೂಪಾಯಿಗಳ ವ್ಯವಹಾರ ಮಾಡಿದ ಮಾತ್ರಕ್ಕೆ ಇದು ಸರಿಯಲ್ಲ. ಅಲ್ಲಿ ಎರಡು ಕಾಲೇಜುಗಳನ್ನು ಮಾಡುವ ರೀತಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದವರು ಸಹಾಯಕವಾಗುವ ರೀತಿಯಲ್ಲಿ ಅವರಿಗೆ ಸಹಾಯ ಮಾಡಿದರೆ ಅದು ಅಕ್ಷಮ್ಯ ಅಪರಾಧ. ಮಾನ್ಯ ಮಂತ್ರಿಗಳು ಇದರಲ್ಲಿ ಪ್ರವೇಶ ಮಾಡಿ ಅವರಿಗೆಕೊಟ್ಟಿರತಕ್ಕ ಮಂಜೂರಾತಿಯನ್ನು ವಾಪಸ್ ಪಡೆಯಬೇಕು. ಮಾನ್ಯ ಮುಖ್ಯಮಂತ್ರಿಗಳೂ ಇದರ ಬಗ್ಗೆ ನಿನ್ನೆಯ ದಿವಸ ಹೇಳಿದ್ದಾರೆ. ಇದರ ಬಗ್ಗೆ ಏನಾದರೂ ಒಂದು ತೀರ್ಮಾನ ಬರುವುದಕ್ಕೆ ಮೊದಲೇ ಕೊಟ್ಟ ಮಂಜೂರಾತಿಯನ್ನು ವಾಪಸ್ ಪಡೆಯಬೇಕು ಎಂದು ನಾನು ಹೇಳುತ್ತೇನೆ.

ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಅನೇಕ ಹುದ್ದೆಗಳು ಖಾಲಿ ಇವೆ ಉಪಕುಲಪತಿಗಳು ಬಹಳ ಒಳ್ಳೆಯವರು ಎಂದು ನಾನು ತಿಳಿದುಕೊಂಡಿದ್ದೇನೆ. ಒಳ್ಳೆಯವರಾಗಿದ್ದು ಉತ್ತಮ ಆಡಳಿತ ನಡೆಸದೆ ಹೋದರೆ ಕಷ್ಟವಾಗುತ್ತದೆ. ಅನೇಕ ವರ್ಷಗಳಿಂದ ಖಾಲಿ ಇರುವಂಥ ಹುದ್ದೆಗಳಿಗೆ ಹಂಗಾಮಿಯಾಗಿ ನೇಮಕ ಮಾಡಿಕೊಂಡು ಮುಂದುವರಿಸುತ್ತಿದ್ದಾರೆಂದು ಗೊತ್ತಾಗಿದೆ. ಈ ಹುದ್ದೆಗಳಿಗೆ ತಕ್ಷಣ ಅಡ್ವರ್‌ಟೈಸ್ ಮಾಡಿ ಎಲ್ಲಾ ಜಾಗಗಳನ್ನು ಭರ್ತಿ ಮಾಡುವಂಥ ಕೆಲಸವನ್ನು ಮಾಡಬೇಕು ಎಂದು ತಮ್ಮ ಮೂಲಕ ಹೇಳಬಯಸುತ್ತೇನೆ. ಹಂಗಾಮಿಯಾಗಿ ಭರ್ತಿ ಮಾಡುವುದಾದರೆ ಮಂತ್ರಿಗಳಿಗೋ ಅಥವಾ ಯಾರಿಗೋ ತಮಗೆ ಬೇಕಾದವರಿಗೆ ಕೆಲಸವನ್ನು ಕೊಡುವುದಕ್ಕೆ ಅನುವಾಗುತ್ತದೆ. ಅಲ್ಲದೆ ಇವರ ಕೈ ಬೆಂಬಲಿಸುವಂಥವರ ಕಡೆಯವರಿಗೆ ಕೆಲಸವನ್ನು ಕೊಡುವುದಕ್ಕೆ ಅನುಕೂಲವಾಗುತ್ತದೆ. ಆದರೆ ಅರ್ಹತೆ ಇದ್ದು ಕೆಲಸ ಮಾಡತಕ್ಕವರಿಗೆ ಕೆಲಸ ಸಿಕ್ಕುವುದಿಲ್ಲ. ಆದ್ದರಿಂದ ಈ ಮೂರು ವಿಶ್ವವಿದ್ಯಾನಿಲಯಗಳಲ್ಲಿ ಖಾಲಿ ಇರುವಂಥ ಹುದ್ದೆಗಳನ್ನು ತಕ್ಷಣ ಭರ್ತಿ ಮಾಡತಕ್ಕ ಕೆಲಸವನ್ನು ಮಾನ್ಯ ಮಂತ್ರಿಗಳು ಮಾಡಬೇಕು. ಹಾಗೆಯೇ ನಮ್ಮ ವಿಶ್ವವಿದ್ಯಾನಿಲಯಕ್ಕೆ ಸೇರಿದಂತೆ ಅನೇಕ ಉಪಾಧ್ಯಾಯರುಗಳು ಅನೇಕ ತರಹದಂಥ ಚಳುವಳಿಯನ್ನು ಮಾಡುತ್ತಿದ್ದಾರೆ ಈ ಉಪಾಧ್ಯಾಯರುಗಳ ಕೊರತೆಗಳು ಏನು ಎನ್ನುವುದನ್ನು ವಿಚಾರಣೆ ಮಾಡಿ ಅದನ್ನು ಪರಿಹಾರ ಮಾಡತಕ್ಕಂಥ ಕೆಲಸವನ್ನು ತಕ್ಷಣ ಮಾಡಬೇಕು ಎಂದು ನಾನು ಹೇಳುತ್ತೇನೆ. ಇತ್ತೀಚೆಗೆ ಅವರುಗಳು ಪರೀಕ್ಷಾ ಪತ್ರಿಕೆಗಳನ್ನು ಪರಿಶೀಲನೆ ಮಾಡತಕ್ಕಂಥ ಕಾಲದಲ್ಲಿ ಏಕಾ ಏಕಿ ಒಂದು ಮುಷ್ಕರವನ್ನು ಹೂಡಿದರು. ಇಂಥ ಸಂದರ್ಭ ಏಕೆ ಬಂತು ? ಅವರ ಬೇಡಿಕೆ ಹಲವಾರು ವರ್ಷಗಳಿಂದ ಇದ್ದುದರಿಂದ ಈ ಮುಷ್ಕರವನ್ನು ಹೂಡಿದರು. ಇದರ ಬಗ್ಗೆ ಉನ್ನತ ಅಧಿಕಾರಿಗಳು ವಿಚಾರ ಮಾಡಿ ಅವರ ಬೇಡಿಕೆಗಳು ಸಾಧುವೇ ಅಲ್ಲವೇ, ಸಾಧುವಾಗಿದ್ದರೆ ತಕ್ಷಣ ತೀರ್ಮಾನ ತೆಗೆದುಕೊಳ್ಳಬೇಕು ಇಲ್ಲವಾಗಿದ್ದರೆ ಅವರು ತಮ್ಮ ಬೇಡಿಕೆಗಳನ್ನು ಕೈಬಿಡುವಂತೆ ಹೇಳಬೇಕು.

ಆದುದರಿಂದ ಉಪಾಧ್ಯಾಯರುಗಳಲ್ಲಿ ಇರತಕ್ಕಂಥಾ ಈ ಒಂದು ಅತೃಪ್ತಿಯನ್ನು ಸರ್ಕಾರ ತತ್‌ಕ್ಷಣವಾಗಿ ಸಮಾಧಾನ ಪಡಿಸುವುದಾದರೆ ಈ ವಿದ್ಯಾಭ್ಯಾಸ ಕ್ಷೇತ್ರವಲ್ಲಿ ಇನ್ನೂ ಉತ್ತಮವಾದಂಥಾ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ದಿಶೆಯಲ್ಲಿ ತಾವು ಕೆಲಸ ಮಾಡಿ ಈ ವಿದ್ಯಾಭ್ಯಾಸ ಕ್ಷೇತ್ರವನ್ನು ಇನ್ನೂ ಉತ್ತಮ ಪಡಿಸಬೇಕು ಎಂದು ಹೇಳುತ್ತೇನೆ. ಒಂದು ದೃಷ್ಟಿಯಿಂದ ಹೇಳುವುದಾದರೆ ಉತ್ತಮ ಸಂಸ್ಕೃತಿಯನ್ನು ಹೊಂದಿದಂಥಾ ಮತ್ತು ಉತ್ತಮ ಗುಣಗಳನ್ನು ಹೊಂದಿದಂಥಾ ಶ್ರೀಮಾನ್ ಮಾಯ್ಯರವರು ಇದ್ದರೆ ಅದೇರೀತಿ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆ ಅವರೂ ಇದ್ದಾರೆ. ಈ ಇಬ್ಬರು ವ್ಯಕ್ತಿಗಳು ಬರೇ ಒಳ್ಳೆಯವರಾಗಿದ್ದರೆ ಪ್ರಯೋಜನ ಇಲ್ಲಾ. ಅವರು ತಮ್ಮಲ್ಲಿ ಒಳ್ಳೆತನ ಇದೆ ಎಂದು ಅಷ್ಟಕ್ಕೆ ಮಾತ್ರ ತೃಪ್ತಿಪಡದೆ ಈ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಉತ್ತಮವಾದ ವಿದ್ಯಾಭ್ಯಾಸ ಮತ್ತು ಒಂದು ಒಳ್ಳೆಯ ವಾತಾವರಣ ಉಂಟು ಮಾಡುವಂತೆ ತೃಪ್ತಿಕರವಾಗಿ ಕೆಲಸ ಮಾಡಬೇಕು ಅವರ ಈ ಇಲಾಖೆ ಒಂದು ತೀವ್ರ ಅತೃಪ್ತಿ ಮಟ್ಟಕ್ಕೆ ಹೋಗಿ ಮುಟ್ಟಿದೆ. ಆದುದರಿಂದ ಅವರು ಈ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಚೆನ್ನಾಗಿ ಕೆಲಸ ಮಾಡಿ

ಕರ್ನಾಟಕ ರಾಜ್ಯಕ್ಕೆ ಉತ್ತಮವಾದ ವಿದ್ಯಾಭ್ಯಾಸ ಮತ್ತು ಈ ಕ್ಷೇತ್ರದಲ್ಲಿ ಉತ್ತಮವಾದ ವಾತಾವರಣ ಉಂಟು ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಮತ್ತೊಮ್ಮೆ ಹೇಳಿ, ಉಪಾಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು.—ಈಗ ಈ ಡಿಮ್ಯಾಂಡ್ ಮೇಲೆ ಮಾತನಾಡುವವರು ಇನ್ನೂ 13 ಜನ ಸದಸ್ಯರು ಇದ್ದಾರೆ ಅವರೆಲ್ಲಾ 10—10 ನಿಮಿಷ ಮಾತನಾಡಬೇಕು ಎಂದು ಹೇಳುತ್ತೇನೆ.

ಶ್ರೀ ಎಂ ಹೆಚ್. ಜಯಪ್ರಕಾಶನಾರಾಯಣ್.—ಇದು 113 ಕೋಟಿ ರೂಪಾಯಿನ ಡಿಮ್ಯಾಂಡ್ ಆಗಿರುವುದರಿಂದ ಈ ಬಗ್ಗೆ ಮಾತನಾಡುವುದಕ್ಕೆ ಹೆಚ್ಚು ಅವಕಾಶ ಮಾಡಿಕೊಡಬೇಕೆಂದು ಕೇಳುತ್ತೇನೆ.

ಉಪಾಧ್ಯಕ್ಷರು.—ಮೊದಲು ಚರ್ಚೆ ನಡೆಯಲಿ, ಆಮೇಲೆ ನೋಡೋಣ.

ಶ್ರೀ ಹೆಚ್. ಜಿ. ಚೆನ್ನಪ್ಪ.—ಒಂದು ದಿವಸಕ್ಕೆ ಕೇವಲ 5 6 ಜನಕ್ಕೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ನಮಗೆ ಮಾತನಾಡಲು ಅವಕಾಶವನ್ನೇ ಕೊಟ್ಟಿಲ್ಲ. ಇದು 130 ಕೋಟಿ ರೂಪಾಯಿನ ಡಿಮ್ಯಾಂಡ್ ಆಗಿರುತ್ತೆ. ಈ ಬಗ್ಗೆ ಹೆಚ್ಚು ಮಾತನಾಡಬೇಕಾಗಿದೆ ಆದುದರಿಂದ ಈ ಡಿಮ್ಯಾಂಡ್‌ಗೆ ಇನ್ನೂ ಒಂದು ದಿವಸ ಹೆಚ್ಚಿಗೆ ತೆಗೆದುಕೊಂಡು ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು.—ಎಲ್ಲರೂ ಮಾತನಾಡುವುದಕ್ಕೆ ಒಂದೊಂದು ಗಂಟೆ ತೆಗೆದುಕೊಳ್ಳುತ್ತಾರೆ. ಈ ಡಿಮ್ಯಾಂಡ್ ಅನ್ನು ಆದಷ್ಟು ಜಾಗ್ರತೆ ಮುಗಿಸಬೇಕಾಗಿರುವುದರಿಂದ ಆದಷ್ಟು ಮಟ್ಟಿಗೆ ಕಡಿಮೆ ಕಾಲಾವಕಾಶವನ್ನು ತೆಗೆದುಕೊಂಡು ಜಾಗ್ರತೆ ಮುಗಿಸಿದರೆ ಉತ್ತಮ. ಮೊದಲು ಚರ್ಚೆ ನಡೆಯಲಿ, ಆಮೇಲೆ ನೋಡೋಣ.

† ಶ್ರೀ ಸಿ. ವಿ. ವೆಂಕಟರಾಯಪ್ಪ (ಚಿಕ್ಕಬಳ್ಳಾಪುರ).—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಿದ್ಯಾ ಸಚಿವರುಗಳು ಮಂಡಿಸಿರತಕ್ಕಂಥಾ ಬೇಡಿಕೆಗಳನ್ನು ಅನುಮೋದಿಸಿ, ವಿದ್ಯಾಭ್ಯಾಸದ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಿನ್ನೆ ದಿವಸ ಬಿ. ಇ. ಡಿ. ಕಾಲೇಜ್ ಮುಚ್ಚಿದ ಬಗ್ಗೆ ಒಂದು ಕಾಲ್ ಅಟೆನ್‌ಷನ್ ನೋಟೀಸ್‌ಗೆ ಸಚಿವರು ಉತ್ತರ ಕೊಟ್ಟರು ಈ ಬಿ. ಇ ಡಿ ಕಾಲೇಜ್‌ನ್ನು ಮುಚ್ಚುವುದಕ್ಕೆ ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ನೇಮಕ ಮಾಡಿದ್ದರು. ನನಗೆ ತೋರಿದ ಮಟ್ಟಿಗೆ ಹೇಳುವುದಾದರೆ ಇದರಲ್ಲಿ ಎರಡು ಉದ್ದೇಶ ಇರಬಹುದು ಎಂದು ಕಾಣುತ್ತದೆ. ಮೊದಲನೆಯದಾಗಿ ಈ ಬಿ.ಇ.ಡಿ. ಕಾಲೇಜಿಗೆ ಎಷ್ಟು ಜನರನ್ನು ಸೇರಿಸಿಕೊಳ್ಳಬೇಕು ಅನ್ನುವುದು ಒಂದು ಉದ್ದೇಶ ಎರಡನೆಯದಾಗಿ ಈ ಕಾಲೇಜುಗಳಲ್ಲಿ ಸರಿಯಾಗಿ ಸ್ಟ್ಯಾಂಡರ್ಡ್ ಮೆಂಟೇನ್ ಮಾಡುತ್ತಿದ್ದಾರೆಯೇ ಇಲ್ಲವೇ ಅನ್ನುವುದು ಮತ್ತೊಂದು ಉದ್ದೇಶ ಇರಬಹುದು ಈ ಎರಡು ಉದ್ದೇಶವನ್ನೂ ಅವರ ಮನಸ್ಸಿನಲ್ಲಿಟ್ಟುಕೊಂಡು ಈ ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ನೇಮಕ ಮಾಡಿದ್ದರೋ ಏನೋ ಎಂದು ನನಗೆ ಕಾಣುತ್ತದೆ. ಎರಡನೆಯದಾಗಿ ನಾನು ಹೇಳುವುದೇನೆಂದರೆ ಪ್ರತಿ ವರ್ಷವೂ ಈ ಬಿ ಇ.ಡಿ. ಕಾಲೇಜಿನಿಂದ ಎಷ್ಟು ಜನ ಪಾಸ್ ಮಾಡಿಕೊಂಡು ಹೊರಗೆ ಬರುತ್ತಿದ್ದಾರೆ? ಅಲ್ಲದೆ ರಾಜ್ಯದ ಗ್ರೋಯಿಂಗ್ ಪಾಪ್ಯುಲೇಷನ್‌ಗನುಗುಣವಾಗಿ ಎಷ್ಟು ಅಡಿಷನಲ್ ಉಪಾಧ್ಯಾಯರುಗಳು ಬೇಕಾಗಿದ್ದಾರೆ? ಅಲ್ಲದೆ ಇದರಲ್ಲಿ ಹೊರಗಿನವರು ಎಷ್ಟು ಜನ ಇದ್ದಾರೆ? ಮತ್ತು ಕೇರಳ, ತಮಿಳ್‌ನಾಡು ಮತ್ತು ಆಂಧ್ರಪ್ರದೇಶದಿಂದ ಬಂದಿರತಕ್ಕಂಥಾ ಹುಡುಗರು ಎಷ್ಟು ಇದ್ದಾರೆ? ಅವರಲ್ಲಿ ಪಾಸಾಗಿರತಕ್ಕಂಥಾ ಹುಡುಗರು ಎಷ್ಟು? ಅಲ್ಲದೆ ಇದರಲ್ಲಿ ಹೆಣ್ಣು ಮಕ್ಕಳು ಎಷ್ಟು? ಗಂಡು ಮಕ್ಕಳು ಎಷ್ಟು? ಈ ಅಂಕಿಅಂಶವೆಲ್ಲಾ ಅವರಲ್ಲಿ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಈ ಬಗ್ಗೆ ನನಗೆ ತಿಳಿದಮಟ್ಟಿಗೆ ಹೇಳುವುದಾದರೆ ಪ್ರತಿವರ್ಷವೂ ಗ್ರೋಯಿಂಗ್ ಪಾಪ್ಯುಲೇಷನ್‌ಗೆ ಅನುಗುಣವಾಗಿ ಬಿ. ಇ ಡಿ. ಕಾಲೇಜಿನಲ್ಲಿ ಎಷ್ಟು ಜನ ಪಾಸಾಗಬೇಕೋ ಅದಕ್ಕಿಂತಲೂ ಹೆಚ್ಚಾಗಿ ಪಾಸಾಗಿದ್ದಾರೆ ಅನ್ನುವುದು ನನ್ನ ಮನಸ್ಸಿನಲ್ಲಿ ಇದೆ. ಈ ಬಗ್ಗೆ ತಮಗೆ ಒಂದು ಉದಾಹರಣೆ ಹೇಳುತ್ತೇನೆ. ನಮ್ಮ ಚಿಕ್ಕಬಳ್ಳಾಪುರದಲ್ಲಿ ಮುನಿಸಿಪಲ್ ಕಾಲೇಜ್ ಆಫ್ ಎಜುಕೇಷನ್ ಅಂತ ಇದೆ. ಅಲ್ಲಿ 100 ಜನ ವಿದ್ಯಾರ್ಥಿಗಳು ಇದ್ದಾರೆ. ಅದರಲ್ಲಿ 60 ಜನ ಹೊರಗಿನವರೇ ಇದ್ದಾರೆ, ಇನ್ನು 40 ಜನ ಕರ್ನಾಟಕದವರು ಇದ್ದಾರೆ. ಸಾಮಾನ್ಯವಾಗಿ ಎಲ್ಲಾ

ಪ್ರೈವೇಟ್ ಕಾಲೇಜುಗಳಲ್ಲೂ ಹೀಗೆಯೇ ಇರಬೇಕು, ಸರ್ಕಾರೀ ಕಾಲೇಜು ಬಿಟ್ಟು. ಏತಕ್ಕೆಂದರೆ ಈ ಸರ್ಕಾರೀ ಕಾಲೇಜುಗಳಲ್ಲಿ ಸ್ವಲ್ಪ ಪರ್ಸೆಂಟೇಜ್ ಇರುವುದರಿಂದ ಅದರಲ್ಲಿ ಎಷ್ಟು ಬೇಕೋ ಅಷ್ಟು ಜನರನ್ನು ಮಾತ್ರ ಅಡ್ಮಿಟ್ ಮಾಡಿಕೊಳ್ಳುವುದರಿಂದ ಅದು ಅಷ್ಟರಲ್ಲೇ ನಿಂತಿದೆ. ನಾನು ಮೊದಲೇ ಹೇಳಿದ ಹಾಗೆ ಪ್ರತಿವರ್ಷವೂ ಈ ಕಾಲೇಜುಗಳಿಗೆ ಅಡಿಷನಲ್ ಉಪಾಧ್ಯಾಯರುಗಳು ಎಷ್ಟು ಜನರಿದ್ದಾರೆ ಅನ್ನುವುದನ್ನು ಲೆಕ್ಕಾಚಾರ ಹಾಕಿದರೆ, ಮತ್ತು ಆ ಸ್ಟ್ರೆಂತ್‌ಗೆ ಅನುಗುಣವಾಗಿ ಅದರಲ್ಲಿ ಎಷ್ಟು ಜನ ಪಾಸಾಗಿರುತ್ತಾರೆ ಅನ್ನುವುದನ್ನು ಲೆಕ್ಕಾಚಾರ ಹಾಕಿದರೆ ನಮ್ಮ ಕರ್ನಾಟಕದಲ್ಲಿ ಪಾಸಾಗಿರತಕ್ಕಂಥಾ ಜನ ಜಾಸ್ತಿ ಇಲ್ಲ ಎಂದು ಹೇಳುತ್ತೇನೆ. ಇದು ಮೊದಲನೇ ಅಂಶ. ಇನ್ನು ಎರಡನೇ ಅಂಶ ಏನೆಂದರೆ ಪಾಸಾಗಿರತಕ್ಕಂಥಾವರೆಲ್ಲರೂ ಕೂಡ ಬಿ. ಇ. ಡಿ. ಕಾಲೇಜಿಗೆ ಸೇರಿದವರೆಲ್ಲರೂ ಕೂಡ ಕೆಲಸಕ್ಕೆ ಹೋಗುತ್ತಾರೆ ಅಂತ ತಿಳಿದುಕೊಂಡಿದ್ದರೆ ಅದು ಸರಿಯಲ್ಲ. ಏತಕ್ಕೆಂದರೆ ಮದುವೆಯಾಗದೇ ಇದ್ದಂಥಾ ಹೆಣ್ಣುಮಕ್ಕಳು ಎಷ್ಟೋ ಇದ್ದಾರೆ, ಕೆಲವರಿಗೆ ಡಿಗ್ರಿ ಆಗಿದ್ದು ಪುರಸೊತ್ತು ಆಗಿರುವುದರಿಂದ ನಮ್ಮ ಹೆಣ್ಣು ಮಕ್ಕಳು ಬಿ ಇ.ಡಿ.ಗೆ. ಸೇರಿಸಿ ಒಂದು ಟ್ರೈನಿಂಗ್ ಮಾಡಿದರೆ ಒಳ್ಳೆಯದು ಅಂತ ಈ ಕಾಲೇಜಿಗೆ ಸೇರಿಸುತ್ತಾರೆ. ಹಾಗೆ ಕಾಲೇಜಿಗೆ ಸೇರಿಕೊಂಡು ಪಾಸಾಗಿರತಕ್ಕಂಥಾ ಜನರೂ ಇದ್ದಾರೆ. ಕೆಲವರು ಈ ಒಂದು ವಿದ್ಯೆಯನ್ನು ಕಲಿಯಬೇಕು ಅನ್ನುವ ಆಸೆಯಿಂದ ಈ ಕಾಲೇಜ್‌ಗೆ ಸೇರಿರುತ್ತಾರೆ. ಹೀಗೆಲ್ಲಾ ರೀತಿಯಾ ಕಾರಣಗಳಿಂದ ಇವರುಗಳು ಈ ಬಿ. ಇ. ಡಿ. ಕಾಲೇಜಿಗೆ ಸೇರಿರುತ್ತಾರೇ ವಿನಾ ಬರೇ ಕೆಲಸಕ್ಕೆ ಹೋಗುವುದಕ್ಕೆ ಇವರು ಸೇರಿಕೊಂಡಿರುತ್ತಾರೆ ಅಂತ ತಿಳಿದು ಕೊಂಡಿದ್ದರೆ ಅದು ಸರಿಯಲ್ಲ. ತಾವು ಈ ಒಂದು ವಿಷಯವನ್ನು ಅರ್ಥ ಮಾಡಿಕೊಳ್ಳಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಎರಡನೆಯದಾಗಿ ಹೇಳುವುದು ಏನೆಂದರೆ ಈ ಬಿ. ಇ. ಡಿ. ಕಾಲೇಜನ್ನು ಮುಚ್ಚುವ ವಿಷಯದ ಬಗ್ಗೆ ಸರ್ಕಾರ ಒಂದು ಎಕ್ಸ್‌ಪರ್ಟ್ ಕಮಿಟಿ ಮಾಡಿ ನೇಮಕ ಮಾಡಿದ್ದರು. ಅವರು ಎಲ್ಲಾ ಕಾಲೇಜುಗಳನ್ನೂ ಕೂಡ ವಿಸಿಟ್ ಮಾಡಿದ್ದಾರೆ. ಎಂದು ನಾನು ಅಂದುಕೊಂಡಿದ್ದೇನೆ. ಹಾಗೆಯೇ ನಮ್ಮ ಚಿಕ್ಕಬಳ್ಳಾಪುರದ ಮುನಿಸಿಪಲ್ ಕಾಲೇಜಿಗೂ ಸಹ ಬಂದಿದ್ದರು. ನಮ್ಮ ಕಾಲೇಜಿನ ಬಗ್ಗೆ ತಮಗೆ ಒಂದು ಉದಾಹರಣೆ ಕೊಡುತ್ತೇನೆ ಅವರ ನಾರ್ಮ್ಸ್ ಏನು ಇದೆ, ಆ ಪ್ರಕಾರ ಈ ಕಾಲೇಜ್‌ನಲ್ಲಿ ಸ್ಟ್ಯಾಂಡರ್ಡ್ ಸರಿಯಾಗಿ ಮೆಂಟೇನ್ ಮಾಡುತ್ತಿದ್ದಾರೆಯೇ ಇಲ್ಲವೇ ಮತ್ತು ಈ ಬಗ್ಗೆ ಇನ್ನು ಏನೇನು ಕಂಡೀಷನ್ಸ್ ಇದ್ದುವು ಅವುಗಳೆಲ್ಲಾ ಸ್ಯಾಟಿಸ್‌ಫೈ ಆಗಿದೆಯೇ ಇಲ್ಲವೇ ಅನ್ನುವುದನ್ನು ನಮಗೆ ಇದುವರೆಗೂ ಅವರು ಹೇಳಿರಲಿಲ್ಲಾ. ನಿನ್ನೆ ದಿವಸ ಈ ಬಗ್ಗೆ ಕಾಲ್ ಅಟೆನ್‌ಷನ್ ಬಂದಾಗ ಸಚಿವರು ಉತ್ತರ ಕೊಟ್ಟಾಗ ನನಗೆ ಗೊತ್ತಾಯಿತು. ಕಾಲೇಜಿಗೆ ವಿಸಿಟ್ ಮಾಡಿದವರೂ ಕೂಡ ಇದುವರೆಗೆ ಈ ಬಗ್ಗೆ ಏನೂ ಹೇಳಿರಲಿಲ್ಲಾ. ಅಲ್ಲದೆ ಅವರಿಂದ ನಮ್ಮ ಕಾಲೇಜಿಗೆ ಒಂದು ನೋಟೀಸ್ ಆಗಲಿ, ಅಥವಾ ಈ ಕಾಲೇಜು ಇಂಥಿಂಥಾ ಕಂಡೀಷನ್ಸ್‌ಗಳನ್ನು ಸ್ಯಾಟಿಸ್‌ಫೈ ಮಾಡಬೇಕು ಅನ್ನುವುದಾಗಲಿ ಅಥವಾ ಈ ಕಾಲೇಜಿಗೆ ಇಂಥಿಂಥಾದ್ದು ಬೇಕು, ಇಂಥಾ ಕೊರತೆ ಇದೆ ಅಂತ ಆಗಲಿ ಏನೂ ಹೇಳಲಿಲ್ಲಾ. ಇವರ ಉದ್ದೇಶ ಏನೋ ಅನ್ನುವುದೂ ಕೂಡ ನನಗೆ ಗೊತ್ತಿಲ್ಲ. ಇದ್ದಕ್ಕಿದ್ದ ಹಾಗೆ ಸರಪ್ರೈಸ್ ವಿಸಿಟ್ ಬಂದರು, ಅವರು ಯಾವ ಡೇಟ್ ಕೂಡ ಕೊಟ್ಟಿರಲಿಲ್ಲಾ. ಅಥವಾ ಅವರು ಯಾವ ಒಂದು ಉದ್ದೇಶವನ್ನು ಇಟ್ಟುಕೊಂಡು ಬಂದರೋ ನನಗೆ ಗೊತ್ತಾಗಲಿಲ್ಲಾ. ನಿನ್ನೆ ದಿವಸ ಮಾನ್ಯ ಸಚಿವರು ಈ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡಿದ ಮೇಲೆ ಗೊತ್ತಾಯಿತು. ಆದುದರಿಂದ ನಾನು ಈ ದಿನ ಈ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕೆಂದು ತೀರ್ಮಾನ ಮಾಡಿಕೊಂಡು ಈಗ ಮಾತನಾಡುವುದಕ್ಕೆ ಎದ್ದು ನಿಂತು ಕೊಂಡೆ. ಅವರು ಕೊಟ್ಟಿರತಕ್ಕಂಥಾ ನಾರ್ಮ್ಸ್ ನೋಡಿದರೆ ಚಿಕ್ಕಬಳ್ಳಾಪುರದಲ್ಲಿರುವ ನಮ್ಮ ಮುನಿಸಿಪಲ್ ಕಾಲೇಜ್ ಆಫ್ ಎಜುಕೇಷನ್ ಏನು ಇದೆ ಅದು ಇವರು ಹೇಳಿದ ಕಂಡೀಷನ್ಸ್ ಎಲ್ಲಾ ತೃಪ್ತಿಕರವಾಗಿವೆ. All most all conditions are satisfie !. ಆದರೆ ನಿನ್ನೆ ಸ್ಟೇಟ್‌ಮೆಂಟ್‌ನಲ್ಲಿ ಏನು ಇದೆ ಅನ್ನುವುದನ್ನು ನೋಡಿದರೆ ಈ 5 ಕಾಲೇಜುಗಳಲ್ಲಿ ನಮ್ಮ ಚಿಕ್ಕಬಳ್ಳಾಪುರದ ಕಾಲೇಜೂ ಕೂಡ ಸೇರಿಕೊಂಡಿದೆ. ಆ ಸ್ಟೇಟ್‌ಮೆಂಟ್‌ನಲ್ಲಿ ಏನಿದೆ ಎಂದರೆ They have not satisfied all most all the conditions lay down in the norms ಅಂತ ಇತ್ತು. ಅದರಲ್ಲಿ ಪ್ರತಿಸ್ತವಾಂಶ ಇಲ್ಲದೆ ಇದ್ದರೆ ಇದಕ್ಕೇನೇ ಒಂದು ಬೇರೆ ಕಮಿಟಿ ಮಾಡುವುದಕ್ಕೆ ಏರ್ಪಾಡು ಮಾಡುವರಾ ಎಂದು ನಾನು ಸಚಿವರನ್ನು ಕೇಳಿದೆ ಅವರು ಬೇರೆ ಒಂದು ಕಮಿಟಿ ಮಾಡುತ್ತೇನೆ ಅಂತ

ಭರವಸೆ ಕೊಟ್ಟರು. ಈ ಬಗ್ಗೆ ನಾನು ಒಂದು ವಿಷಯ ತಮಗೆ ಹೇಳುತ್ತೇನೆ ನಾನು ಎಂ.ಎಲ್.ಎ. ನಾನು ಈ ಕಾಲೇಜನ್ನು ನಡೆಸುತ್ತಾ ಇದ್ದೇನೆ, ನನಗೆ ಈ ಒಂದು ಅಧಿಕಾರ ಇದೆ. ಸಚಿವರಿಗೂ ನನಗೂ ಬಹಳ ಕೇವಲ ಅನ್ನುವುದಾಗಲಿ ಇಲ್ಲವೇ ಇವರು ಕಾಂಗ್ರೆಸ್ ಪಕ್ಷದಲ್ಲಿರುವವರು ಅಂತ ಒಂದು ಫೇವರ್ ಮಾಡುವುದಾಗಲಿ ನನಗೆ ಬೇಡ. ಆ ದೃಷ್ಟಿಯಿಂದ ನಾನು ಕೇಳುತ್ತಾ ಇಲ್ಲ. ಬೇರೆ ಕಾಲೇಜುಗಳಿಗೂ ನಮ್ಮ ಕಾಲೇಜಿಗೂ ಹೋಲಿಸಿ ನೋಡಿ. ಅಲ್ಲಿ ಏನೇನು ಕಂಡೀಷನ್ಸ್ ಇವೆ, ಇಲ್ಲಿ ಕಂಡೀಷನ್ಸ್ ಏನು ಏನು ಇವೆ, ನೋಡಿ. ಬೇರೆ ಕಾಲೇಜುಗಳಲ್ಲಿ ಏನು ಕಂಡೀಷನ್ಸ್ ಇವೆ, ಅವರು ಎಷ್ಟರ ಮಟ್ಟಿಗೆ ಅವರನ್ನು ಸ್ಯಾಟಿಸ್‌ಫೈ ಮಾಡಿದ್ದಾರೆ, ಅಷ್ಟರಮಟ್ಟಿಗೆ ನಮ್ಮ ಕಾಲೇಜು ಸ್ಯಾಟಿಸ್‌ಫೈ ಮಾಡಿದೆಯೇ ಇಲ್ಲವೋ ನೋಡಿ ನಮ್ಮ ಕಾಲೇಜೂ ಕೂಡ ಬೇರೆ ಕಾಲೇಜು ಏನು ಸ್ಯಾಟಿಸ್‌ಫೈ ಮಾಡಿದೆಯೋ ಅಷ್ಟರಮಟ್ಟಿಗೆ ಸ್ಯಾಟಿಸ್‌ಫೈ ಮಾಡಿದ್ದರೆ ಸಾಕು. ನಾನು ಎಂ.ಎಲ್.ಎ. ಅಂತ ಅಗಲಿ ಅಥವಾ ಕಾಂಗ್ರೆಸ್ ಪಕ್ಷದವನು ಅಂತ ಆಗಲಿ ತಿಳಿದುಕೊಂಡು ನನಗೆ ಫೇವರ್ ಮಾಡಬೇಡಿ. ಮತ್ತು ನನಗೆ ಅದು ಬೇಕಾಗೂ ಇಲ್ಲ ನಾನು ಈ ಮಾತನ್ನು ಮಾನ್ಯ ಮಂತ್ರಿಗಳಿಗೆ ನಾಟುವ ಹಾಗೆ ಮತ್ತೆ ಮತ್ತೆ ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಅವರ ಮನಸ್ಸಿನಲ್ಲಿ ಏನು ಇದೆಯೋ ನನಗೆ ಗೊತ್ತಿಲ್ಲ. ಅವರಿಗೆ ಈ ಬಗ್ಗೆ ಏತಕ್ಕೆ ಅನುಮಾನ ಬಂದಿದೆಯೋ ನನಗೆ ಗೊತ್ತಿಲ್ಲ. All most all conditions are satisfied ಅಂತ ನಾನು ಎಷ್ಟು ಹೇಳಿದರೂ ಸಹ ಇಲ್ಲ ಅಂತ ಅವರು ಹೇಳಿದರೂ. ಅವರು ಹೇಳುವುದನ್ನು ನಂಬುತ್ತಾರೇ ವಿನಾ ನಾನು ಹೇಳುವುದನ್ನು ನಂಬುತ್ತಾ ಇಲ್ಲ. ಏತಕ್ಕೆ ನಂಬುವುದಿಲ್ಲವೋ ನನಗೆ ಗೊತ್ತಾಗುವುದಿಲ್ಲ ತಮಗೆ ಈ ವಿಷಯದಲ್ಲಿ ಇನ್ನೂ ಒಂದು ಹೆಜ್ಜೆ ಮುಂದಿಟ್ಟು ಹೇಳುವುದಾದರೆ ಆ ಕಮಿಷನ್ ಬಂದದ್ದು ರಜಾ ದಿನದಲ್ಲಿ ನಮ್ಮ ಕಾಲೇಜಿನಲ್ಲಿ ಕ್ವಾಲಿಫೈಡ್ ಲೆಕ್ಚರರ್ಸ್ 9 ಜನ ಇದ್ದಾರೆ, ಪಾರ್ಟ್‌ಟೈಂ ಲೆಕ್ಚರರ್ ಒಬ್ಬರು ಇದ್ದಾರೆ. ಅದರಲ್ಲಿ 4 ಜನರು ಜೂನಿಯರ್ ಕಾಲೇಜು ಪ್ರಿನ್ಸಿಪಾಲ್ ಆಗಿ ಹೋದರೆ ಮತ್ತೆ ಇಬ್ಬರು ತಾಸೀಲ್ದಾರರಾಗಿ ಹೊರಟು ಹೋದರೆ. ಇನ್ನೊಬ್ಬರನ್ನು ಏನು ಮಾಡಿದರು ಎಂದರೆ ಇದನ್ನು ಮೈಸೂರು ಯೂನಿವರ್ಸಿಟಿಯಿಂದ ಬೆಂಗಳೂರು ಯೂನಿವರ್ಸಿಟಿಗೆ ಕನ್‌ವರ್ಟ್ ಮಾಡಿದ ಮೇಲೆ ಇದಕ್ಕೆ ಫಿಸಿಕಲ್ ಲೆಕ್ಚರರ್ ಬೇಕಾಗಿಲ್ಲಾ ಎಂದು ಹೇಳಿವರು. ಅವರನ್ನೂ ಕೂಡ ನಮ್ಮರ ಹಾಲಿಡೇಸ್‌ನಲ್ಲಿ ತೆಗೆದು ಹಾಕಿದರು.

4—00 P. M.

ಅಲ್ಲಿಗೆ ಇವರು ಬರುವುದರೊಳಗೆ 4 ಜನರು ಮಾತ್ರ ಇದ್ದರು. ಅದಕಾರಣ 4 ಜನ ಲೆಕ್ಚರರ್ಸ್ ಇದ್ದಾರೆಂದು ಬರೆದುಕೊಂಡು ಹೋದರು. ನಾವು ಅಕ್ವಿಟೆನ್ಸ್ ರೋಲನ್ನು ತೋರಿಸಿದೆವು ಮತ್ತು ಉಳಿದ ಜಾಗಗಳನ್ನು ಭರ್ತಿ ಮಾಡಲು ಅರ್ಜಿಗಳನ್ನು ಕಾಲ್‌ಫಾರ್ ಮಾಡಿದ್ದೇವೆಂದು ಹೇಳಿದರೂ ಸಹ ಅವರು ಅದೆಲ್ಲಾ ನಮಗೆ ಬೇಕಾಗಿಲ್ಲ ಎಂದು ಹೇಳಿ ನಾಲ್ಕು ಜನ ಇದ್ದಾರೆಂದು ಬರೆದುಕೊಂಡು ಹೋದರು' ಈ ಒಂದು ಅಟಿಟ್ಯೂಡ್ ಅವರಿಗೆ ಏತಕ್ಕೆ ಬಂತೋ ನನಗೆ ಗೊತ್ತಿಲ್ಲ. ಕಾಲೇಜು ಚೆನ್ನಾಗಿ ನಡೆಯಬೇಕು. ನಾರಮ್ಸ್‌ನ್ನು ಸ್ಯಾಟಿಸ್‌ಫೈ ಮಾಡಬೇಕು. ಕಂಡೀಷನ್ಸ್ ಸ್ಯಾಟಿಸ್‌ಫೈ ಮಾಡಬೇಕು. ಇಷ್ಟಾದರೆ ಸಾಕು ಎನ್ನುವ ಅಭಿಪ್ರಾಯ ಅವರಿಗಿದ್ದಂತೆ ನನಗೆ ಕಾಣುವುದಿಲ್ಲ. ಅವರ ಅಭಿಪ್ರಾಯದಲ್ಲಿ ಕಾಲೇಜು ಕಟ್ಟಡ ದೊಡ್ಡದಾಗಿ ರಬೇಕೆಂದರೆ ಅದು ಸಾಧ್ಯವಿಲ್ಲ. ಅದೇನೂ ಮೊಜಾಯಿಕ್ ಬಿಲ್ಡಿಂಗ್ ಅಲ್ಲ. ನಾವೂ ಸಹ ಕಾಲೇಜು ನಡೆಸಲು ಅವಕಾಶವಾಗುವಂತೆ ಕಲ್ಲು ಕಟ್ಟಡದ ಮೇಲೆ ಸುಟ್ಟ ಇಟ್ಟಿಗೆಗಳನ್ನು ಉಪಯೋಗಿಸಿ ಕಟ್ಟಡವನ್ನು ಕಟ್ಟಿಸಿದ್ದೇವೆ;ಪ್ರತಿ ರೂಮಿಗೂ ನಾಲ್ಕು ನಾಲ್ಕು ದೊಡ್ಡ ಕಿಟಕಿಗಳನ್ನು ಇಡಲಾಗಿದೆ. ಪ್ರತಿ ರೂಮೂ ಸಹ 20ಮತ್ತು 3 ಅಡಿ ಡೈಮೆನ್‌ಷನ್‌ಇವೆ.ಲೆಕ್ಚರ್‌ಹಾಲ್ 25 ಮತ್ತು 30ಅಡಿಷನ್‌ಡೈಮನ್ ಇದೆ. ಲೈಬ್ರರಿಹಾಲ್ 15 ಮತ್ತು 3 ಅಡಿ ಡೈಮನ್‌ಷನ್ ಇದೆ ಮತ್ತು ಅದು ಆರ್.ಸಿ.ಸಿ ಕಟ್ಟಡವಾಗಿದೆ. ಲ್ಯಾವೆಟ್ರಿ ಮತ್ತು ಯೂರಿನಲ್ ಲೇಡಿಸ್‌ಗೆ ಮತ್ತು ಜೆಂಟ್ಸ್‌ಗೆ ಪ್ರತ್ಯೇಕವಾಗಿದೆ ಇಷ್ಟೆಲ್ಲಾ ಅನುಕೂಲಗಳಿದ್ದರೂ ಸಹನಮ್ಮ ಕಂಡೀಷನ್ಸ್ ಸ್ಯಾಟಿಸ್‌ಫೈ ಆಗಿಲ್ಲವೆಂದುಅವರು ದೊಡ್ಡದಾಗಿ ಬರೆದರು. ಈ ಕಾರಣದಿಂದಲೇ ಆ ಕಾಲೇಜನ್ನು ಮುಚ್ಚಬೇಕೆಂದು ಹೇಳಿದರು. ಈ ಬಗ್ಗೆ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದು ಇಷ್ಟೇ. ನನ್ನನ್ನು ಕಾನ್‌ಫಿಡೆನ್ಸ್‌ಗೆ ತೆಗೆದುಕೊಳ್ಳಿ, ನಾನು ಹೇಳುವುದನ್ನು ನಂಬಿ. ಅಂದರೆ ಇಲ್ಲಿಯೇ ಕೂತು ಆರ್ಡರ್ ಮಾಡಿ

ಎಂದು ಹೇಳುವುದಿಲ್ಲ. ತಾವು ಬಂದು ನೋಡಿ, ಇಲ್ಲವೇ ಯಾರನ್ನಾದರೂ ಕಳುಹಿಸಿಕೊಡಿ ತಮ್ಮ ಕಂಡಿಷನ್‌ಗಳು ಸ್ಯಾಟಿಸ್‌ಫೈ ಆದರೆ ಕೊಡಿ. ನಾನು ಎಂ.ಎಲ್.ಎ. ಎಂದು ಕೊಡಬೇಡಿ. ಅಲ್ಲಿಯೇ ವಾಸ್ತವಾಂಶ ಏನಿದೆ ಎಂಬುದನ್ನು ನೋಡಿಕೊಂಡು ಕೊಡಿ. ಈ ಬಗ್ಗೆ ನಾನು ತಮ್ಮಲ್ಲಿ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

ಇನ್ನು ಚಿಕ್ಕಬಳ್ಳಾಪುರದಲ್ಲಿ ಮುನಿಸಿಪಲ್ ಕಾಲೇಜು ಎಂದು ಇದೆ. ಇದಕ್ಕೆ ಸರ್ಕಾರದವರು ಗ್ರಾಂಟ್ ಕೊಡುತ್ತಿದ್ದಾರೆ. ಮುನಿಸಿಪಾಲಿಟಿಯವರು ಪ್ರತಿವರ್ಷ 70 ಸಾವಿರ ರೂ.ಗಳನ್ನು ಕೊಡುತ್ತಿದ್ದಾರೆ. ಕೆಲವು ವರ್ಷಗಳಲ್ಲಿ ಒಂದು ಲಕ್ಷದ 20 ಸಾವಿರ, ಒಂದು ಲಕ್ಷದ 50 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆದರೆ 70 ಸಾವಿರ ರೂಪಾಯಿಗಳಿಗೆ ಕಡಿಮೆ ಇಲ್ಲದ್ದಂತೆ ಕೊಡುತ್ತಿದ್ದಾರೆ. ಇಷ್ಟಾದರೂ ಅಲ್ಲಿ ಕೆಲಸ ಮಾಡುವವರಿಗೆ 4 ತಿಂಗಳ ಸಂಬಳವಿಲ್ಲ, 2 ವರ್ಷಗಳ ಹಿಂದೆಯೂ ಸಹ 3 ತಿಂಗಳ ಸಂಬಳ ಕೊಟ್ಟಿರಲಿಲ್ಲ. ಆಗ ಸರ್ಕಾರದ ಹತ್ತಿರ 2 ಲಕ್ಷ ರೂಪಾಯಿಗಳನ್ನು ಸಾಲ ಪಡೆದುಕೊಂಡು ಅವರಿಗೆ ಸಂಬಳ ಕೊಡಲಾಯಿತು. ಈ ರೀತಿ ಪ್ರತಿ ವರ್ಷವೂ 3 ತಿಂಗಳು 4 ತಿಂಗಳು, 5 ತಿಂಗಳು ಸಂಬಳ ಕೊಡದೆ ನಿಲ್ಲಲು ಕಾರಣವೇನು ? ಬೇರೆ ಖಾಸಗೀ ಕಾಲೇಜುಗಳು ಯಾವ ರೀತಿ ನಡೆಯುತ್ತಿವೆ? ಈ ಬಗ್ಗೆ ನಾನು ಹಲವಾರು ಸಲ ಮಂತ್ರಿಗಳಿಗೆ ಹೇಳಿದ್ದೇನೆ. ಅರ್ಜಿಗಳನ್ನು ಕೊಟ್ಟಿದ್ದೇನೆ; ನಗರಾಡಳಿತ ಮಂತ್ರಿಗಳಿಗೂ ಸಹ ಹೇಳಿದ್ದೇನೆ. ಆದರೂ ಸಹ ಯಾರೂ ಇದರ ಕಡೆ ಗಮನ ಹರಿಸುತ್ತಿಲ್ಲ ಆ ಕಾಲೇಜನ್ನು ಪ್ರಾರಂಭ ಮಾಡಿದ್ದೇ ನಾನು. ಈಗ ಅದರ ಅಧ್ಯಕ್ಷರು ಬೇರೆಯವರಿದ್ದಾರೆ. ಮುನಿಸಿಪಾಲಿಟಿಯವರು ಪ್ರತಿ ವರ್ಷವೂ 70 ಸಾವಿರ ಕೊಡುತ್ತಿದ್ದಾರೆ. ಜೊತೆಗೆ ಪ್ರತಿವರ್ಷವೂ ಅಲ್ಲಿರತಕ್ಕಂಥ 1200 ಹುಡುಗರಿಂದ ಡೊನೇಷನ್ ತೆಗೆದುಕೊಳ್ಳಲಾಗುತ್ತಿದೆ, ಪ್ರತಿ ಹುಡುಗನಿಂದ 50 ರೂಪಾಯಿಗಳಂತೆ 60 ಸಾವಿರ ರೂಪಾಯಿಗಳನ್ನು ವಸೂಲಿ ಮಾಡಿದರೂ ಸಹ ನಾಲ್ಕೈದು ತಿಂಗಳ ಸಂಬಳ ನಿಲ್ಲಿಸಲು ಕಾರಣವೇನು? ಈ ಸಲ ಫೀ ವಸೂಲಿ ಮಾಡಿದ ಮೇಲೆ ಒಂದು ತಿಂಗಳ ಸಂಬಳ ಕೊಟ್ಟಿದ್ದಾರೆ. ಹೀಗೆ ಪ್ರತಿ ವರ್ಷವೂ 2—3 ಲಕ್ಷ ರೂಪಾಯಿ ಡಿಫಿಸಿಟ್ ಬಡ್ಜೆಟ್ ಆದರೆ ಆ ಕಾಲೇಜು ಯಾವ ರೀತಿ ನಡೆಯಬೇಕು? ಬೇರೆ ಖಾಸಗೀ ಕಾಲೇಜುಗಳು ಯಾವ ರೀತಿ ನಡೆಯುತ್ತಿವೆ! ಇದನ್ನಾದರೂ ತಾವು ಯೋಚನೆ ಮಾಡಬೇಕು. ಇಲ್ಲಿ ಮಾನ್ಯ ಪೌರಾಡಳಿತ ಮಂತ್ರಿಗಳೂ ಸಹ ಇದ್ದಾರೆ ಮಾನ್ಯ ವಿದ್ಯಾಮಂತ್ರಿಗಳೂ ಸಹ ಇದರ ಬಗ್ಗೆ ಏನಾಗಿದೆ ಎಂಬುದನ್ನು ನೋಡಬೇಕು. ನಾನು ಪ್ರಶ್ನೆ ಕಳುಹಿಸುತ್ತೇನೆ. ಸರ್ಕಾರದವರು ಉತ್ತರ ಕೊಡುತ್ತಾರೆ. ಆದರೆ ಏತಕ್ಕೆ ಹೀಗಾಗುತ್ತಿದೆ. ಇದನ್ನು ತನಿಖೆ ಮಾಡಿಸೋಣ ಎನ್ನತಕ್ಕಂತ ವಿಚಾರ ಯಾರಿಗೂ ಬಂದಿಲ್ಲ. ಇದಕ್ಕೆ ಮುಖ್ಯ ಕಾರಣ ಅಲ್ಲಿ ಎಕ್ಸಸ್ ಸ್ಟಾಫ್ ಇರುವುದರಿಂದ ಪ್ರತಿವರ್ಷವೂ 30 ರಿಂದ 40 ಸಾವಿರ ರೂಪಾಯಿಗಳವರೆಗೆ ಹೆಚ್ಚು ಖರ್ಚು ಬರುತ್ತಿದೆ. ಎರಡನೆಯದು ಇದಕ್ಕೆ ಸರ್ಕಾರದ ತಪ್ಪು ಧೋರಣೆ ಎಂದು ಕಾಣುತ್ತಿದೆ. ಹುಡುಗರಿಂದ ಕಲೆಕ್ಟ್ ಮಾಡತಕ್ಕಂಥ ಡೊನೇಷನ್ ಹಣವನ್ನು ಜಮಾ ಇಟ್ಟುಕೊಂಡು ಆಮೇಲೆ 80 ಪರ್ಸೆಂಟ್ ಗ್ರಾಂಟ್ ಎಂದು ಕೊಡುತ್ತಾರೆ. ಈ ಬಗ್ಗೆ ನಾನು ಪ್ರಶ್ನೆ ಕೇಳಿದಾಗ ಮಾನ್ಯ ಮಂತ್ರಿಗಳು ಅದನ್ನು ರೆಸಿಟ್ ಸೈಡ್‌ನಲ್ಲಿ ತೆಗೆದುಕೊಳ್ಳುವುದಿಲ್ಲವೆಂದು ಹೇಳಿದರು. ಆದರೆ ಅಧಿಕಾರಿಗಳು ಇದನ್ನು ಒಪ್ಪುವುದಿಲ್ಲ. ಗ್ರಾಂಟ್ ಇನ್—ಯೇಡ್ ಕೋಡ್‌ನಲ್ಲಿ ಹೇಳಿರುವಂತಹ ರೀತಿಯಲ್ಲಿ ಕೊಡಲಾಗುತ್ತದೆಂದು ಹೇಳುತ್ತಾರೆ. ಅದರಲ್ಲಿ ಆ ರೀತಿ ಹೇಳಿದ್ದರೆ ಅದನ್ನು ಬದಲಾವಣೆ ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ, ಇಲ್ಲದಿದ್ದರೆ 20 ರಿಂದ 30 ಪರ್ಸೆಂಟ್‌ವರೆಗೆ ಕೊರತಾ ಬರತಕ್ಕಂತ ಖರ್ಚನ್ನು ಯಾರು ಎಲ್ಲಿಂದ ಕೊಡಬೇಕು. ಇದರಿಂದ ಪ್ರತಿವರ್ಷವೂ 50 ರಿಂದ 60 ಸಾವಿರ ರೂಪಾಯಿಗಳವರೆಗೆ ನಷ್ಟವಾದರೆ ಯಾರು ಕೊಡಬೇಕು, ಇದಕ್ಕೆ ಸರ್ಕಾರವೇ ಕಾರಣವೆಂದು ಹೇಳುತ್ತೇನೆ. ಆ ಕಾಲೇಜು ಚೆನ್ನಾಗಿ ನಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕು.

ಇನ್ನು ಲೆಕ್ಚರರ್ಸ್‌ನ್ನು ರೀಡರ್ಸ್ ಆಗಿ ಪ್ರಮೋಷನ್ ಮಾಡಲು ಮತ್ತು ರೀಡರ್ಸ್‌ನ್ನು ಪ್ರೊಫೆಸರ್‌ರಾಗಿ ಪ್ರಮೋಷನ್ ಮಾಡಲು, ಅವರು ಒಂದೇ ಮೇನೇಜ್‌ಮೆಂಟ್‌ನಲ್ಲಿ ಕೆಲಸ ಮಾಡಿದ್ದರೆ ಅಂತಹವರ ಸರ್ವಿಸ್ ಕೌಂಟ್ ಆಗುತ್ತದೆ, ಆದರೆ ಡಿಫರೆಂಟ್ ಮೇನೇಜ್‌ಮೆಂಟಿನಲ್ಲಿದ್ದರೆ ಅವರ ಸರ್ವಿಸನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲವೆಂದು ಹೇಳಿದ್ದಾರೆ, ನಮ್ಮ ಕಾಲೇಜಿನಲ್ಲಿ ಪ್ರಮೋಷನ್ ಕಾಣಿಸಿರುವ ಬಗ್ಗೆ ಹೇಳಬೇಕೆಂದರೆ, ಲೆಕ್ಚರರ್ಸ್ ಆಗಿ 8 ವರ್ಷ ಕೆಲಸ ಮಾಡಿದ ಮೇಲೆ

ರೀಡರ್ಸ್ ಆಗಿ ಪ್ರಮೋಷನ್ ಕೊಡಬೇಕೆಂದಿದ್ದರೂ ಸಹ 6 ವರ್ಷಕ್ಕೇ ಕೊಟ್ಟಿದ್ದಾರೆ. ಅದೇ ರೀತಿ 3 ವರ್ಷ ಸರ್ವೀಸ್ ಆದ ರೀಡರ್ಸ್‌ಗೆ ಪ್ರೊಫೆಸರ್ ಆಗಿ ಪ್ರಮೋಷನ್ ಮಾಡಿದ್ದಾರೆ. ಇದನ್ನು ಯಾವ ರೀತಿ ಮಾಡಿದರು ಎಂಬುದು ನನಗೆ ಗೊತ್ತಿಲ್ಲ, ಈರೀತಿ ಯೂನಿವರ್ಸಿಟಿಯವರು ಮಾಡಿದರೋ ಅಥವಾ ಡಿ. ಸಿ. ಇ. ಅವರು ಮಾಡಿದರೋ ನನಗೆ ಗೊತ್ತಿಲ್ಲ, ಈ ಬಗ್ಗೆ ತಪ್ಪು ಕಲ್ಪನೆ ಬಂದಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಇದನ್ನು ವಿಚಾರ ಮಾಡಿ ತಮ್ಮ ಉತ್ತರದಲ್ಲಿ ಹೇಳಬೇಕು. ಬೇಕಾದರೆ ಈ ಬಗ್ಗೆ ಒಂದು ಅರ್ಜಿ ಕೊಡುತ್ತೇನೆ. ಇದರಲ್ಲಿ ಏನಾದರು ತಪ್ಪಿದ್ದರೆ ಸರಿ ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಎಂ. ರುದ್ರಪ್ಪ (ಸಕಲೇಶಪುರ)—ಸನ್ಮಾನ್ಯ ಸಭಾಧ್ಯಕ್ಷರೇ, ನಮ್ಮ ವಿದ್ಯಾಮಂತ್ರಿಗಳು ಇಟ್ಟಿರತಕ್ಕಂಥ ವಿದ್ಯಾ ಇಲಾಖೆಯ ಡಿಮಾಂಡ್ ನಂ: 20–22ರ ಬೇಡಿಕೆಗಳನ್ನು ವಿರೋಧಿಸಿ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದು ಬಹಳ ಪ್ರಾಮುಖ್ಯವಾದ ಇಲಾಖೆ; ಇದಕ್ಕೆ ಸರ್ಕಾರದವರು ಕೂಡ 113 ಕೋಟಿ ರೂಪಾಯಿ ಖರ್ಚುಮಾಡುತ್ತಿದ್ದಾರೆ. ಆದ ಮೇಲೆ ನಮ್ಮ ಸರ್ಕಾರದ ಬೊಕ್ಕಸಕ್ಕೆ ಕಮರ್ಷಿಯಲ್ ಟ್ಯಾಕ್ಸ್‌ನಿಂದ ಬರತಕ್ಕಂಥ ಆದಾಯವನ್ನೆಲ್ಲಾ ವಿದ್ಯಾ ಇಲಾಖೆಗೆ ಖರ್ಚುಮಾಡುತ್ತಿದ್ದೇವೆ ಆದ್ದರಿಂದ ಇದು ಪ್ರಾಮುಖ್ಯವಾದ ಇಲಾಖೆ ಜೊತೆಗೆ ಈ ಇಲಾಖೆಯಲ್ಲಿ ಕೆಲಸಮಾಡತಕ್ಕ ನೌಕರರು ಎಷ್ಟು ಜನರು ಇದ್ದಾರೆಂದರೆ ಇತರ ಎಲ್ಲಾ ಇಲಾಖೆಯನ್ನು ಸೇರಿಸಿಕೊಂಡರೆ ಅಷ್ಟಾಗುತ್ತಾರೆ ಸುಮಾರು ಒಂದೂವರೆ ಲಕ್ಷಜನ ನೌಕರರು ಕೆಲಸಮಾಡುತ್ತಿದ್ದಾರೆ. ಪ್ರೈಮರಿ ಸ್ಕೂಲ್‌ಗಳಲ್ಲಿ ಒಂದರಲ್ಲೇ ಒಂದು ಲಕ್ಷಕ್ಕೆ ಮೇಲ್ಪಟ್ಟು ಉಪಾಧ್ಯಾಯರು ಇದ್ದಾರೆ, 33 ಸಾವಿರಕ್ಕೂ ಹೆಚ್ಚು ಜನರು ಹೈಸ್ಕೂಲು ಉಪಾಧ್ಯಾಯರುಗಳು ಇದ್ದಾರೆ. ಇದು ಇಷ್ಟೊಂದು ಪ್ರಾಮುಖ್ಯತೆಯನ್ನು ಹೊಂದಿರುವುದರಿಂದ ನಮ್ಮ ವಿದ್ಯಾಇಲಾಖೆಯು ರಾಜ್ಯದ ಆಡಳಿತಕ್ಕೆ ಬುನಾದಿಯೆಂದು ತಿಳಿದಿದ್ದರೂ ಕೂಡ ಪ್ರಗತಿ ಮಾತ್ರ ಅಷ್ಟು ಚೆನ್ನಾಗಿ ಕಂಡುಬಂದಿಲ್ಲ. ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಮಾತನಾಡುತ್ತಾ ಹೇಳಿದರು, ಖಾಸಗಿ ಸಂಸ್ಥೆಗಳು ವ್ಯಾಪಾರಿ ಸಂಸ್ಥೆಗಳಾಗಿವೆ ಎಂದು ಜೊತೆಗೆ ಅವರಲ್ಲಿ ಕೆಲವು ಸಂಸ್ಥೆಗಳು ಉನ್ನತವಾದ ಶಿಕ್ಷಣವನ್ನು ಕೊಡುತ್ತಾ ಇವೆ. ಅದೇ ಸರ್ಕಾರಿ ಸ್ಕೂಲುಗಳಲ್ಲಿ ಕಾಲೇಜುಗಳಲ್ಲಿ ಉನ್ನತವಾದ ಶಿಕ್ಷಣ ದೊರೆಯುತ್ತಿಲ್ಲ. ಉದಾಹರಣೆಗೆ ನಮ್ಮ ಅಧಿಕಾರಿಗಳು. ಶಾಸಕರು ಮತ್ತು ಮಂತ್ರಿಗಳು ಅವರ ಮಕ್ಕಳನ್ನು ಕಾನ್‌ವೆಂಟಿಗೆ ಸೇರಿಸುತ್ತಿದ್ದಾರೆ. ಇದು ಏನನ್ನು ತೋರಿಸುತ್ತದೆ ಎಂದರೆ ಸರ್ಕಾರದ ಸ್ಕೂಲುಗಳ ಮತ್ತು ಕಾಲೇಜುಗಳ ಶಿಕ್ಷಣದ ಕೀಳು ಮಟ್ಟವನ್ನು ಎತ್ತಿ ತೋರಿಸುತ್ತದೆ. ಇನ್ನು ಪ್ರೈಮರಿ ಸ್ಕೂಲುಗಳು ಹಳ್ಳಿಗಾಡುಗಳಲ್ಲಿ ಸರಿಯಾಗಿ ಕಟ್ಟಡಗಳು ಇರುವುದಿಲ್ಲ. ಗ್ರಾಂಟ್ಸ್ ಮಾತ್ರ ಒಂದು ಕೊಠಡಿಗೆ ಎರಡೂವರೆ ಸಾವಿರದಿಂದ ನಾಲ್ಕುವರೆ ಸಾವಿರದವರೆಗೂ ಕೊಡುತ್ತಿದ್ದಾರೆ. ಕೊಠಡಿಗಳನ್ನು ಕಟ್ಟಿಸಲು ಸುಮಾರು 125 ಲಕ್ಷ ರೂಪಾಯಿ ಇಟ್ಟಿದ್ದೀರಿ? ನಮ್ಮ ವಿದ್ಯಾಸಚಿವರಾದ ಮಾನ್ಯ ಖಾರ್ಗೆಯವರು ಅದನ್ನು 250 ಲಕ್ಷಕ್ಕೆ ಏರಿಸಿದರೆ ಒಳ್ಳೆಯದು. ಇನ್ನು ಉಪಾಧ್ಯಾಯರುಗಳು ಹಳ್ಳಿಗಳಲ್ಲಿ ಸೇರಿಕೊಂಡು ಸರಿಯಾಗಿ ಅವರ ಕೆಲಸಕಾರ್ಯಗಳನ್ನು ಮಾಡುವುದಿಲ್ಲ. ಅವರು ಜಮೀನು ಇಟ್ಟು ಕೊಂಡಿರುತ್ತಾರೆ ಅವರದೇ ಆದ ಪ್ರಭಾವವನ್ನು ಉಪಯೋಗಿಸಿಕೊಂಡು ಸರಿಯಾಗಿ ಅವರ ಜವಾಬ್ದಾರಿಯನ್ನು ನಿರ್ವಹಿಸುವುದಿಲ್ಲ. ಆದ್ದರಿಂದ ಅವರನ್ನು 5 ವರ್ಷಕೊಮ್ಮೆಯಾದರೂ ವರ್ಗವನ್ನು ಮಾಡಿ ಬೇರೆಯವರಿಗೆ ಕೆಲಸ ಮಾಡಲು ಅವಕಾಶಮಾಡಬೇಕು. ಶಿಕ್ಷಣದ ಬಗ್ಗೆ ಹೆಚ್ಚಿನ ನಿಗಾವನ್ನು ಇಡುವುದಕ್ಕೆ ಪ್ರಯತ್ನಮಾಡಬೇಕು. ಇನ್ನು ಸಿಬ್ಬಂದಿ ವರ್ಗದವರು ಹೋದರೆ ಒಳ್ಳೆಯ ಶಿಕ್ಷಣವನ್ನು ಮತ್ತು ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನಮಾಡಬೇಕು ಇಷ್ಟೊಂದು ಹೇರಳವಾಗಿ ಹಣ ಖರ್ಚುಮಾಡುತ್ತಿದ್ದರೂ ಅದರಿಂದ ಜನರಿಗೆ ಪ್ರಯೋಜನವಾಗುವುದಿಲ್ಲವೆಂದರೆ ಹೇಗೆ? ಇನ್ನು ಎಕ್ವಿಪ್‌ಮೆಂಟ್ಸ್ ತೆಗೆದುಕೊಂಡರೆ ಸ್ಕೂಲಿಗೆ ಬೇಕಾದ ಕಟ್ಟಡಗಳು ಇರುವುದಿಲ್ಲ, ಅದರಲ್ಲೂ ಮಲೆನಾಡು ಭಾಗಗಳಲ್ಲಿ ಮಕ್ಕಳು ನೆಲದಲ್ಲಿ ಕೂತು ಅಭ್ಯಾಸ ಮಾಡಬೇಕು, ಜೊತೆಗೆ ಅಲ್ಲಿ ಭೂಮಿ ಜೋಗು ಆದ್ದರಿಂದ ಅನಾರೋಗ್ಯವಾಗುತ್ತದೆ. ಖಾಸಗಿ ಶಾಲೆಗಳು ಕೂಡ ಒಳ್ಳೆಯ ಕಟ್ಟಡಗಳು ಇರುವುದಿಲ್ಲ. ಗ್ರಾಂಟನ್ನು ಮಾತ್ರ ತೆಗೆದುಕೊಳ್ಳುತ್ತಿದ್ದಾರೆ. ಅವರು ಪ್ರೈವೇಟ್ ಮನೆಗಳಲ್ಲಿ ಸ್ಕೂಲುಗಳನ್ನು ನಡೆಸುತ್ತಿದ್ದಾರೆ ಕೆಲವು ಸ್ಕೂಲು

ಗಳಲ್ಲಿ ವ್ಯಾಪಾರಿ ಮನೋಭಾವ ಇರುವುದರಿಂದ ಅವರ ಮೇಲೆ ಕಟ್ಟುನಿಟ್ಟಿನ ಶಿಕ್ಷೆಗೆ ಒಳಪಡಿಸಬೇಕು ಇನ್ನು ಷೆಡ್ಯೂಲ್ಡ್ ಕ್ಯಾಸ್ಟ್ ವಿದ್ಯಾರ್ಥಿಗಳಿಗೆ ಅಟೆಂಡೆನ್ಸ್ ಸ್ಕಾಲರ್‌ಷಿಪ್ ಕೊಡುತ್ತಿದ್ದೀರಿ? ಇನ್ನು ಕೆಲವು ಕಡೆ ನೀವು ಕೊಡುವ ಯೂನಿಫಾರಮ್ಸ್ ಸರಿಯಾಗಿರುವುದಿಲ್ಲ. ಇನ್ನು ಸ್ಟೈಪೆಂಡರಿ ಒದಗಿಸುತ್ತಿದ್ದೀರಿ ಅದು ಏನೇನೂ ಸಾಲದು ಆದ್ದರಿಂದ ಹಣವನ್ನು ನಗದು ರೂಪದಲ್ಲಿ ಕೊಟ್ಟರೆ ಹೆಚ್ಚಿನ ಅನುಕೂಲವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಇನ್ನು ಮಿಡ್ ಡೇ ಮೀಲ್ ಏನು ಕೊಡುತ್ತಿದ್ದೀರಿ ಅದಕ್ಕೆ ಆಹಾರ ತಯಾರು ಮಾಡುವುದಕ್ಕೆ ಅಡಿಗೆ ಮನೆ ಇರುವುದಿಲ್ಲ ಅದಕ್ಕೆ ಹೆಚ್ಚಿನ ವ್ಯವಸ್ಥೆ ಮಾಡಿದರೆ ಅನುಕೂಲವಾಗುತ್ತದೆ. ಎಷ್ಟೋ ರೀತಿಯಿಂದ ಸರ್ಕಾರದ ಹಣ ಖರ್ಚಾಗುತ್ತಿದೆ ಆದರೆ ಅದರ ಸೌಲಭ್ಯ ಸರಿಯಾದ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ಮುಟ್ಟುತ್ತಿಲ್ಲ. ನಮ್ಮ ರಾಜ್ಯದಲ್ಲಿ ಸುಮಾರು 2364 ಹೈಸ್ಕೂಲುಗಳು ಇವೆ. ಅದರಲ್ಲಿ ಕೆಲವು ಭಾಗಗಳಲ್ಲಿ ಜಾಸ್ತಿಯಾಗಿವೆ ಮತ್ತೆ ಕೆಲವು ಕಡೆಗಳಲ್ಲಿ ಕಡಿಮೆ ಇವೆ ಆದ್ದರಿಂದ ಎಲ್ಲೆಲ್ಲಿ ಅವಶ್ಯಕತೆ ಇದೆ ಅಲ್ಲಿ ಹೈಸ್ಕೂಲುಗಳನ್ನು ಮಾಡಬೇಕು. ಸರ್ಕಾರಿ ಹೈಸ್ಕೂಲುಗಳನ್ನು ಕೊಡುವಾಗ ಕೇವಲ ಶಿಫಾರಸ್ಸುಗಳ ಮೇಲೆ ಮಾಡಬಾರದು ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಮಾಡಬೇಕು, ಆದರೆ ಅವಶ್ಯಕತೆ ಇರುವ ಕಡೆ ಮಾಡುತ್ತಿಲ್ಲ ಉದಾಹರಣೆಗೆ ನಮ್ಮ ಹಾಸನ ಜಿಲ್ಲೆಯಲ್ಲಿ ಕೇವಲ 88 ಹೈಸ್ಕೂಲುಗಳು ಮಾತ್ರ ಇವೆ ಅದರಲ್ಲೂ ನಮ್ಮ ಆಲೂರು ತಾಲ್ಲೂಕಿನಲ್ಲಿ ಎರಡು ಹೈಸ್ಕೂಲುಗಳು ಇವೆ. 2—3 ವರ್ಷಗಳಿಂದ ಕೇಳುತ್ತಿದ್ದರೂ ಕೆಂಚಮ್ಮನ ಹೊಸಕೋಟೆಗೆ ಕೊಟ್ಟಿಲ್ಲ. ಎಲ್ಲಿ ಡಿಮಾಂಡ್ ಇದೆ ಅಲ್ಲಿ ವಿಚಾರ ಮಾಡಿ ನೋಡಿ ಕೊಡಬೇಕು. ಯಾರೋ ಒತ್ತಾಯ ಮಾಡುತ್ತಾರೆಂದು ದಾಕ್ಷಿಣ್ಯಕ್ಕೆ ಕೊಡುವುದು ಸರಿಯಲ್ಲ. ಆದ್ದರಿಂದ ಮಲೆನಾಡು ತಾಲ್ಲೋಕುಗಳಲ್ಲಿ ಬಹಳ ಕಡಿಮೆ ಇರುವುದರಿಂದ ಅದಷ್ಟು ಹೈಸ್ಕೂಲುಗಳನ್ನು ಕೊಡಬೇಕೆಂದು ಈ ಸಮಯದಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಇನ್ನು ಖಾಸಗಿ ಹೈಸ್ಕೂಲುಗಳಲ್ಲಿ ಏನು ಅಕ್ರಮಗಳು ಇವೆ ಅವನ್ನು ಸರಿಪಡಿಸಬೇಕೆಂದು ಹೇಳುತ್ತೇನೆ. ಇನ್ನು ಸರ್ಕಾರಿ ಹೈಸ್ಕೂಲುಗಳಲ್ಲಿ ಪರೀಕ್ಷೆಗಳ ಫಲತಾಂಶ ಬಹಳ ಕಡಿಮೆ ಇದೆ ಆದ್ದರಿಂದ ಸೇಕಡ 2ರಿಂದ 4 ಕೂಡ ಬರುತ್ತಿಲ್ಲ. ಅದೇ ಪಟ್ಟಣಗಳಲ್ಲಿ ಇಯತಕ್ಕಂಥ ಸ್ಕೂಲುಗಳಲ್ಲಿ ಮೆರಿಟ್‌ನಲ್ಲಿ ಬರುತ್ತಾರೆ. ಈ ರೀತಿ ಹಳ್ಳಿಗಾಡಿನಲ್ಲಿ ಕಡಿಮೆ ಫಲತಾಂಶಗಳು ಬರುವುದರಿಂದ ಅವರು ಟೆಕ್ನಿಕಲ್ ಕಾಲೇಜುಗಳಲ್ಲಿ ಸೇರುವವರಿಗೆ ತೊಂದರೆಯಾಗುತ್ತದೆ, ಹಳ್ಳಿಗಾಡಿನವರಿಗೆ, ಅದೇ ಪಟ್ಟಣವಾಸಿಗಳಿಗೆ ಅನುಕೂಲವಾಗುತ್ತದೆ ಇನ್ನು ಮುಖ್ಯವಾಗಿ ಹೈಸ್ಕೂಲುಗಳಲ್ಲಿ ಏನಾಗಿದೆಯೆಂದರೆ ಹುಡುಗರು ಉಪಾಧ್ಯಾಯರ ಹತ್ತಿರ ಪ್ರೈವೇಟ್ ಪಾಠಕ್ಕೆ ಹೋದರೆ ಹೆಚ್ಚಿನ ಅಂಕಗಳನ್ನು ಕೊಟ್ಟು ಕ್ಲಾಸ್ ಪರೀಕ್ಷೆಯಲ್ಲಿ ಪಾಸ್ ಮಾಡಿಸುತ್ತಾರೆ ಇಲ್ಲದೆ ಹೋದರೆ ಅದೇ ಕ್ಲಾಸುಗಳಲ್ಲಿ ಕೂಡಿಸುತ್ತಾರೆ. ಆದ್ದರಿಂದ ಅಕ್ರಮಗಳನ್ನು ಅಂದರೆ ಪ್ರೈವೇಟ್ ಟ್ಯೂಷನ್ ತಡೆಯಬೇಕೆಂದು ಪ್ರಾರ್ಥನೆ ಮಾಡುತ್ತೇನೆ ಇದೇ ನಮ್ಮ ಜ್ಯೂನಿಯರ್ ಕಾಲೇಜಿನಲ್ಲಿ ಅಕ್ರಮ ನಡೆದಿದೆ ಅದನ್ನು ಸರಿಯಾಗಿ ವಿಚಾರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಕೆಲವು ಉಪಾಧ್ಯಾಯರು 12—15 ವರ್ಷಗಳು ಒಂದೇ ಕಡೆ ಇರುತ್ತಾರೆ ಆದ್ದರಿಂದ ವಿದ್ಯಾರ್ಥಿಗಳನ್ನು ಸರಿಯಾದ ರೀತಿಯಲ್ಲಿ ತರಬೇತು ಮಾಡುವುದಿಲ್ಲ. ಇಂತಹ ಉಪಾಧ್ಯಾಯರ ಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳಬೇಕು. ಇನ್ನೊಂದು ಏನು ಮಾಡಿದ್ದೀರಿ ಎಂದರೆ ಪಿಯುಸಿ ಬೋರ್ಡನ್ನು ರದ್ದುಪಡಿಸಬೇಕೆಂದು ಮತ್ತು ರಾಜ್ಯದ ಹೈಸ್ಕೂಲುಗಳಲ್ಲಿ ಒಂದು ಉನ್ನತಮಟ್ಟದ ಶಿಕ್ಷಣ ಕೊಡುವುದಕ್ಕೆ ಅದಕ್ಕೆ ವಹಿಸಬೇಕೆಂದು ಅದಕ್ಕೆ ವಹಿಸಿದರೆ ಒಳ್ಳೆಯ ವಿದ್ಯಾಭ್ಯಾಸ ಸಿಕ್ಕುತ್ತದೆಂದು ನಿರೀಕ್ಷಣೆ ಮಾಡಿದ್ದೀರಿ ಅದು ಪ್ರಯೋಜನವಾಗುವುದಿಲ್ಲ. ಇದನ್ನು ಸರ್ಕಾರದವರು ಪುನಃ ಪರಿಶೀಲನೆ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇಲ್ಲದೆ ಹೋದರೆ ಉದ್ದೇಶ ಏನು ಇಟ್ಟುಕೊಂಡು ಮಾಡಿದ್ದೀರಿ ಅದು ಸಾಧನೆಯಾಗುವುದಿಲ್ಲ, ಹಿಂದೆ ಕೆಲವು ಪ್ರಶ್ನೆ ಪತ್ರಿಕೆಗಳು ಹೊರಗೆಡಹಿದ್ದಾರೆ ಆ ಬೋರ್ಡನ್ನು ರದು ಮಾಡುವುದು ಸರಿಯಲ್ಲವೆಂದು ಪಿ ಯು ಸಿ ಬೋರ್ಡನ್ನು ರೆಸ್ಟೋರ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲದೆ ಹೋದರೆ ಪ್ರಯೋಜನವಾಗುವುದಿಲ್ಲ. ಇನ್ನು ಬಿಎಡ್ ಕಾಲೇಜಿನಲ್ಲಿ ಕ್ಯಾಪಾಸಿಟಿ ಮತ್ತು ಎಕ್ವಿಪ್‌ಮೆಂಟ್ ಇಷ್ಟು ಇರಬೇಕೆಂದು ಅದಕ್ಕೆ ಒಂದು ಕಮಿಟಿ ಮಾಡಿದ್ದೀರಿ ನನಗೆ ಗೊತ್ತಿರುವ ಹಾಗೆ ಅದು ಯಾವ ರೀತಿಯಿಂದಲೂ ಸಮರ್ಪಕವಾಗಿಲ್ಲ. ಅದರಲ್ಲಿ ಏನು ಲೋಪದೋಷಗಳು ನಡೆದಿವೆ ಅವುಗಳನ್ನು ಒಂದು ಪ್ರೋಬ್ ನಡೆಸಿ ಸರಿಪಡಿಸಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ. ಯಾವುದಕ್ಕೆ ಆದರೂ ಒಂದು ಯೂನಿಫಾರಂ ಪಾಲಿಸಿ ಇರಬೇಕು ತಾರತಮ್ಯ ಮಾಡುವುದು ಸರಿಯಲ್ಲ. ನನಗೆ ಗೊತ್ತಿರುವ ಹಾಗೆ ತುಮಕೂರಿನಲ್ಲಿ 3 ಬಿ. ಎಡ್ ಕಾಲೇಜು ಮತ್ತು

ಮೈಸೂರಿಗೆ 5 ಕಾಲೇಜು ಕೊಟ್ಟಿದ್ದೀರಿ ಆದರೆ ಅದೇ ನಮ್ಮ ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗೆ ಒಂದನ್ನು ಕೊಟ್ಟಿದ್ದೀರಿ? ಮತ್ತು ಈಗ ಹಾಸನದಲ್ಲಿ ಶಿಕ್ಷಣ ಸಂಸ್ಥೆಯವರು ನಡೆಸುತ್ತಿರುವ ಬಿ ಎಡ್. ಕಾಲೇಜನ್ನು ವಿನಾಕಾರಣ ವಜಾ ಮಾಡಿದ್ದೀರಿ. ರಿಕ್ವೈರ್‌ಮೆಂಟ್ ಇದ್ದರೆ ಅದಕ್ಕೆ ನೀವು ಮಂಜೂರಾತಿ ಕೊಡುವುದು ಒಳ್ಳೆಯದು. ಇದನ್ನು ದಯಮಾಡಿ ಪರಿಶೀಲನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ ಅದು ಹೈಕೋರ್ಟಿನಲ್ಲಿ ಇರುವುದರಿಂದ ಅದರ ಬಗ್ಗೆ ಹೆಚ್ಚು ಹೇಳಬಯಸುವುದಿಲ್ಲ. ಇನ್ನು ಪ್ರೊಫೆಸರ್‌ಗಳ ನೇಮಕದ ಬಗ್ಗೆ ಹೇಳುವುದಾದರೆ ನಮ್ಮ ಹಾಸನ ಕಾಲೇಜಿನಲ್ಲಿ ಸುಮಾರು 3-4 ಸಾವಿರ ವಿದ್ಯಾರ್ಥಿಗಳು ಇದ್ದಾರೆ.

ಅದಕ್ಕೆ ಕಟ್ಟಡ ಇಲ್ಲ ಎಂದು ಹೇಳಿದ್ದರಿಂದ ಹೋದ ಸಾರಿ ಮುಖ್ಯ ಮಂತ್ರಿಗಳು ಕಟ್ಟಡದ ಗ್ರಾಂಟನ್ನು ಕೊಟ್ಟರು. ಆದರೂ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್‌ನ ವಿಳಂಬದಿಂದ ಆ ಕೆಲಸವಾಗಿಲ್ಲ ಅಲ್ಲಿ ಒಬ್ಬರೇ ಪ್ರೊಫೆಸರ್ ಇದ್ದಾರೆ. ಇಂತಹ ದೊಡ್ಡ ಕಾಲೇಜಿಗೆ 3,4 ಜನ ಪ್ರೊಫೆಸರ್‌ಸ ಇರಬೇಕು. ಆದುದರಿಂದ ವಿದ್ಯಾ ಇಲಾಖೆಯವರು, ಯೂನಿವರ್ಸಿಟಿಯವರು ಎಲ್ಲೆಲ್ಲಿ ಪ್ರೊಫೆಸರ್ ಜಾಗಗಳು ಖಾಲಿ ಇವೆಯೋ ಅಲ್ಲಿ ಭರ್ತಿಮಾಡಿ ಒಳ್ಳೆಯ ಸ್ಟ್ಯಾಫನ್ನು ಹಾಕದೇಹೋದರೆ ಪ್ರಯೋಜನವಾಗುವುದಿಲ್ಲ ಎಂದು ಈ ಸಮಯದಲ್ಲಿ ಶಿಕೆಮಾಡಿಕೊಳ್ಳುತ್ತೇನೆ.

ಇನ್ನು ಒಂದೇ ಒಂದು ವಿಷಯವನ್ನು ಪ್ರಸ್ತಾಪಮಾಡಿ ನನ್ನ ಮಾತನ್ನು ಮುಗಿಸುತ್ತೇನೆ. ಈಗ ಉತ್ತರ ಕರ್ನಾಟಕಕ್ಕೆ ಒಂದು ಯೂನಿವರ್ಸಿಟಿ ಇದೆ. ಗುಲ್ಬರ್ಗಕ್ಕೆ ಒಂದು ಯೂನಿವರ್ಸಿಟಿ ಬೇಕು ಎಂದು ಮೊದಲಿನಿಂದಲೂ ಕೇಳುತ್ತಾ ಇದ್ದಾರೆ. ಉತ್ತರ ಕರ್ನಾಟಕದ ಯೂನಿವರ್ಸಿಟಿ ಬಹಳ ದೊಡ್ಡದು. ಆದುದರಿಂದ ಗುಲ್ಬರ್ಗಾಕ್ಕೆ ಒಂದು ಯೂನಿವರ್ಸಿಟಿಯನ್ನು ಮತ್ತು ಮಲೆನಾಡು ಪ್ರಾಂತ್ಯಕ್ಕೆ ಒಂದು ಯೂನಿವರ್ಸಿಟಿಯನ್ನು ಸ್ಥಾಪನೆ ಮಾಡುವುದು ಬಹಳ ಒಳ್ಳೆಯದು ಎಂದು ಮಾನ್ಯ ಮುಖ್ಯ ಸಾಹೇಬರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಹೆಲ್ತ್ ಸೈನ್ಸ್ ಯೂನಿವರ್ಸಿಟಿ ಈ ಡಿಮ್ಯಾಂಡ್ ವ್ಯಾಪ್ತಿಗೆ ಬರದೇ ಹೋದರೂ ಯೂನಿವರ್ಸಿಟಿಗೆ ಸಂಬಂಧಪಟ್ಟಿದ್ದರಿಂದ ಅದರ ಬಗ್ಗೆ ಹೇಳಬೇಕಾಗಿದೆ. ಹೆಲ್ತ್ ಸೈನ್ಸ್ ಯೂನಿವರ್ಸಿಟಿ ಆಗಬೇಕು ಎಂದು ಯುನಾನಿಮಸ್ ಆಗಿ ನಾವು ವಿಧಾನ ಸಭೆಯಲ್ಲಿ ಒಪ್ಪಿಗೆ ಕೊಟ್ಟಿದ್ದೇವೆ, ಅದು ಲೆಜಿಸ್ಲೇಟೀವ್ ಕೌನ್ಸಿಲ್ ಮುಂದೆ ಇದೆ. ಆದುದರಿಂದ ಸರ್ಕಾರದವರು ಹೆಲ್ತ್ ಸೈನ್ಸ್ ಯೂನಿವರ್ಸಿಟಿಯನ್ನು ಸ್ಥಾಪನೆ ಮಾಡುವುದರಿಂದ ಕರ್ನಾಟಕ ಒಂದು ಕೀರ್ತಿಯನ್ನು ಪಡೆದುಕೊಳ್ಳುತ್ತದೆ. ಇಂತಹ ಒಂದು ಸದವಕಾಶವನ್ನು ಬಿಟ್ಟುಕೊಡಬಾರದು ಎಂದು ಹೇಳಿ, ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ವಿ. ನಾಯಕ್ (ಕುಮಟ).—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಶಿಕ್ಷಣ ಸಚಿವರು ಮಂಡಿಸಿದಂಥ ಶಿಕ್ಷಣ ಇಲಾಖೆಯ ಬೇಡಿಕೆಯನ್ನು ಬೆಂಬಲಿಸುತ್ತಾ, ಈ ಬೇಡಿಕೆಯನ್ನು ಕುರಿತು ಮಾತನಾಡುವುದಕ್ಕೆ ಇಚ್ಛೆಪಡುತ್ತಾ ಇದ್ದೇನೆ. ಈ ದೇಶದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಅಂದರೆ ಸ್ವಾತಂತ್ರ್ಯ ಹೋರಾಟ ನಡೆದಂಥ ಸಂದರ್ಭದಲ್ಲಿ ಒಂದು ಕಲ್ಪನೆ ಇತ್ತು. ಈ ದೇಶದಲ್ಲಿ ಸ್ವಾತಂತ್ರ್ಯ ಬರುತ್ತದೆ., ಇಲ್ಲಿ ರಾಷ್ಟ್ರೀಯ ಶಿಕ್ಷಣ ಒಂದು ರೂಪುಗೊಳ್ಳುತ್ತದೆ. ಆ ಮೂಲಕ ಜನಸಾಮಾನ್ಯರ ಸಾಮಾಜಿಕ ಮತ್ತು ಆರ್ಥಿಕ ಕ್ಷೇಮಾಭಿವೃದ್ಧಿಯಾಗುತ್ತದೆ ಎನ್ನುವ ಒಂದು ಕಲ್ಪನೆ ಇತ್ತು. ಸ್ವಾತಂತ್ರ್ಯೋತ್ತರದಲ್ಲಿ ಹಲವಾರು ಕಮಿಷನ್ನುಗಳನ್ನು ನಮ್ಮ ಸರ್ಕಾರದವರು ನೇಮಿಸಿದರು. ಅದರಲ್ಲಿ ಮುಖ್ಯವಾದುದು, ರಾಧಾಕೃಷ್ಣನ್ ಕಮಿಷನ್, ಅದೇ ರೀತಿಯಲ್ಲಿ ಮೊದಲಿಯಾರ್ ಕಮಿಷನ್, ಕೊಠಾರಿ ಕಮಿಷನ್ ಮುಂತಾದ ಕಮಿಷನ್‌ಗಳನ್ನು ನೇಮಿಸಿದರು ಮತ್ತು ಹಲವಾರು ಸಭೆಸಮ್ಮೇಳನಗಳು ಈ ರಾಷ್ಟ್ರದಲ್ಲಿ ಜರುಗಿದುವು. ಈ ದೇಶದಲ್ಲಿ ಶಿಕ್ಷಣವನ್ನು ಕುರಿತು ಚರ್ಚೆ ನಡೆದಷ್ಟು ಇನ್ಯಾವ ದೇಶದಲ್ಲೂ ನಡೆದಿರಲಿಕ್ಕಿಲ್ಲ. ಆದರೆ ಪರಿಣಾಮ ಮಾತ್ರ ಅತ್ಯಂತ ಗಂಭೀರವಾದಂಥಾದ್ದು ನಾವು ತಿಳಿದುಕೊಳ್ಳತಕ್ಕಂಥ ಸೂಚನಾ ಸ್ಥಿತಿ ಕಳೆದ 6 ತಿಂಗಳಲ್ಲಿ ದಿಲ್ಲಿಯಲ್ಲಿ ಇಂತಹ ಒಂದು ಸಮ್ಮೇಳನ ನಡೆಯಿತು. ಅಲ್ಲಿ ಶಿಕ್ಷಣ ರಾಷ್ಟ್ರೀಕರಣ ಆಗಬೇಕು ಎನ್ನುವ ವಾದ ಮಂಡಿಸಲ್ಪಟ್ಟು ಏನೂ ಪ್ರಯೋಜನವಾಗದೇ ಇದ್ದಂಥ ಸ್ಥಿತಿಯನ್ನು ನಾವು ನೋಡುತ್ತಾ ಇದ್ದೇವೆ. ನಾವು ಶಿಕ್ಷಣದ ವಿಷಯವನ್ನು ಕುರಿತು ವಿಚಾರ ಮಾಡಿದಾಗ ಮುಂದಿನ ಪ್ರಜೆಗಳನ್ನು ರೂಪಿಸುವಂಥ ಈ ಒಂದು ಶಿಕ್ಷಣಕ್ಕೆ ಎಷ್ಟು ಮಹತ್ವ ಕೊಡಬೇಕೋ ಅಷ್ಟು ಮಹತ್ವವನ್ನು ಕೊಡುತ್ತಾ ಇಲ್ಲವೇನೋ ಎನ್ನುವ ಕಲ್ಪನೆ ಬರುತ್ತಾ ಇದೆ. ಮಕ್ಕಳು ಎಂದರೆ ಜಡವಸ್ತು

ಗಳು ಎಂದು ತಿಳಿದುಕೊಂಡರೆ ಅದು ತಪ್ಪಾಗುತ್ತದೆ ಎಂದು ನಾನು ಭಾವಿಸುತ್ತೇನೆ. ಆದರೂ ಕೂಡ ಪ್ರಯೋಗಗಳು ಅದೇ ರೀತಿ ನಡೆದೇ ಇವೆ ಇವತ್ತಿನ ಶಿಕ್ಷಣ ಪದ್ಧತಿ ಏನಿದೆ ಅದು, ಹಿಂದೆ ಮೆಕಾಲೆ ಶಿಕ್ಷಣ ಪದ್ಧತಿ ಏನಿತ್ತು ಆ ಪದ್ಧತಿಯನ್ನು ಬಿಟ್ಟು ಹೊರಗೆ ಬರಲೇ ಇಲ್ಲ ಆರ್ಥಿಕ ಮತ್ತು ಸಾಮಾಜಿಕ ರಂಗದಲ್ಲಿ ಕೊಳ್ಳೆ ಹೊಡೆದಂತೆ ಶಿಕ್ಷಣ ರಂಗದಲ್ಲೂ ಸ್ವಾತಂತ್ರ್ಯೋತ್ತರ 30 ವರ್ಷಗಳಲ್ಲಿ ಕೆಲವು ವಿಶಿಷ್ಟ ಹಿತಾಸಕ್ತಿಯುಳ್ಳಂಥ ವರ್ಗ ಕೊಳ್ಳೆ ಹೊಡೆದಿದ್ದಾರೆ ಎನ್ನುವ ಸಂಶಯ ಬರುತ್ತಾ ಇದೆ ಸ್ವಾತಂತ್ರ್ಯ ಪೂರ್ವದಲ್ಲಿ ಇದ್ದಂಥ ನಾಮ ಫಲಕಗಳು, ಸ್ವಾತಂತ್ರ್ಯೋತ್ತರದಲ್ಲಿ ಬದಲಾಗಿ ಸರ್ಕಾರದಿಂದ ಸೌಲಭ್ಯಗಳು ಯಾವು ಯಾವುದಿತ್ತೋ ಅದನ್ನು ತೆಗೆದುಕೊಂಡಿರತಕ್ಕಂಥದ್ದನ್ನು ನಾವು ನೋಡುತ್ತಾ ಇದ್ದೇವೆ. ನಾನು ಅದನ್ನು ಹೆಸರಿಟ್ಟು ಹೇಳಿದರೆ ಗೊಂದಲವಾಗುವಂಥ ಸಂದರ್ಭ ಇದೆ, ಆದುದರಿಂದ ಹೆಸರನ್ನು ಹೇಳುವುದಕ್ಕೆ ಬಯಸುವುದಿಲ್ಲ. ನಾನು ಮಾನ್ಯ ವಿಶ್ವವಿದ್ಯಾನಿಲಯ ಶಿಕ್ಷಣ ಸಚಿವರ ಗಮನಕ್ಕೆ ಒಂದು ವಿಷಯವನ್ನು ತರುವುದಕ್ಕೆ ಬಯಸುತ್ತೇನೆ ನಾವು ಪ್ರಜಾಪ್ರಭುತ್ವವಾದಿಗಳು. ಸಾಮಾಜಿಕ ನ್ಯಾಯ ಈ ದೇಶದಲ್ಲಿ ಎಲ್ಲರಿಗೂ ಒದಗಿಸಿಕೊಡಬೇಕು ಎಂದು ಸತತವಾಗಿ ಹೋರಾಟ ಮಾಡಿದಂತಹವರು. ಕೆಲವು ಶಿಕ್ಷಣ ಸಂಸ್ಥೆಗಳ ಪೂರ್ವಾಪರಗಳನ್ನು ವಿಚಾರ ಮಾಡಿದರೆ, ಹಿರಿಯರು ನದೀ ಮೂಲ, ಋಷಿ ಮೂಲ, ಸ್ತ್ರೀಮೂಲ ನೋಡಬಾರದು ಎಂದು ಏನು ಹೇಳುತ್ತಾರೋ ಅದೇ ರೀತಿ ಕೆಲವು ಶಿಕ್ಷಣ ಸಂಸ್ಥೆಗಳ ಮೂಲವನ್ನು ನೋಡಬಾರದು ಎಂದು ಹೇಳುವಂಥ ಕಲ್ಪನೆ ನಮ್ಮಲ್ಲಿ ಕೆಲವರಿಗೆ ಇದ್ದಹಾಗೆ ಕಾಣಿಸುತ್ತದೆ ಕೆಲವು ದಿವಸಗಳಿಂದ ಈ ಸದನದಲ್ಲಿ ಮೆಡಿಕಲ್ ಕಾಲೇಜುಗಳ ಮತ್ತು ಇಂಜನಿಯರಿಂಗ್ ಕಾಲೇಜುಗಳ ಬಗ್ಗೆ ಚರ್ಚೆ ನಡೆದಿದೆ. ನಾನು ನೇರವಾಗಿ ಹೇಳುವುದಾದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಣಿಪಾಲ್‌ನಲ್ಲಿ ಕಸ್ತೂರಿಬಾ ಮೆಡಿಕಲ್ ಕಾಲೇಜು, ಜವಹರಲಾಲ್ ನೆಹರೂ ಮೆಡಿಕಲ್ ಕಾಲೇಜು, ಬೆಳಗಾಂ ದಾವಣಗೆರೆ ಮೆಡಿಕಲ್ ಕಾಲೇಜು, ಗುಲ್ಬರ್ಗ ಮೆಡಿಕಲ್ ಕಾಲೇಜು ಇನ್ನೂ ಇತರ ಕೆಲವು ಸಂಘಸಂಸ್ಥೆಗಳ ವಿಚಾರವನ್ನು ನಾವು ತೆಗೆದುಕೊಳ್ಳುವುದಾದರೆ, ಭೌತಿಕವಾಗಿ, ಮಾನಸಿಕವಾಗಿ, ತಾತ್ವಿಕವಾಗಿ ಮತ್ತು ಭಾವನಾತ್ಮಕವಾಗಿ ವ್ಯಕ್ತಿ ಬೆಳೆಯಬೇಕು ಎಂದು ನಾವು ಹೇಳುತ್ತೇವೆ ಈ ಒಂದು ಶಿಕ್ಷಣದ ಮೂಲ ತತ್ವಕ್ಕೆ, ಸಿದ್ಧಾಂತಕ್ಕೆ ಕುಠಾರಪ್ರಾಯವಾದಂಥ ಸಂಸ್ಥೆಗಳು ನಾಯಿಕೊಡೆಗಳಂತೆ ಸ್ವಾತಂತ್ರ್ಯೋತ್ತರದಲ್ಲಿ ತಲೆ ಎತ್ತಿವೆ ಎಂದು ಹೇಳುವುದಕ್ಕೆ ಬಹಳ ವಿಷಾದವಾಗುತ್ತಾ ಇದೆ, ಇಲ್ಲಿ ಏನು ವ್ಯವಹಾರ ನಡೆಯುತ್ತಾ ಇದೆ ಎಂದು ನೋಡುವುದಾದರೆ, ನನ್ನ ದೃಷ್ಟಿಯಲ್ಲಿ ಹೇಳುವುದಾದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಬ್ಯಾಂಕ್ಸ್ ಏನಿವೆ, ಅದು ಕೆನರಾಬ್ಯಾಂಕ್ ಇರಬಹುದು, ಸಿಂಡಿಕೇಟ್ ಬ್ಯಾಂಕ್ ಇರಬಹುದು. ಅವರಿಗೆ ಡಿಪಾಸಿಟ್ ಕಡಿಮೆ ಇದ್ದಂಥ ಕಾಲದಲ್ಲಿ ಈ ಮೆಡಿಕಲ್ ಕಾಲೇಜು ಹುಟ್ಟಿಕೊಳ್ಳಿತು ಎಂದು ನಾನು ಭಾವಿಸುತ್ತೇನೆ ಇವರಿಗೆ ಬೇರೆಯವರ ದುಡ್ಡು ಬೇಕಾಗಿರಬಹುದು. ಅಂದರೆ ಶಿಶು ಜನಿಸುವ ಪೂರ್ವದಲ್ಲೇ, ಆ ಮಗುವಿನ ನಾಮಕರಣ ಮಾಡುವುದರ ಪೂರ್ವದಲ್ಲೇ ಹುಟ್ಟಬಹುದಾದಂಥ ಮಗುವಿನ ಹೆಸರಿನಲ್ಲಿ ಡಿಪಾಸಿಟ್ ತೆಗೆದುಕೊಂಡಂಥ ಉದಾಹರಣೆ ಇದೆ ಎಂದು ಹೇಳಿದರೆ ಆಶ್ಚರ್ಯಪಡಬೇಕಾಗಿಲ್ಲ. ಆ ತರಹ ಒಂದು ಹುಟ್ಟಿದ ಮಗು ಮುಂದೆ ಎಸ್. ಎಸ್. ಎಲ್. ಸಿ. ಪಾಸ್ ಆಗುತ್ತಾನೆ, ಪಿ. ಯು. ಸಿ. ಎರಡನೇ ವರ್ಷ ಮುಗಿಸುತ್ತಾನೆ ಎಂದು ಅವರ ಹೆಸರಿನಲ್ಲಿ ಡಿಪಾಸಿಟ್ ತೆಗೆದುಕೊಂಡಂಥ ಉದಾಹರಣೆಗಳಿವೆ.

ಉಪಾಧ್ಯಕ್ಷರು.—ಈಗ ತಾವು ಮೆಡಿಕಲ್ ಎಜುಕೇಷನ್‌ಗೆ ರೆಫರ್ ಮಾಡುತ್ತಿದ್ದೀರಾ ?

ಶ್ರೀ ಎಸ್ ವಿ. ನಾಯಕ್.—ನಾನು ಮೆಡಿಕಲ್ ಎಜುಕೇಷನ್ ವಿಷಯವಾಗಿ ಹೇಳುತ್ತಿದ್ದೇನೆ. ಮೆಡಿಕಲ್ ಎಜುಕೇಷನ್ ಕೂಡ ಎಜುಕೇಷನ್ನಿನ ಒಂದು ಭಾಗವೇ. ಇವತ್ತು ಏನಾಗಿದೆಯೆಂದರೆ, ಸಾಮಾನ್ಯ ಜನರು ಶೋಷಣೆಗೆ ಒಳಗಾದವರು, ಮಧ್ಯಮ ವರ್ಗದಿಂದ ಬಂದಂಥ ಮಕ್ಕಳು ಈ ಸರ್ಕಾರಿ ಮೆಡಿಕಲ್ ಕಾಲೇಜುಗಳಲ್ಲಿ ಸಾಧಾರಣವಾಗಿ ಶೇಕಡ 86-87 ರಷ್ಟು ಅಂಕಗಳನ್ನು ಪಡೆದವರು ಕ್ಯೂ ನಿಲ್ಲಬೇಕಾಗುತ್ತದೆ.

ಉಪಾಧ್ಯಕ್ಷರು.—ಇದು ಮೆಡಿಕಲ್ ಡಿಮ್ಯಾಂಡ್ ಅಲ್ಲ. ಆದುದರಿಂದ ಈ ಪ್ರಶ್ನೆ ಹೇಗೆ ಉದ್ಭವವಾಗುತ್ತದೆ ?

ಶ್ರೀ ಎಸ್. ವಿ. ನಾಯಕ್.—ನಾನು ಮೆಡಿಕಲ್ ಎಜುಕೇಷನ್ ಬಗ್ಗೆ ಮಾತನಾಡುತ್ತಿದ್ದೇನೆ.

ಶ್ರೀ ಪಿ. ಡಿ. ಬಂಗೇರ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್ಲಾ ಬ್ಯಾಂಕುಗಳು ಆ ರೀತಿ ಮಾಡುತ್ತಾ ಇವೆ ಎಂದು ಹೇಳುತ್ತಿದ್ದೀರಾ,

ಶ್ರೀ ಎಸ್. ವಿ. ನಾಯಕ್.—ನಾನು ಎಲ್ಲಾ ಬ್ಯಾಂಕುಗಳು ಎಂದು ಹೇಳಲಿಲ್ಲ. I quoted a particular Bank.

ಉಪಾಧ್ಯಕ್ಷರು.—ನಿಮ್ಮ ಸಲಹೆಯನ್ನು ಕೇಳಲು ಆರೋಗ್ಯ ಸಚಿವರು ಸಭೆಯಲ್ಲಿಲ್ಲ.

ಶ್ರೀ ಎಸ್. ವಿ, ನಾಯಕ್.—ಮಾನ್ಯ ಶಿಕ್ಷಣ ಮಂತ್ರಿಗಳಿಗೆ ಶಿಕ್ಷಣವನ್ನು ರಾಷ್ಟ್ರೀಕರಣ ಮಾಡಬೇಕು ಎಂದು ಹೇಳುವುದಕ್ಕೆ ಹೊರಟಿದ್ದೇನೆ.

4-30 ಪಿ. ಎಂ.

ನಾನು ಮೆಡಿಕಲ್ ಎಜುಕೇಷನ್ ಮೇಲೆ ಮಾತನಾಡುತ್ತೇನೆ. ಅಲ್ಲಿ ಶೇ. 40 ಬರುವವರಿಗೂ ಪ್ರವೇಶ ದೊರಕುತ್ತದೆ. ಆದರೆ ಶೇ. 86ರಷ್ಟು ತೆಗೆದುಕೊಂಡವರಿಗೆ ಪ್ರವೇಶವಿಲ್ಲ. ಕಡಿಮೆ ನಂಬರ್ ತೆಗೆದುಕೊಂಡವರಿಗೆ ಹಣ ಬಲ ಇರುತ್ತದೆ. ಅಥವಾ ಜನಬಲ ಇರುತ್ತದೆ. ಆದರೆ ಮನೆಯನ್ನು ಒತ್ತೆ ಇಟ್ಟೋ ಅಥವಾ ಆಭರಣವನ್ನು ಒತ್ತೆ ಇಟ್ಟೋ ಕಷ್ಟ ಪಟ್ಟು ಓದಿ ಶೇ. 86 ರಷ್ಟು ತೆಗೆದುಕೊಂಡರೂ ಅಂತಹವರಿಗೆ ಎಂ. ಬಿ. ಬಿ. ಎಸ್. ನಲ್ಲಿ ಸ್ಥಳ ಸಿಕ್ಕುವುದಿಲ್ಲ. ಶೋಷಣೆಗೆ ಒಳಗಾಗಿರತಕ್ಕವರಿಗೆ ಅವಕಾಶ ಮಾಡಿಕೊಡಬೇಕೆಂದೇನೋ ಸರ್ಕಾರದವರು ಹಾವನೂರು ಕಮಿಷನ್ನನ್ನು ನೇಮಿಸಿದ್ದು ಎಂದು ಕಾಣುತ್ತದೆ. ಇದರಿಂದಾಗಿ ಹೆಚ್ಚಿಗೆ ಶೋಷಣೆಗೊಳಗಾದವರಿಗೆ ಅನುಕೂಲವಾಗುತ್ತದೆ. ಆದ್ದರಿಂದ ಈ ದೇಶದ ಹಿತದೃಷ್ಟಿಯಿಂದ ನಾನು ಮಾನ್ಯ ಶಿಕ್ಷಣ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಇಂತಹ ಕಾಲೇಜುಗಳ ರಾಷ್ಟ್ರೀಕರಣವನ್ನು ತಾವು ಎಷ್ಟು ಮೊದಲು ಮಾಡುತ್ತೀರೋ ಅಷ್ಟು ಈ ದೇಶಕ್ಕೆ ಹಿತವಾಗುತ್ತದೆಂದು ನಾನು ಭಾವಿಸಿದ್ದೇನೆ. ಅದೇ ರೀತಿಯಲ್ಲಿ ತಾಂತ್ರಿಕ ಶಿಕ್ಷಣ ಕೆಲವು ಕಾಲೇಜುಗಳೂ ಸಹ ಈ ವಿಷಯದಲ್ಲಿ ಜಾಗ್ರತಿ ಹಾಗೂ ಆಸಕ್ತಿ ವಹಿಸಬೇಕಾಗುತ್ತದೆ. ಇಲ್ಲದಿದ್ದರೆ ಈ ದೇಶದಲ್ಲಿ ಪ್ರಜಾಪ್ರಭುತ್ವದ ಹೆಸರಿಗೂ ಹಾಗೂ ಸಾಮಾಜಿಕ ನ್ಯಾಯಕ್ಕೂ ಕೆಟ್ಟ ಹೆಸರು ಬರುತ್ತದೆಂಬುದನ್ನು ಮತ್ತೊಮ್ಮೆ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಇನ್ನು ತಾವು ಗಮನಿಸಬೇಕಾದಂತಹ ಮಹತ್ವವಾದಂತಹ ಇನ್ನೊಂದು ಅಂಶ ಏನೆಂದರೆ, ಮೊನ್ನೆ ಪೈ ಆಯೋಗ ಒಂದು ವೇತನ ಶ್ರೇಣಿಯ ಪರಿಶೀಲನೆಗೆ ತಮಗೆ ಕಳುಹಿಸಿತು. ಅದನ್ನು ಮಂಜೂರು ಮಾಡುವ ಸಮಯದಲ್ಲಿ ಪುನಃ ಶಿಕ್ಷಕರ ಮೇಲೆ ಅದರಿಂದ ಬಹಳ ಆಘಾತವಾಗಿದೆ ಎಂಬ ಅಂಶ ಕೂಡ ತಮ್ಮ ಮುಂದಿದೆ. ಇದು ಬಹಳ ವಿಚಿತ್ರವಾದ ಸನ್ನಿವೇಶ, ಈ ಮನೆಯಲ್ಲಿ ಹಿಂದೆ ನಾವು ಚರ್ಚೆಗೆ ತೆಗೆದುಕೊಂಡಂತಹ ವಿಷಯ ಪೈ ವೇತನ ಆಯೋಗ ಅದಕ್ಕೆ ಈಗಾಗಲೇ ನಾವು ಒಪ್ಪಿಗೆ ಕೊಟ್ಟಿದ್ದೇವೆ, ಆದರೆ ಪೈ ಆಯೋಗದ ವರದಿಯನ್ನು ಸರ್ಕಾರದ ಅಧಿಕಾರಿಗಳ ಒಂದು ಸಮಿತಿಗೆ ಒಪ್ಪಿಸಿದಾಗ ಅದು ತನ್ನ ಮೂಲ ಸತ್ವವನ್ನೇ ಕಳೆದುಕೊಂಡಿತು. ಅದು ಪೈ ವೇತನ ಆಯೋಗದ ವರದಿಯಲ್ಲವೇನೋ ಎನ್ನುವಷ್ಟರಮಟ್ಟಿಗೆ ನನಗೆ ಭಾಸವಾಗುತ್ತದೆ. ಆದ್ದರಿಂದ ಇದರಲ್ಲಿರುವ ಅನ್ಯಾಯವನ್ನು ಸರಿಪಡಿಸದೇ ಹೋದರೆ ಖಂಡಿತವಾಗಿ ನಾವು ಶಿಕ್ಷಕರ ಸಮಾಜಕ್ಕೆ ಒಂದು ದೊಡ್ಡ ಅನ್ಯಾಯ ಮಾಡಿದಂತಾಗುತ್ತದೆ. ಜೂನಿಯರ್ ಕಾಲೇಜಿನ ಒಬ್ಬ ಲೆಕ್ಚರರ್‌ಗೆ 750 ರಿಂದ 1500 ರೂಪಾಯಿಗಳವರೆಗೆ ವೇತನ ಶ್ರೇಣಿಯನ್ನು ನಿಗದಿ ಮಾಡಿದ್ದೀರಿ. ಅದೇ ರೀತಿಯಲ್ಲಿ ಕಾಲೇಜ್ ಲೆಕ್ಚರರ್‌ಗೂ ವೇತನ ಶ್ರೇಣಿಯನ್ನು ಕೊಟ್ಟಿದ್ದೀರಿ. ಅಂದಮೇಲೆ ಮುಖ್ಯೋಪಾಧ್ಯಾಪಕರು ಏನು ಪಾಪ ಮಾಡಿದ್ದಾರೆ? ಅವರಿಗೆ ಈಗ 650 ರಿಂದ 1350 ರೂಪಾಯಿಗಳವರೆಗೆ ವೇತನ ಶ್ರೇಣಿಯನು ನಿಗದಿ ಮಾಡಿದ್ದೀರಿ ಇದೇ ಸಂದರ್ಭದಲ್ಲಿ ಮುಖ್ಯೋಪಾಧ್ಯಾಪಕರನ್ನು ಬಿ.ಎಡ್. ಕಾಲೇಜಿನ ಲೆಕ್ಚರರಾಗಿ ಪೋಸ್ಟ್ ಮಾಡಿದಾಗಲೂ ಕೂಡ ಇದೇ ವೇತನ ಏಕೆ ನಿಗದಿ ಮಾಡಿದಿರಿ? ಸಾಮಾನ್ಯವಾಗಿ ಬಿ.ಎಡ್. ಕಾಲೇಜಿನ ಲೆಕ್ಚರರನ್ನಾಗಿ ಅವರನ್ನು ಪೋಸ್ಟ್ ಮಾಡಿದಾಗ ಅದೇ ವೇತನ ಶ್ರೇಣಿಯನ್ನು ಅವರಿಗೂ ಕೊಟ್ಟಿದ್ದೀರಿ. ಎಂ.ಎ. ಹಾಗೂ ಎಂ.ಇಡಿ. ಯಾಗಿರುವವರು ಎರಡು ಸ್ನಾತಕೋತ್ತರ ಪದವಿಗಳನ್ನು ಪಾಸು ಮಾಡಿದ್ದರೂ ಅವರಿಗೆ ಸುಮಾರು 10-15 ವರ್ಷಗಳ ಸರ್ವಿಸ್ ಆಗಿದ್ದರೂ ಅಂತಹವರಿಗೂ ಇದೇ ವೇತನ. ಎಂ.ಎ. ಪಾಸಾಗಿ ಈಗತಾನೆ ಕಾಲೇಜಿನಿಂದ ಹೊರ

ಬಂದು ಪ್ರೈಷಾಗಿ ಪೋಸ್ಟ್ ಮಾಡಿದಂತಹವರಿಗೆ 750-1500 ವೇತನ ಶ್ರೇಣಿಯನ್ನು ನಿಗದಿ ಮಾಡಿರುತ್ತೀರಿ. ಈ ರೀತಿ ಹೊಂದಾಣಿಕೆ ಮಾಡುವುದಕ್ಕೆ ಹೋಗಿ ಹಳೆಯ ಸ್ಕೇಲ್ ಮತ್ತು ಹೊಸ ಸ್ಕೇಲ್ ಇಟ್ಟುಕೊಂಡಿರುವುದರಿಂದ ಅವರಿಗೆ ಅಕ್ಷಮ್ಯ ಅಪರಾಧವಾಗಿದೆಯೆಂದು ನಾನು ಭಾವಿಸುತ್ತೇನೆ. ಈ ವಿಚಾರದ ಬಗ್ಗೆ ಸರ್ಕಾರ ಕೂಡಲೇ ಗಮನ ಕೊಡಬೇಕು. ಇಲ್ಲದಿದ್ದರೆ ಪೈ ವೇತನ ಆಯೋಗವನ್ನು ಏತಕ್ಕೆ ಮಾಡಬೇಕಾಗಿತ್ತು? ಅದರಿಂದಾಗಿ ಅವರು ಅವ್ಯಾಹತವಾಗಿ ಅವರ ಮನವಿಗಳನ್ನು ತಮ್ಮ ಮುಂದೆ ಅರ್ಪಿಸಿದ್ದಾರೆ. ಆದರಿಂದ ನಾನು ಈ ಮೂಲಕ ಮಾನ್ಯ ಮಂತ್ರಿಗಳಿಗೆ ಅರಿಕೆ ಮಾಡಿಕೊಳ್ಳುವುದೇನೆಂದರೆ ಆದಷ್ಟು ಬೇಗ ತಾವು ಈ ರೀತಿ ಅನ್ಯಾಯವಾಗಿರುವಂಥಾದ್ದನ್ನು ಕೂಡಲೇ ಸರಿಪಡಿಸುತ್ತೀರೆಂದು ನಾನು ಭಾವಿಸಿದ್ದೇನೆ.

ಮೂರನೆಯದಾಗಿ ತಾವು ಇನ್ನೊಂದು ಪ್ರಯೋಗ ಮಾಡುವುದಕ್ಕೆ ಹೊರಟಿದ್ದೀರಿ. ಅದು ಪ್ರಾಥಮಿಕ ಶಾಲೆಗಳಿಗೆ ರಜಾದಿನಗಳನ್ನು ಘೋಷಿಸಿರುವುದು. ಮೇ 21ರಿಂದ ಕೆಲವು ಪ್ರಾಥಮಿಕ ಶಾಲೆಗಳು ಪ್ರಾರಂಭವಾಗಿವೆ. ಈ ಮಧ್ಯೆ ಶಿಕ್ಷಕರಲ್ಲಿ ಒಂದು ರೀತಿಯ ಮಾನಸಿಕವಾದಂತಹ ಪರದಾಟ ಏನಿತ್ತೆಂದರೆ ಅದು ಅವರ ವರ್ಗಾವರ್ಗಿಯಾಗುವ ಕಾಲ ಸಮೀಪಿಸಿದ್ದುದು. ಅವರು ಈ ರೀತಿಯ ಒಂದು ಗೊಂದಲದ ಪರಿಸ್ಥಿತಿಯಲ್ಲಿದ್ದಾಗ ಸಾಧಾರಣವಾಗಿ ಸುಮಾರು 15 ದಿವಸಗಳವರೆಗೆ ಮಕ್ಕಳ ವಿದ್ಯಾಭ್ಯಾಸ ಸರಿಯಾಗಿ ನಡೆಯಲಿಲ್ಲ. ನಂತರ ಅವರು ಇನ್ನೇನು ಪಾಠಪ್ರವಚನಗಳ ಕಡೆ ಗಮನ ಕೊಡುವಂತಹ ಸಂದರ್ಭದಲ್ಲಿ ಮತ್ತೆ ಪುನಃ ರಜಾದಿನಗಳನ್ನು ಘೋಷಿಸಿದ್ದೀರಿ. ಅಲ್ಲಿಗೆ ಒಂದು ತಿಂಗಳು ಆಗಿಯೇ ಹೋಯಿತು. ನಮ್ಮ ಭಾಗದ ಕೆಲವು ಜಿಲ್ಲೆಗಳಲ್ಲಿ ಜೂನ್ ಒಂದರಿಂದ ಜುಲೈ 21ರ ವರೆಗೆ ರಜಾ ಕೊಡುತ್ತಿದ್ದಾರೆಂದು ನನಗೆ ಕಾಣಿಸುತ್ತದೆ. ಆ ಅವಧಿ ವಿದ್ಯಾಭ್ಯಾಸಕ್ಕೆ ಮಹತ್ವವಾದಂತಹ ಕಾಲ. ಈ ವೇಳೆಯಲ್ಲಿ 21 ದಿವಸಗಳು ಅಂದರೆ 3 ವಾರಗಳ ಕಾಲದವರೆಗೆ ಮಕ್ಕಳಿಗೆ ಏನೂ ಪಾಠಪ್ರವಚನಗಳ ಅಭ್ಯಾಸವಿಲ್ಲದೆ ಆ ಮಕ್ಕಳ ಜೀವನವೇ ಈಗ ಕುಂಠಿತವಾಗಿ ಸಾಗುತ್ತಿದೆ, 21 ದಿವಸಗಳ ನಂತರ ಮತ್ತೆ ಶಾಲೆಗಳನ್ನು ಪ್ರಾರಂಭಿಸಿ ಪುನಃ 10-15 ದಿವಸಗಳವರೆಗೆ ರಜಾ ಕೊಡುತ್ತಿದ್ದಾರೆ, ಅಲ್ಲಿ ಇಷ್ಟು ತೊಂದರೆಗಳಾಗಿರುವುದರಿಂದ ಈ ವಿಚಾರವನ್ನು ಪುನರ್ಪರಿಶೀಲನೆ ಮಾಡಬೇಕೆಂದು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ನಾಲ್ಕನೆಯದಾಗಿ ಈ ಮಲೆನಾಡು ಜಿಲ್ಲೆಗಳ ಸಮಸ್ಯೆಗಳನ್ನು ನಾವು ತೆಗೆದುಕೊಂಡಾಗ, ಮಲೆನಾಡಿನ ಜಿಲ್ಲೆಗಳಿಗೆ ಒಂದು ವಿಶಿಷ್ಟವಾದ ಸ್ಥಾನಮಾನವನ್ನು ಕೊಡಬೇಕೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಮಲೆನಾಡು ಜಿಲ್ಲೆಯನ್ನು ಒಂದು ಸಮಗ್ರವಾಗಿ ತೆಗೆದುಕೊಳ್ಳುವುದರ ಜೊತೆಗೆ ಪ್ರತಿಯೊಂದು ತಾಲ್ಲೂಕಿಗೂ ಕೂಡ ಅದರದೇ ಆದಂತಹ ಸಮಸ್ಯೆಗಳಿವೆ ಆ ಸಮಸ್ಯೆಗಳ ತೂಕ ನೋಡಿ ಅವರಿಗೆ ಪರಿಹಾರಗಳನ್ನು ಒದಗಿಸಿಕೊಡಬೇಕು ಯಾವ ದೃಷ್ಟಿಯಿಂದ ಇದನ್ನು ಹೇಳುತ್ತಿದ್ದೇನೆಂದರೆ. ಅಲ್ಲಿನ ಶಾಲೆಗಳಿಗೆ ಬರುವ ಮಕ್ಕಳ ಹಾಜರಾತಿ ವಿಷಯದಲ್ಲಾಗಲೀ, ಅಥವಾ ಬೇರೆ ರೀತಿಯಲ್ಲಿ ಹೊಸ ಶಾಲೆಗಳನ್ನು ಅಲ್ಲಿ ಪ್ರಾರಂಭಿಸುವ ವಿಷಯದಲ್ಲಾಗಲೀ, ತಮಗೆ ಗೊತ್ತಿರುವಂತೆ ಅಲ್ಲಿನ ಸಂಪರ್ಕ ಸಾರಿಗೆ ವ್ಯವಸ್ಥೆ ಏನೂ ಚೆನ್ನಾಗಿಲ್ಲ. ಒಂದು ಕಡೆ ಹಳ್ಳ ಇನ್ನೊಂದು ಕಡೆ ಗುಡ್ಡ. ಹೀಗೆ ಬೆಟ್ಟ ಗುಡ್ಡಗಳು ಬಹಳ ಕಡಿದಾದಂಥಾದ್ದು ಇವೆ. ಇದರಿಂದ ಅಲ್ಲಿನ ಮಕ್ಕಳು ಅಂತಹ ಕಡೆಗಳಲ್ಲಿರತಕ್ಕ ಶಾಲೆಗಳಿಗೆ ಹೋಗಿ ಶಿಕ್ಷಣ ಪಡೆಯುವುದಕ್ಕೆ ಬಹಳ ಕಷ್ಟವಾಗುತ್ತದೆ. ಇದರಿಂದ ಅವರು ಇಚ್ಛೆಪಟ್ಟ ಪ್ರಮಾಣದಲ್ಲಿ ಶಿಕ್ಷಣವನ್ನು ಪಡೆಯುವುದಕ್ಕಾಗುವುದಿಲ್ಲ. ಈ ಸಂದರ್ಭದಲ್ಲಿ ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ನಾನು ಸಿದ್ಧಾಪುರ ಘಟ್ಟದ ಮೇಲಿರುವವನು ಒಂದು ಸಾರಿ ಕಾರಿನಲ್ಲಿ ಬರುತ್ತಿದ್ದೆ. ಅದು ಸಾಧಾರಣ ಸಂಜೆ 6½ ಅಥವಾ 7 ಘಂಟೆಯಾಗಿರಬೇಕು, ಇಬ್ಬರು ಹುಡುಗಿಯರು ವಿದ್ಯಾರ್ಥಿನಿಯರಿರಬಹುದು. ಅವರು ಹೈಸ್ಕೂಲಿನಲ್ಲಿ ವ್ಯಾಸಂಗ ಮಾಡುತ್ತಿದ್ದವರಿರಬಹುದು. ಚಿಗುರೆ ಮರಿಯಂತೆ ತಮ್ಮ ಜೀವವನ್ನೇ ತಮ್ಮ ಕೈಯ್ಯಲ್ಲಿ ಹಿಡಿದುಕೊಂಡು ಹೋಗುತ್ತಿದ್ದರೆಂದು ನನಗೆ ಭಾಸವಾಯಿತು. ಇವತ್ತು ಆ ಪ್ರದೇಶದಲ್ಲಿ ಶಿಕ್ಷಣಕ್ಕೆ ಎಷ್ಟು ಮಹತ್ವ ಕೊಟ್ಟಿದ್ದಾರೆಂಬುದು ಗೊತ್ತಾಗುತ್ತದೆ. ಅಲ್ಲಿ ಹೊಸದಾಗಿ ಈಗ ಶಾಲೆಯನ್ನು ಪ್ರಾರಂಭಿಸಬೇಕಾದರೆ ತಾವು ಗಮನಿಸಬೇಕಾದಂತಹ ಒಂದು ಅಂಶವೇನೆಂದರೆ. ಉ:ದ ಕಡೆ 5 ಕಿಲೋಮೀಟರ್ ಒಳಗಡೆ ಒಂದು ಹೈಸ್ಕೂಲು ಇರಬೇಕೆಂದು ಹೇಳಿದ್ದರೂ ಕೆಲವು ಸಂದರ್ಭಗಳಲ್ಲಿ ಆ ನಿಯಮವನ್ನು ಸರ್ಕಾರ ಸರಿಪಡಿಸಬೇಕಾಗುತ್ತದೆ. ಈಗ ನಮ್ಮಲ್ಲಿ ಪ್ರತಿ ಚದರ ಮೈಲಿಯ

ಒಳಗಡೆ ಒಂದು ಹೊಸ ಶಾಲೆಯನ್ನು ಪ್ರಾರಂಭಿಸಬೇಕಾದರೆ, ಅಲ್ಲಿರುವವರು 50 ಸಾವಿರ ರೂಪಾಯಿಗಳಷ್ಟು ಡಿಪಾಜಿಟ್ಟಾಗಿ ಕೊಡಬೇಕೆಂದು ಒಂದು ಕಡ್ಡಾಯ ನಿಯಮ ಮಾಡಿದ್ದಾರೆ. ಆ ರೀತಿ ನಿಯಮ ಮಾಡಿದರೆ ಅಲ್ಲಿನ ಬಡ ಜನರು ಅಷ್ಟು ಹಣವನ್ನು ಎಲ್ಲಿಂದ ತಂದು ಕೊಡಬೇಕು? ಇಲ್ಲದಿದ್ದರೆ ಸರ್ಕಾರದವರು ಮಲೆನಾಡು ಜಿಲ್ಲೆಯಲ್ಲಿ ಹೊಸ ಹೈಸ್ಕೂಲು ಮಾಡಲಿ.

ಉಪಾಧ್ಯಕ್ಷರು.—ಮಲೆನಾಡಿಗೆ ಸ್ಪೆಷಲ್ ಕನ್ಸಿಡರೇಷನ್ ತೋರಿಸಬೇಕು ಎಂದು ಹೇಳಿ.

ಶ್ರೀ ಎಸ್.ವಿ. ನಾಯಕ್.—ಹೌದು ಶಿವಮೊಗ್ಗವಾಗಲಿ, ಉತ್ತರ ಕನ್ನಡ ಜಿಲ್ಲೆಯಾಗಲೀ, ದಕ್ಷಿಣ ಕನ್ನಡ ಜಿಲ್ಲೆಯಾಗಲಿ ಮಲೆನಾಡು ಜಿಲ್ಲೆಗಳಿಗೆ ಒಂದು ವಿಶೇಷವಾದ ಸವಲತ್ತನ್ನು ಕೊಡಬೇಕು.

ಹಾಜರಾತಿಯ ಸಂಖ್ಯೆಯ ವಿಷಯವನ್ನು ಹೇಳುವುದಾದರೆ ನಮ್ಮ ಉಪಾಧ್ಯಕ್ಷರು ಮಲೆನಾಡು ಪ್ರದೇಶದಿಂದ ಬಂದಿರತಕ್ಕವರು. ಅಲ್ಲಿ ಒಂದು ಚದುರಮೈಲಿಗೆ ಸರಾಸರಿ ಜನಸಂಖ್ಯೆ ಎಷ್ಟಿದೆ ಎಂಬುದು ತಮಗೆ ಗೊತ್ತಿದೆ. ಜನದಟ್ಟಣೆ ಇರತಕ್ಕ ಪ್ರದೇಶದಲ್ಲಿ ಹಾಜರಾತಿ ಸಂಖ್ಯೆ 25 ಇರಬೇಕು ಎನ್ನುವ ವಾದವನ್ನು ನಾನು ಒಪ್ಪುತ್ತೇನೆ. ಆದರೆ ಮಲೆನಾಡು ಜಿಲ್ಲೆಗಳಲ್ಲಿ ಕೂಡ ಇದೇ ರೀತಿ ಹಾಜರಾತಿ ಇರಬೇಕು ಎನ್ನುವ ವಾದವನ್ನು ಮಂಡಿಸುತ್ತೇವೆ ಎಂದರೆ ಅವರು ಶಿಕ್ಷಣ ಪಡೆಯುವುದು ಕಷ್ಟವಾಗುತ್ತದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ 156 ಹೈಸ್ಕೂಲುಗಳು ಇವೆ. ಅಲ್ಲಿಯ ಭೌಗೋಳಿಕ ಸ್ಥಾನಮಾನಗಳಿಂದ ಒಂದೊಂದು ಹೈಸ್ಕೂಲಿನಲ್ಲಿ 130-140 ಹುಡುಗರನ್ನು ಒಟ್ಟಿಗೆ ಸೇರಿಸುವುದು ಕಷ್ಟವಾಗುತ್ತದೆ. ಈ ದೃಷ್ಟಿಯಿಂದ ಹಾಜರಾತಿ ವಿಷಯದಲ್ಲಿ ಮಲೆನಾಡು ಜಿಲ್ಲೆಗಳಿಗೆ ವಿಶೇಷವಾದ ಸವಲತ್ತು ಕೊಡಬೇಕೆಂದು ನಾನು ತಮ್ಮನ್ನು ವಿನಂತಿ ಮಾಡಿಕೊಳ್ಳುತ್ತೇನೆ, ಶಿಕ್ಷಣ ಕ್ಷೇತ್ರದ ವಿಷಯವನ್ನು ಮಾತನಾಡುವುದಾದರೆ ತಾಸುಗಟ್ಟಲೆ ಮಾತನಾಡಬಹುದು. ಆದರೆ ವೇಳೆಯ ಅಭಾವದಿಂದ ನಾನು ಇನ್ನು ಹೆಚ್ಚು ಮಾತನಾಡಬಯಸುವುದಿಲ್ಲ, ತಾವು ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

SRI B. B. SAYANAK (Belgaum).—Mr. Deputy Speaker Sir, I rise to oppose today's demands. The education is playing a most important part in developing the country; and that too in India. After independence the education has increased quantitatively; but the quality and the standard has decreased. The facility given to the poorer and the down-trodden, particularly to Scheduled Castes and Scheduled Tribes is not cent percent. The SC/ST people are not taking advantage of the facilities given by the Government. What is the main object of the Five Year Plan for school education? The main objects are as follows.

(i) Providing schooling facilities to 100 percent of the children in the age group 6 to 10 years;

(ii) Ensuring a minimum 50 percent enrolment in the age group 10 to 13 years;

(iii) Improving the enrolment of Girls and Children from the weaker sections of society and;

(iv) to give priority to programmes relating to improvement of the quality of education;

Have you achievd all these objectives ? No , the Government has not fulfilled all these objectives Though there is provision for the cent percent admission of the children in the age group of 6-10 years, the progress achieved is 50 percent or even lower than that. Government or the teachers are not taking interest to bring the children to school. Even the parents are not enthusiastic to send their children. That is why they could not fulfil their objectives. There are, in all 33137 Primary Schools in the State, and also there are 407 private primary schools. When the Government is giving salary to the private school teachers and maintenance grants to the private schools, why the Government is not going to take over these 407 private primary schools ? What is wrong with the Government ? When the salaries and maintenance grants are given why can't the Government take over those schools ? I could quote one example. In Thilakwadi there is one Rajaputh Bandhu primary school under the management of Lokamanya Eeucation Society When the Government wanted to take over the school management in the year 1969, the management has refused to hand over the school because some of the Managing Committee Members were the teachers in the school. Now those teachers have retired and so they are going to transfer this school to Vishwa Bharathi Education Society. I am very sorry for that. The management of the Vishwa Bharathi is worst. They are running High School in Belgaum and Khanapur Taluks, where they are taking 100 rupees from teachers and Rs. 50 from peons Why the Government is allowing this Education Society to transfer the management to Vishwa Bharathi Seva Samithi ? Therefore, I request the Government not to allow for the change of the management of this School. Last year, I have written to the Director of Public Instruction about this and also to the Joint Director, Belgaum not to change the management, to Vishwa Bharathi Society. I have written the letter on 25th March 1976. I have also requested my friend the Education Minister Sri Kharge not to hand over the school management to Vishwa Bharathi Society. But he is helpless. He is telling me that the papers are with the Chief Minister. I want to ask the Chief Minister why the papers are kept under custody of the Chief Minister ? Is he the Education Minister, or Mr. Kharge ? Because the Chairman of the Vishwa Bharathi Society has recently joined the Congress and also he has helped the Congress Party, you are going to change the management for his benefit. When the boys and the teachers were objecting, not to change the Management, why you are going to allow them to change the management If the management is changed, the management will be worst. They are the people who will grab the money and give trouble to the teachers and students. Therefore, I request the Honble Minister through you Sir, for Gods' ake don't change this management.

Regarding the appointment of teachers, Government is issuing notices in the month of May. What is the use of appointing teachers late after the commencement of the schools ? What will be the standard of education if that procedure is followed ? When we talk about the standard of education, we must also see that teachers are appointed right at the commencement of the schools. Therefore, I request the Hon. Minister for Education that the teachers must be appointed immediately after the vacation or at the time of schools opening. If that is done, then only the standard of education will be improved

Then coming to the books, books are not available at the time of opening of the schools. Even the 5th Standard Science book is not available. To-day, that book is not available. If this is the position, how can you expect the standard to be improved ?

Another thing There is shortage of teachers in Marathi schools. I will point out some instances. In Khanapur there is a village by Narase The strength of the school is 100-120, for Standards I to VI. There are only three teachers. Six teachers are required to teach the students. Why are you not giving a team of three more teachers to that Narse village ? In Mandoli village there are 200-250 students studying in Standards I to VII and there are only three teachers. The requirement is six. Why are you not appointing three more teachers when there is unemployment problem facing the educated people ? I am very sorry that the Government is not taking care of these primary schools, and primary education.

There is a school at Kedanur in Belgaum taluk and there are 175 students studying there. There is no school building. It was being run in a temple and now that school is being run in a private person's house. There are only three teachers. They want three more teachers. All these things are going on I request the Hon'ble Ministe through you, Sir, that he must appoint the required number of teachers immediately and do good to the student world.

Regarding school buildings, in Belgaum city when Shahapur was a taluk place, there was a big building. Now that building has collapsed. Since four years I have been requesting the Government every year but Government is not going to take care of the school building. They have not constructed it because, that school belongs to the Marathi boys. So, they are not caring for the Marathi boys.

In Resaldargalli, Belgaum city there is one school and all boys are sitting in one room measuring 18' x 15'. 100 boys are sitting. What will be the standard of education ? So, I request the Government, through the Chair, to construct buildings for the primary schools.

Another thing which I want to refer to. is regarding repairs to buildings I have visited some of the schools 15 days back and in some of the schools the teachers told me that repair work has not been done this year There will be heavy rains in Belgaum division and if the repairs work is not taken up at the beginning of the year, the boys will have to sit in the rain. Therefore, I request the Government to take care of the student world and do the repairs work.

Regarding Mid-Day meals, you have started the mid-day meal scheme, it is a good thing but in Belgaum City, I have not come across mid-day meal in school. Government has done great injustice to Belgaum City by not giving them the benefit of Mid-day Meal Scheme

Then, about correspondence, I want to ask how the Marathi teachers can understand Kannada or English. Correspondence must be in Marathi in respect of Marathi schools. The leave sanction memos are sent in Kannada and the Marathi teachers cannot understand English or Kannada. I request the Government to make correspondence regarding leave grant' etc., in Marathi only, in respect of such schools. The syllabus is in English and Kannada. I request the Government to fulfil all the requirements of the Marathi teachers in border areas.

Regarding examinations, during the S. S. L. C. examination, I have visited all the centres in Belgaum and I have found that the boys are copying and the Supervisors are not taking any action and the Police are also encouraging it. Such things are going on. I request the Hon. Minister. through the Chair, to adopt a new system of education. Otherwise, the standards would further deteriorate in all the examinations.

Then, I wish to say a word about this capitation fee. I am very sorry that the Government has now legilased the levy of capitation fee in the private Colleges. For Engineering students it is 5,000 rupees and for the Medical College students it is 5,000 rupees for the Karnataka students and 35 000 rupees for outsiders. I want to ask the hon. Minister through you, Sir. this question: Are you selling education to the public? When there is capitation fee, merit has no value. The implication of this captation fee is that no boy with merit would get admission. This is the position. So, I request the Hon'ble Minister to nationalise all these Colleges by taking them over into Government fold. In Maharashtra all the Medical Colleges have been taken over by the Maharashtra Government. There was only one private College in Sholapur and even that was taken over by the Maharashtra Government and now, there is no private Medical College in Maha-

rashtra nor even the Engineering Colleges. So, I ask the Government: 'Why are you not going to take over all the Colleges into the custody of the Government ?

There is a General Library in Belgaum. That library was started in 1832. For the past three years, Government has not sanctioned the grant for that Library on account of some paltry reason *viz.*, they have maintained the records in Marathi. That is their only fault. When they have maintained their records from 1832 in Marathi, why should they not do so now ? I request the Government not to take this attitude regarding the Marathi institutions.

Regarding High School, the Convent Schools are giving better standards of teaching to the boys but do you know how much they are gra-bbing from the people ? They are taking 200 rupees or 500 rupees as donation and whatever amount they ask the parents are willing to pay because they want their children to be Englishmen. That is way they are sending their boys to these institutions. What is the fate of poor people ? Should they not have the benefit of good teaching ? The Government's policy is that from I standard to Xth Standard education should be free. These institutions are also taking fee for students studying from I to X Standards. So, I request the Government to see whether they are charging fee to the students in Missionary schools and if they are doing so, you must pull them up and do justice to the student world. With these words, I thank the Deputy Speaker.

5-00 P.M.

ಶ್ರೀ ಎಂ. ಮಲ್ಲಪ್ಪ (ಬೀರೂರು).—ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಶಿಕ್ಷಣ ಸಚಿವರು ಈ ಸದನದಲ್ಲಿ ಮಂಡಿಸಿರುವ ಬೇಡಿಕೆಗಳನ್ನು ಬೆಂಬಲಿಸುತ್ತಾ, ಒಂದೆರಡು ಮಾತುಗಳನ್ನು ಹೇಳು ವುದಕ್ಕೆ ಬಯಸುತ್ತೇನೆ. ಈಗಾಗಲೇ ವಿದ್ಯಾಭ್ಯಾಸದ ಸುಧಾರಣೆ ಕುರಿತು ಅನೇಕ ವಿಷಯಗಳ ಪ್ರಸ್ತಾಪ ಇಲ್ಲಿ ನಡೆದಿದೆ. ಕ್ರಾಂತಿಕಾರಕವಾದ ಶಿಕ್ಷಣವಾಗಬೇಕೆನ್ನುವ ಉದ್ದೇಶವಿದ್ದು, ಆ ಬಗ್ಗೆ ಅನೇಕ ರೀತಿಯಲ್ಲಿ ಸುಧಾರಣೆಗಳನ್ನು ಸರ್ಕಾರ ಹಾಗೂ ಇಲಾಖೆ ನಡೆಸಿಕೊಂಡು ಬಂದಿದೆ. ನಮ್ಮ ದೇಶದಲ್ಲಿ ಶೇಕಡ ಎಪ್ಪತ್ತರಷ್ಟು ರೈತರು, ಶೇಕಡ ಹದಿನೆಂಟರಷ್ಟು ಕೈಗಾರಿಕೆಗಳಲ್ಲಿ ನಿರತ ರಾಗಿರುವವರು ಮತ್ತು ಶೇಕಡ ಹನ್ನೆರಡರಷ್ಟು ಉದ್ಯೋಗಸ್ಥರಿದ್ದಾರೆ. ಇಂದಿನ ವಿದ್ಯಾಭ್ಯಾಸದ ಕ್ರಮ ಶೇಕಡ ಹನ್ನೆರಡಷ್ಟಿರುವ ಉದ್ಯೋಗಸ್ಥರಿಗೆ ಉಪಯೋಗವಾಗುವ ರೀತಿಯಲ್ಲಿ ನಡೆಯು ತ್ತಿದೆಯೇ ಹೊರತು ರೈತರ ಏಳಿಗೆಗಾಗಿ ಮತ್ತು ಅವರ ಅಭಿವೃದ್ಧಿಗಾಗಿ, ರಾಷ್ಟ್ರದ ಕಲ್ಯಾಣ ಸಾಧನೆಗೆ ಆಗುತ್ತಿಲ್ಲ ಎನ್ನುವುದನ್ನು ಎಲ್ಲರೂ ಒಪ್ಪಬೇಕು. ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಆರರಿಂದ ಹತ್ತು ವರ್ಷ ವಯಸ್ಸಿನ ವಿದ್ಯಾರ್ಥಿಗಳ ಹಾಜರಾತಿಯನ್ನು ನೂರಕ್ಕೆ ನೂರರಷ್ಟು ದೊರಕಿಸಿಕೊಳ್ಳಬೇಕೆನ್ನುವ ಮಹೋದ್ದೇಶವನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಇಟ್ಟುಕೊಂಡಿ ದ್ದರೂ; ಅದು ಅನೇಕ ಕಾರಣಗಳಿಂದಾಗಿ ಸಾಧಿತವಾಗುತ್ತಿಲ್ಲ. ಅದರಲ್ಲೂ ಹತ್ತು-ಹದಿನೈದು ವರ್ಷ ವಯಸ್ಸಿನ ವಿದ್ಯಾರ್ಥಿಗಳಿಂದ ಕನಿಷ್ಟ ಪಕ್ಷ ಅರ್ಧ ಭಾಗದಷ್ಟಾದರೂ ಹಾಜರಾತಿಯನ್ನು ದೊರಕಿಸ ಬೇಕೆನ್ನುವ ವಿಚಾರದಲ್ಲಿ ಕೆಲಸಗಳು ನಡೆಯುತ್ತಿವೆ. ಆದರೆ, ಅದರ ಉಪಯೋಗವನ್ನು ಪರಿಪೂರ್ಣ ವಾಗಿ ಯಾರೂ ಹೊಂದುತ್ತಿಲ್ಲ.

ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹೆಚ್ಚು ಹಣವನ್ನು ಮತ್ತು ಸಹಕಾರವನ್ನು ಇಲಾಖೆ ಮತ್ತು ಸರಕಾರ ನೀಡುತ್ತಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಹೆಣ್ಣು ಮಕ್ಕಳಿಗೆ ಹೆಚ್ಚು ಅನುಕೂಲವಾಗುವ ರೀತಿಯಲ್ಲಿ ವಿದ್ಯಾಭ್ಯಾಸ ನಡೆಯುತ್ತಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಈ ವಿದ್ಯಾಭ್ಯಾಸದ ಉಪಯೋಗವನ್ನು ಗ್ರಾಮಾಂತರ ಪ್ರದೇಶದ ಎಲ್ಲ ಹೆಣ್ಣುಮಕ್ಕಳೂ ಪಡೆಯುವಂತ ಹೆಚ್ಚಿನ ಕಾರ್ಯ ಕೈಗೊಳ್ಳಬೇಕಾಗಿದೆ.

ವಿದ್ಯಾಭ್ಯಾಸದ ಕ್ರಮದಿಂದ ನಾವು ನಿಜವಾಗಿಯೂ ಕೂಡ ಉಪಯೋಗವನ್ನು ಪಡೆಯಬೇಕೆಂದಿದ್ದರೆ, ಮತ್ತು ಅದರಿಂದ ರಾಷ್ಟ್ರದಲ್ಲಿರುವ ಬಡವರಿಗೆ ಅನುಕೂಲವಾಗಬೇಕಾದರೆ, ಪೂರ್ವ ಪ್ರಾಥಮಿಕ ಶಿಕ್ಷಣದ ವ್ಯವಸ್ಥೆ ಸುಧಾರಣೆಯಾಗಬೇಕಾಗಿದೆ. ಈಗ ಸರ್ಕಾರದವರು ಪೂರ್ವ ಪ್ರಾಥಮಿಕ ಶಾಲೆಗಳ ಪ್ರಯೋಗಗಳನ್ನು ನಡೆಸುತ್ತಿದ್ದಾರೆ. ಇಂತಹ ಕಡೆ ತರಬೇತಿ ಹೊಂದಿದ ಅಧ್ಯಾಪಕರುಗಳನ್ನು ನೇಮಿಸಬೇಕು. ಇಂತಹ ಅಧ್ಯಾಪಕರುಗಳನ್ನು ಕೆಲವು ಕಡೆ ಕೊಟ್ಟಿದ್ದಾರೆ, ಕೆಲವು ಕಡೆ ಕೊಟ್ಟಿಲ್ಲ. ತರಬೇತಿ ಹೊಂದಿದ ಅಧ್ಯಾಪಕರುಗಳನ್ನು ಇಂತಹ ಶಾಲೆಗಳಲ್ಲಿ ನೇಮಿಸಿದರೆ, ಅವರು ಮಕ್ಕಳನ್ನು ತರಬೇತಿ ಮಾಡುವುದಕ್ಕೆ ತುಂಬ ಅನುಕೂಲವಾಗುತ್ತದೆ. ಅಲ್ಲದೆ, ಇಂತಹ ಶಾಲೆಗಳಿಗೆ ಕಟ್ಟಡ ಮತ್ತು ಇತರ ಸಾಮಾನು ಸರಂಜಾಮುಗಳನ್ನು ಒದಗಿಸಬೇಕು. ಹಾಗೆ ಮಾಡಿದರೆ ಮಾತ್ರ, ಪೂರ್ವ ಪ್ರಾಥಮಿಕ ಶಿಕ್ಷಣ ಒಳ್ಳೆಯ ರೀತಿಯಲ್ಲಿ ನಡೆಯುವುದಕ್ಕೆ ಅನುಕೂಲವಾಗುತ್ತದೆ.

ಹಿಂದೆ ಇದ್ದಂತೆ ಈಗೇನೂ ಶಾಲಾ ಕಟ್ಟಡಗಳ ಅಭಾವವಿಲ್ಲ. ತಾಲ್ಲೂಕು ಅಭಿವೃದ್ಧಿ ಮಂಡಲ ಮತ್ತು ಗ್ರಾಮಸ್ಥರ ನೆರವಿನಿಂದ ಎಲ್ಲ ಗ್ರಾಮಾಂತರ ಪ್ರದೇಶಗಳಲ್ಲೂ ಕೂಡ ಆದಷ್ಟು ಮಟ್ಟಿಗೆ ಕಟ್ಟಡಗಳನ್ನು ಒದಗಿಸಲಾಗಿದೆ. ಶಾಲಾ ಕಟ್ಟಡವಿಲ್ಲದೆ ಊರು ಬಹಳ ವಿರಳ ಎಂದು ಹೇಳಿದರೆ, ಅದು ಅತಿಶಯೋಕ್ತಿಯಾಗಲಾರದು. ಸರ್ಕಾರದವರು ಹೆಚ್ಚು ಹಣವನ್ನು ಕೊಟ್ಟು ಶಾಲಾ ಕಟ್ಟಡಗಳ ನಿರ್ಮಾಣಕ್ಕಾಗಿ ಹೆಚ್ಚಿನ ಪ್ರೋತ್ಸಾಹ ಕೊಟ್ಟು ಎಲ್ಲ ಕಡೆ ಶಾಲಾ ಕಟ್ಟಡಗಳ ಸ್ಥಾಪನೆಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಅಲ್ಲದೆ, ಹಾಜರಾತಿ ವಿದ್ಯಾರ್ಥಿ ವೇತನ ಕೊಡುವುದರಿಂದ ವಿದ್ಯಾರ್ಥಿಗಳಿಗೆ ನಿಜವಾದ ಉತ್ತೇಜನ ದೊರಕಿದಂತಾಗಿ, ವಿದ್ಯೆ ಕಲಿಯಬೇಕು, ಶಾಲೆಗೆ ಹೋಗಬೇಕು ಎನ್ನುವ ಮಮತೆ ಅವರಲ್ಲಿ ಹುಟ್ಟುವುದಕ್ಕೆ ಕಾರಣವಾಗುತ್ತದೆ ಇತ್ತೀಚೆಗೆ ವಿದ್ಯಾರ್ಥಿಗಳ ಸರಾಸರಿ ಹಾಜರಾತಿಯೂ ಹೆಚ್ಚುತ್ತಿದೆ ಎಂದು . ನಾನು ಬಹಳ ಸಂತೋಷದಿಂದ ಹೇಳಬಯಸುತ್ತೇನೆ. ಬಡವರಿಗೆ ಮತ್ತು ಹಿಂದುಳಿದವರಿಗೆ ಪಠ್ಯ ಪುಸ್ತಕಗಳನ್ನು ಪುಕ್ಕಟ್ಟೆಯಾಗಿ ಕೊಡುತ್ತಿರುವುದಲ್ಲದೆ ಮಧ್ಯಾಹ್ನದ ವೇಳೆಯಲ್ಲಿ ಉಪಾಹಾರವನ್ನು ಎಲ್ಲ ಶಾಲೆಗಳಲ್ಲೂ ಒದಗಿಸಿ, ವಿದ್ಯಾರ್ಥಿಗಳಿಗೆ ಬಹಳ ಅನುಕೂಲ ಮಾಡುತ್ತಿದ್ದಾರೆ. ವರ್ಲ್ಡ್ ಫುಡ್ ಪ್ರಾಜೆಕ್ಟ್ ವತಿಯಿಂದ ಹೆಚ್ಚಿನ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುತ್ತಿರುವುದರಿಂದ, ಗ್ರಾಮಾಂತರ ಪ್ರದೇಶಗಳಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ ಸಿಕ್ಕಿದಂತಾಗಿದೆ.

ಸಂಸ್ಕೃತ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕೆಂದು ಸರ್ಕಾರದವರು ತೀರ್ಮಾನ ಕೈಕೊಂಡು ಪ್ರಾಥಮಿಕ ಶಿಕ್ಷಣ ಮಟ್ಟದಲ್ಲಿ ಸಂಸ್ಕೃತ ಕಲಿಯಲು ಹೆಚ್ಚು ಪ್ರೋತ್ಸಾಹ ಕೊಡುತ್ತಿದ್ದಾರೆ. ಸರ್ಕಾರದವರು ಪ್ರಾಥಮಿಕ ಶಾಲೆಗಳಲ್ಲಿ ಸಂಸ್ಕೃತ ಭಾಷೆಯನ್ನು ಕಲಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಮಾಡಿರುವುದು ನಿಜವಾಗಿಯೂ ನಮ್ಮ ಸಂಸ್ಕೃತಿಗೆ ಹೆಚ್ಚು ಉತ್ತೇಜನ ಕೊಟ್ಟಂತಾಗಿದೆ. ಇದನ್ನು ಸರ್ಕಾರದವರು ಮುಂದುವರಿಸಿಕೊಂಡು ಹೋಗಬೇಕು.

ಇನ್ನು ಮಾಧ್ಯಮಿಕ ಶಿಕ್ಷಣದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈಗ ಮುನಿಸಿಪಾಲಿಟಿಗಳು ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಲಗಳಿಂದ ತೆಗೆದುಕೊಂಡ ಶಾಲೆಗಳ ಸ್ಥಿತಿ ದುಸ್ಥಿತಿಯಾಗಿದೆ. ಇದಕ್ಕೆ ಕಾರಣವಿಷ್ಟೆ, ಮುನಿಸಿಪಾಲಿಟಿ ಮತ್ತು ಅಭಿವೃದ್ಧಿ ಮಂಡಲಗಳಿಂದ ಶಾಲೆಗಳನ್ನು ವಶಪಡಿಸಿಕೊಂಡು ನಾಲ್ಕೈದು ವರ್ಷಗಳಾದರೂ, ಆ ಕಟ್ಟಡಗಳ ದುರಸ್ತು ಕೆಲಸ ಮಾಡಿಲ್ಲ ; ಯಾರೂ ಕೂಡ ಅದರ ಬಗ್ಗೆ ಆಸಕ್ತಿ ವಹಿಸಿಲ್ಲ ಆದುದರಿಂದ, ಅಲ್ಲಿಂದ ತೆಗೆದುಕೊಂಡ ಶಾಲೆಗಳ ವ್ಯವಸ್ಥೆ ಪರಿಪೂರ್ಣವಾಗಿಲ್ಲ ಎಂದು ಹೇಳಬೇಕಾಗಿದೆ. ಅವರಿಂದ ಶಾಲೆಗಳನ್ನು ಸರ್ಕಾರದವರು ವಹಿಸಿಕೊಂಡ ಮೇಲೆ, ಆ ಶಾಲಾ ಕಟ್ಟಡಗಳ ದುರಸ್ತಿಪಡಿಸಬೇಕಾದ್ದು ಸ್ವಾಭಾವಿಕ. ಅಲ್ಲದೆ, ಆ ಶಾಲೆಗಳ ನೇಮಕಾತಿ ನಿಯಮಗಳನ್ನು ಸುವ್ಯವಸ್ಥಿತಗೊಳಿಸಬೇಕಾಗಿದೆ. ಈ

ಶಾಲೆಗಳಲ್ಲಿರುವ ಅಧ್ಯಾಪಕರ ವರ್ಗಾವಣೆಗೆ ಅವಕಾಶವಿರಬೇಕು. ಹತ್ತಾರು ವರ್ಷಗಳ ಕಾಲ ಒಂದೇ ಶಾಲೆಯಲ್ಲಿ ಕೆಲಸ ಮಾಡಿ ಬೇಸತ್ತ ಉಪಾಧ್ಯಾಯ ಸ್ವಯಂ ಪ್ರೇರಣೆಯಿಂದ ಇನ್ನೊಂದು ಶಾಲೆಗೆ ವರ್ಗ ಬಯಸಿದರೆ, ಇಲಾಖೆಯವರು ಅವರನ್ನು ವರ್ಗ ಮಾಡುವ ಪರಿಪಾಠ ಇಟ್ಟುಕೊಳ್ಳಬೇಕು. ಈ ರೀತಿ ಎಲ್ಲ ವ್ಯವಸ್ಥೆಗಳನ್ನೂ ಅಭಿವೃದ್ಧಿ ಮಂಡಲಿ ಮತ್ತು ಮುನಿಸಿಪಾಲಿಟಿಗಳಿಂದ ವಹಿಸಿಕೊಂಡ ಶಾಲೆಗಳಿಗೆ ಒದಗಿಸಿ, ಅವುಗಳನ್ನು ಪರಿಪೂರ್ಣವಾದ ರೀತಿಯಲ್ಲಿ ನಡೆಸಿಕೊಂಡು ಬರಬೇಕೆಂದು ಹೇಳಬಯಸುತ್ತೇನೆ.

ಪಠ್ಯ ಪುಸ್ತಕ ಇಲಾಖೆ ಚೆನ್ನಾಗಿ ಕೆಲಸ ಮಾಡುತ್ತಿದೆ. ಅವರು ಸಕಾಲದಲ್ಲಿ ಪಠ್ಯ ಪುಸ್ತಕಗಳನ್ನು ಅಚ್ಚು ಮಾಡಿ ಒದಗಿಸುತ್ತಿದ್ದಾರೆ. ಆದರೂ ಶಾಲೆಗಳು ತೆರೆದ ಒಡನೆಯೇ ಪಠ್ಯ ಪುಸ್ತಕಗಳನ್ನು ಒದಗಿಸಿದರೆ ಹೆಚ್ಚು ಅನುಕೂಲವಾಗುತ್ತದೆಂದು ಹೇಳಬಯಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಪೇಟೆಗೆ ಹೋಗೋಣ, ಏಳನೇ ತರಗತಿ ಪುಸ್ತಕ ಕೊಡಿಸುತ್ತೀರಾ ?

ಶ್ರೀ ಮಾರ್ಗದ ಮಲ್ಲಪ್ಪ.—ನಮ್ಮ ಊರಿಗೆ ಬನ್ನಿ, ನಿಮಗೆ ಯಾವ ಪುಸ್ತಕ ಬೇಕಾದರೂ ಕೊಡಿಸುತ್ತೇನೆ. ನೀವು ಪುಸ್ತಕಗಳಿಲ್ಲದ ಕಡೆ ಹೋಗಿ ಪ್ರಯತ್ನ ಮಾಡಿದಿರಿ ಎಂದು ಕಾಣುತ್ತದೆ ! ದಯವಿಟ್ಟು ಹಾಗೆ ಮಾಡಬೇಡಿ. ಕಾಲೇಜುಗಳ ಬಗ್ಗೆ ಮಾನ್ಯ ಕೋಣಂದೂರು ಲಿಂಗಪ್ಪನವರಿಗೆ ಹೆಚ್ಚು ಅನುಭವವಿದೆ. ಇಂದು ಖಾಸಗಿ ಕಾಲೇಜುಗಳನ್ನು ನಡೆಸುವುದು ಬಹಳ ಕಷ್ಟ. ಸರ್ಕಾರದವರು ಕೊಡುವ ಎಂಭತ್ತು ಪರ್ಸೆಂಟ್ ಅನುದಾನದ ಜೊತೆಗೆ ಎಲ್ಲ ಖರ್ಚು-ವೆಚ್ಚಗಳನ್ನು ಸರಿದೂಗಿಸಿ ಅಧ್ಯಾಪಕರುಗಳಿಗೆ ಪೂರ್ಣ ಸಂಬಳವನ್ನು ಕೊಡುವುದಲ್ಲದೆ, ಸರ್ಕಾರದ ಹಲವು ನಿಯಮಗಳನ್ನು ತಪ್ಪದೆ ಖಾಸಗಿ ಕಾಲೇಜುಗಳು ಪಾಲಿಸಬೇಕಾಗಿದೆ. ಇಲ್ಲದಿದ್ದರೆ, ಅವು ಉಳಿಯಲಿಕ್ಕೆ ಸಾಧ್ಯವಿಲ್ಲ. ಈ ರೀತಿಯ ವ್ಯವಸ್ಥೆಯಲ್ಲಿ ಅವು ನಡೆಯುವುದು ಬಹಳ ಕಷ್ಟ. ಮಾನ್ಯ ಮಂತ್ರಿಗಳಿಗೂ ಇದರ ಕಹಿ ಅನುಭವವಿದೆ. ಅವರೂ ಒಂದು ಕಾಲೇಜನ್ನು ನಡೆಸಿಕೊಂಡು ಬಂದಿದ್ದಾರೆ ; ಅದರ ಕಷ್ಟನಷ್ಟ ಅರಿತಿದ್ದಾರೆ. ಖಾಸಗಿ ಕಾಲೇಜುಗಳ ಹಣವನ್ನು ಕೂಡಿಟ್ಟುಕೊಂಡು ಕಟ್ಟಡವನ್ನು ಕಟ್ಟುತ್ತೇವೆ ಎಂದು ಮುಂದೆ ಬಂದಾಗ, ಸರ್ಕಾರ ಅವುಗಳಿಗೆ ಉದಾರವಾಗಿ ಕಾನೂನಿನ ಚೌಕಟ್ಟಿನಲ್ಲಿ ಅನುದಾನ ಕೊಡಬೇಕು. ಈ ರೀತಿ ಪ್ರೋತ್ಸಾಹ ನೀಡದಿದ್ದರೆ, ಖಾಸಗಿ ಕಾಲೇಜುಗಳು ಉಳಿಯುವುದು ಬಹಳ ಕಷ್ಟ. ನಮ್ಮ ಬೀರೂರಿನಲ್ಲಿರುವ ಕಾಲೇಜಿನ ಬಗ್ಗೆ ನಾನು ಇಲ್ಲಿ ಅನೇಕ ಸಲ ಪ್ರಸ್ತಾಪ ಮಾಡಿದ್ದೇನೆ. ಅಲ್ಲಿ ಪಿ.ಜಿ.ಎಂ. ಎನ್ನುವ ಸಂಸ್ಥೆ ಕಳೆದ 8-9 ವರ್ಷಗಳಿಂದ ಒಂದು ಕಾಲೇಜನ್ನು ನಡೆಸಿಕೊಂಡು ಬರುತ್ತಿದೆ. ಪಿ.ಯು.ಸಿ. ಮತ್ತು ಡಿಗ್ರಿ ತರಗತಿಗಳು ಅಲ್ಲಿ ನಡೆಯುತ್ತಿವೆ, ಸುಮಾರು ಆರುನೂರು ವಿದ್ಯಾರ್ಥಿಗಳಿದ್ದಾರೆ. ಸರ್ಕಾರದವರು ಅದಕ್ಕೆ ಜಮೀನನ್ನೂ ಸಹ ಒದಗಿಸಿಕೊಟ್ಟಿದ್ದಾರೆ. ಆ ಸಂಸ್ಥೆಯವರು ಈಗಾಗಲೇ ಒಂದು ಲಕ್ಷ ರೂಪಾಯಿಗಳನ್ನು ಕೂಡಿಟ್ಟುಕೊಂಡಿದ್ದಾರೆ. ಅವರು ಸರ್ಕಾರದ ಭಾಗವನ್ನು ಕೇಳಿದ್ದಾರೆ, ಆದರೆ ಅದಿನ್ನೂ ಇತ್ಯರ್ಥವಾಗಿಲ್ಲ. ಜಮೀನಿದೆ, ಸಂಸ್ಥೆಯವರು ಹಣ ನೀಡಲು ಮುಂದೆ ಬಂದಿದ್ದಾರೆ. ಹೀಗಿದ್ದರೂ ಸರ್ಕಾರದವರು ಈ ಬಗ್ಗೆ ಉದಾಸೀನ ಮಾಡುವುದು ಸರಿಯಲ್ಲ ಇದಕ್ಕಾಗಿ ವರ್ಷೇ ವರ್ಷೇ ಎಷ್ಟು ಹಣವನ್ನು ಒದಗಿಸಬೇಕೆಂದು ಮೊದಲೆ ಯೋಚನೆ ಮಾಡಿ, ಅಷ್ಟನ್ನು ಇಲಾಖೆಯವರು ತೆಗೆದಿಡುವ ವ್ಯವಸ್ಥೆಯಾಗಬೇಕು. ಹಾಗೆ ತೆಗೆದಿಡಲಾದ ಹಣವನ್ನು ಗ್ರಾಮಾಂತರ ಪ್ರದೇಶಗಳಲ್ಲಿನ ಕಾಲೇಜುಗಳಿಗೆ ವಿನಿಯೋಗಿಸಿ, ಅವುಗಳಿಗೆ ಹೆಚ್ಚಿನ ರೀತಿಯಲ್ಲಿ ಸಹಾಯ ಮಾಡಬೇಕೆಂದು ಹೇಳಬಯಸುತ್ತೇನೆ.

ಗ್ರಂಥಾಲಯ ಇಲಾಖೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಈ ಇಲಾಖೆಯ ಬೆಳವಣಿಗೆ ಚೆನ್ನಾಗಿದೆ, ಅಲ್ಲದೆ ಈ ಇಲಾಖೆ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ಈ ಇಲಾಖೆಯ ಮುಖ್ಯಾಧಿಕಾರಿಗಳೂ, ಸುರಿತವರೂ, ಅನುಭವಸ್ಥರೂ ಅನೇಕ ಪುಸ್ತಕಗಳನ್ನು ಬರೆದು ಪ್ರಕಟಿಸಿದ್ದಾರೆ ಅವರ ಬಗ್ಗೆ ದೊಡ್ಡದಾಗಿ ಪ್ರಿಂಟ್ ಮಾಡಿ ಎಲ್ಲಾ ಕಡೆ ಹಂಚಿದ್ದಾರೆ, ಬಹುಶಃ ಸದಸ್ಯರುಗಳಿಗೂ ಕೊಟ್ಟಿದ್ದಾರೆಂದು ಕಾಣುತ್ತದೆ. ಆ ವಿಚಾರವನ್ನು ಇಲ್ಲಿ ಓದುತ್ತೇನೆ. ಗ್ರಂಥಾಲಯದ ಮುಖ್ಯಾಧಿಕಾರಿಗಳಾಗಿದ್ದ ಟಿ.ಬಿ. ಚನ್ನಗಂಗಪ್ಪನವರು, ಈಗ ವಿಧಾನಮಂಡಲದ ಕಾರ್ಯಾಲಯದಲ್ಲಿ ಅಧೀನ ಕಾರ್ಯದರ್ಶಿಯಾಗಿದ್ದಾರೆ. ಇವರು ಅನೇಕ ಅವ್ಯವಹಾರಗಳನ್ನು ಮಾಡಿದ್ದಾ

ರೆಂದು ಆರೋಪಿಸಿದ್ದಾರೆ. ಸಾರ್ವಜನಿಕ ಹಿತದೃಷ್ಟಿಯಿಂದ ಟಿ.ಬಿ. ಚನ್ನಗಂಗಪ್ಪನವರ ಮೇಲೆ ಸೂಕ್ತ ಕ್ರಮ ಕೈಗೊಳ್ಳತಕ್ಕದ್ದು ಎಂದು ಇದೆ. ಲೋಪದೋಷಗಳು ಇದ್ದರೆ, ಲೆಕ್ಕಪರಿಶೋಧಕರು ತಪ್ಪುಗಳನ್ನು ಬೆಳಕಿಗೆ ತಂದರೆ ಸೂಕ್ತಕ್ರಮವನ್ನು ಸರ್ಕಾರ ಕೈಗೊಳ್ಳಬಹುದು. ಒಬ್ಬರ ಮೇಲೆ ಇನ್ನೊಬ್ಬರು ಅಪಾದನೆ ಮಾಡಿಕೊಂಡು ಹೋದರೆ. ಪ್ರಾಮಾಣಿಕತೆ ಕಡಿಮೆ ಆಗುವುದಕ್ಕೆ ಅವಕಾಶವಾಗುತ್ತದೆ, ಗ್ರಾಮಾಂತರ ಪ್ರದೇಶದಲ್ಲಿ ಈ ಇಲಾಖೆ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ, ಜಿಲ್ಲಾ ಕೇಂದ್ರಗಳಲ್ಲಿ, ತಾಲ್ಲೂಕು ಕೇಂದ್ರಗಳಲ್ಲಿ ಹಾಗೂ ಹೋಬಳಿ ಕೇಂದ್ರಗಳಲ್ಲಿ ಅನೇಕ ಗ್ರಂಥಾಲಯಗಳನ್ನು ತೆರೆದಿದ್ದು, ಇವತ್ತು ಜನತೆ ಅದರ ಉಪಯೋಗವನ್ನು ಪಡೆಯುತ್ತಿದ್ದಾರೆ. ಈ ಇಲಾಖೆಗೆ ಬೇಕಾದ ಹಣಕಾಸಿನ ಹಾಗೂ ಇತರ ಸವಲತ್ತುಗಳನ್ನು ಸರ್ಕಾರ ಒದಗಿಸಬೇಕೆಂದು ಹೇಳುತ್ತೇನೆ. ಸರ್ಕಾರ ಪ್ರತ್ಯೇಕವಾಗಿ ಹಣ ಕೊಡಬೇಕಾಗಿಲ್ಲ ಈಗಾಗಲೇ ಲೈಬ್ರರಿ ತೆರಿಗೆಯನ್ನು ಹಾಕುತ್ತಿದ್ದೀರಿ, ಅದರಿಂದ ಲಕ್ಷಾಂತರ ರೂಪಾಯಿ ಸರ್ಕಾರಕ್ಕೆ ಬರುತ್ತಿದೆ ಈ ಇಲಾಖೆಯಲ್ಲಿ ತಪ್ಪು ಇದ್ದರೆ, ತಪ್ಪಿತಸ್ತರು ಯಾರು ಎಂಬುದನ್ನು ಕಂಡುಹಿಡಿದು, ಸರ್ಕಾರ ಅಂಥವರ ಮೇಲೆ ಉಗ್ರಕ್ರಮ ಕೈಗೊಳ್ಳುತ್ತಾರೆನ್ನುವ ನಂಬಿಕೆ ಇದೆ. ನಾನು ಯಾರ ಪರವಾಗಿಯೂ ಮಾತನಾಡುತ್ತಿಲ್ಲ, ಒಳ್ಳೆಯ ಕೆಲಸ ಮಾಡಿದವರಿಗೆ ಪ್ರೋತ್ಸಾಹ ಸಿಗಬೇಕು, ಯಾರು ತಪ್ಪು ಮಾಡುತ್ತಾರೆ, ಅವರಿಗೆ ಶಿಕ್ಷೆ ಆಗಲೇಬೇಕು.

ಇನ್ನು ಗ್ರಾಮಾಂತರ ಪ್ರದೇಶದಲ್ಲಿ ಪ್ರೌಢಶಾಲೆಗಳನ್ನು ತೆರೆಯಬೇಕಾದರೆ, 50 ಸಾವಿರ ರೂಪಾಯಿಗಳ ವಂತಿಗೆ ಕೊಡಬೇಕೆಂದು ಸರ್ಕಾರದವರು ತೀರ್ಮಾನಮಾಡಿದ್ದಾರೆ. ತಮಗೆ ಬೇಕಾದ ಕಡೆ ಸರ್ಕಾರಿ ಪ್ರೌಢಶಾಲೆಗಳನ್ನು ಕೊಡುತ್ತೀರಿ, ಪಕ್ಷಪಾತವಿಲ್ಲದ ರೀತಿಯಲ್ಲಿ ವರ್ಷಕ್ಕೆ 10-15 ಸರ್ಕಾರಿ ಪ್ರೌಢ ಶಾಲೆಗಳನ್ನು ಪ್ರಾರಂಭ ಮಾಡಿ ಯಾವುದಾದರು ಸಂಘ ಸಂಸ್ಥೆಗಳು ವಿದ್ಯಾಸೌಕರ್ಯವನ್ನು ಕೊಡುವುದಕ್ಕೆ ಮುಂದೆ ಬಂದರೆ ಅಂಥ ಸಂಸ್ಥೆಗಳಿಗೆ ಸರ್ಕಾರ ಎಲ್ಲ ರೀತಿಯ ನೆರವನ್ನು ಒದಗಿಸಬೇಕೆಂದು ಹೇಳುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಪಂಚಾಯಿತಿಗಳೇ ಆಗಲೀ, ಯಾವುದೇ ರೀತಿಯ ಸಂಸ್ಥೆಗಳಾಗಲೀ ಅವುಗಳಿಗೆ ಉತ್ಪತ್ತಿಯೇ ಇಲ್ಲದಿರುವಾಗ 50 ಸಾವಿರ ರೂಪಾಯಿಗಳನ್ನು ಕಟ್ಟಿ, ಹೈಸ್ಕೂಲುಗಳನ್ನು ತೆರೆಯುವುದಕ್ಕೆ ಸಾಧ್ಯವಾಗುತ್ತದೆಯೆ ಎಂಬುದನ್ನು ಸರ್ಕಾರ ಯೋಚನೆ ಮಾಡಬೇಕು. 5 ವರ್ಷಗಳ ಕಾಲ ಗ್ರಾಂಟನ್ನು ಕೂಡ ಕೊಡುವುದಿಲ್ಲ. ಇದನ್ನು ಮೂರು ವರ್ಷಗಳಿಗೆ ಇಳಿಸಬೇಕೆಂದು ಹೇಳುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಅಧಿಕಾರಿಗಳು ನಾವು ಏನು ಮಾಡುವುದಕ್ಕೆ ಆಗುತ್ತದೆ, ಸರ್ಕಾರ ತೀರ್ಮಾನ ಮಾಡಿದೆ ಎಂದು ಹೇಳುತ್ತಾರೆ. ಹೋದ ಸರ್ಕಾರ ಈ ವಿಚಾರದಲ್ಲಿ ಒಪ್ಪಿತ್ತು, ಆದರೆ ಅದು ಇತ್ತೀಚೆಗೆ ಬೆಳಕಿಗೆ ಬರಲಿಲ್ಲ. 5 ವರ್ಷಗಳ ಕಾಲ ಗ್ರ್ಯಾಂಟ್ ಕೊಟ್ಟು, ಎಷ್ಟೋ ಶಾಲೆಗಳನ್ನು ತೆರೆದರೂ ಕೂಡ ಇವತ್ತು 100ಕ್ಕೆ 30 ಜನಕ್ಕೆ ಮಾತ್ರ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನರಿಗೆ ವಿದ್ಯಾಭ್ಯಾಸ ಸೌಕರ್ಯ ಇಲ್ಲ. ಇನ್ನೂ 70 ಭಾಗದ ಜನಕ್ಕೆ ವಿದ್ಯಾಭ್ಯಾಸದ ಸೌಕರ್ಯ ದೊರೆಯಬೇಕಾದರೆ, ಸಂಘ ಸಂಸ್ಥೆಗಳು ಒಟ್ಟಿಗೆ ಕೆಲಸ ಮಾಡಿದರೆ ಮಾತ್ರ ಸಾಧ್ಯ ಎಂಬುದನ್ನು ಸರ್ಕಾರ ಮನಗಾಣಬೇಕು, ಸರ್ಕಾರ 50 ಸಾವಿರ ರೂಪಾಯಿ ವಂತಿಗೆ ಕೊಡಬೇಕೆಂದು ತೀರ್ಮಾನವನ್ನು ಕೈಕೊಂಡು ಖಾಸಗೀ ಶಾಲೆಗಳಿಗೆ ಪ್ರೋತ್ಸಾಹವನ್ನೇ ನಿಲ್ಲಿಸಿದೆ. ಸರ್ಕಾರ ಮಾಡಿರತಕ್ಕ ತೀರ್ಮಾನ ಕಣ್ಣಿಗೆ ಚುಚ್ಚುವಂತಾಗಿದೆ. ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯಾಭ್ಯಾಸದ ಸೌಕರ್ಯ ಅಭಿವೃದ್ಧಿಯಾಗಬೇಕಾದರೆ, ಸರ್ಕಾರ ಖಾಸಗೀ ಶಾಲೆಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ.

ತರೀಕೆರೆ ತಾಲ್ಲೂಕಿನಲ್ಲಿ ರಂಗೇನಹಳ್ಳಿ ಎನ್ನುವ ಗ್ರಾಮ ಇದೆ. ಅಲ್ಲಿ ಒಂದು ಪ್ರೌಢಶಾಲೆಗಾಗಿ ಕಳೆದ ವರ್ಷದಿಂದ ಸಾವಿರಾರು ರೂಪಾಯಿಗಳನ್ನು ಕೂಡಿಟ್ಟುಕೊಂಡು ಸುಮ್ಮನೆ ಇದ್ದಾರೆ ಇವತ್ತು ಅವರು ಐವತ್ತು ಸಾವಿರ ರೂಪಾಯಿಗಳನ್ನು ಕೊಡುವುದಕ್ಕೂ ಕೂಡ ಸಿದ್ಧವಾಗಿದ್ದಾರೆ. ದಯವಿಟ್ಟು ಸರ್ಕಾರ ಕೂಡಲೇ ಅಲ್ಲಿಗೆ ಒಂದು ಪ್ರೌಢಶಾಲೆಯನ್ನು ಮಂಜೂರು ಮಾಡಿಕೊಡಬೇಕೆಂದುಬಹಳ ಕಳಕಳಿಯಿಂದಪ್ರಾರ್ಥಿಸಿಕೊಳ್ಳುತ್ತೇನೆ. ಇವತ್ತು ಸರ್ಕಾರ ರಾಜ್ಯದ ಉತ್ಪತ್ತಿ ಯಲ್ಲಿ ಸುಮಾರು ನಾಲ್ಕನೇ ಒಂದು ಭಾಗ ಹಣವನ್ನು ವಿದ್ಯಾಭ್ಯಾಸಕ್ಕೋಸ್ಕರ ಖರ್ಚು ಮಾಡುತ್ತಿದೆ. ದಕ್ಷತೆಯಿಂದ ಹಾಗೂ ಪ್ರಾಮಾಣಿಕತೆಯಿಂದ ಎಲ್ಲಾ ಇಲಾಖೆಗಳು ಚೆನ್ನಾಗಿ ಕೆಲಸ ಮಾಡಿದಾಗ

ನಮ್ಮ ದೇಶದಲ್ಲಿರತಕ್ಕ ಇನ್ನೂ 70 ಭಾಗದ ಜನರ ಚಿತ್ರವನ್ನು ಕಣ್ಣಮುಂದೆ ಇಟ್ಟುಕೊಂಡು, ಅವರ ಅಭಿವೃದ್ಧಿಗೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ನನಗೆ ಮಾತನಾಡಲು ಸಮಯ ಕೊಟ್ಟಂತ ಅಧ್ಯಕ್ಷರಿಗೆ ಹೃತ್ಪೂರ್ವಕವಾಗಿ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಸಭಾಧ್ಯಕ್ಷರೇ, ಇಂದು ನಮ್ಮ ಮುಂದೆ ಮಂಡಿಸಿರತಕ್ಕ ಡಿಮ್ಯಾಂಡ್ ನಂ. 0-22ರ ಬೇಡಿಕೆಯನ್ನು ಈ ಕಾರಣಗಳಿಗಾಗಿ ವಿರೋಧಿಸಬೇಕಾಗಿದೆ. ಮೊದಲನೆಯದಾಗಿ ಈ ವಿದ್ಯಾಭ್ಯಾಸ ಇಲಾಖೆಯಲ್ಲಿ ಸರ್ಕಾರ ವರ್ಷ ವರ್ಷವೂ ಸಾಕಷ್ಟು ಹಣವನ್ನು ಹೆಚ್ಚಿಗೆ ಖರ್ಚು ಮಾಡುತ್ತಿದೆ. ಇದರಿಂದ ಕಲಿಯತಕ್ಕ ಶಾಲೆ . ಸಂಖ್ಯೆ ಜಾಸ್ತಿಯಾಗಿದೆ, ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿಯಾಗಿದೆ ಹಾಗೂ ಉಪಾಧ್ಯಾಯರ ಸಂಖ್ಯೆ ಜಾಸ್ತಿಯಾಗಿದೆ. ಆದರೆ ವಿದ್ಯಾಭ್ಯಾಸದ ಮಟ್ಟ ಮಾತ್ರ ಬಹಳ ಕಡಿಮೆಯಾಗಿದೆ. ಇದು ಒಂದು ಕ್ವಾಂಟಿಟಿ ಎಜುಕೇಷನ್ ಆಗಿದೆಯೇ ಹೊರತು, ಕ್ವಾಲಿಟಿ ಎಜುಕೇಷನ್ ಆಗದೇ ಇರತಕ್ಕದ್ದು ಬಹಳ ಶೋಚನೀಯವಾದ ವಿಚಾರ. ಜೊತೆಗೆ ವಿದ್ಯಾಭ್ಯಾಸ ಎಷ್ಟು ಪ್ರಯತ್ನ ಪಟ್ಟರೂ ಬರೀ ಕೆಲಸ ಒದಗಿಸತಕ್ಕ ವಿದ್ಯಾಭ್ಯಾಸವಾಗಿದೆ, ಕಾಲೇಜುಗಳಿಂದ ಹಾಗೂ ಸ್ಕೂಲುಗಳಿಂದ ಸರ್ಟಿಫಿಕೇಟ್‌ಗಳನ್ನು ಮತ್ತು ಡಿಗ್ರಿಗಳನ್ನು ಪಡೆಯತಕ್ಕ ಹಾಗೂ ವಿದ್ಯಾರ್ಥಿಗಳನ್ನು ತಯಾರು ಮಾಡತಕ್ಕ ಫ್ಯಾಕ್ಟರಿಗಳಾಗಿವೆಯೇ ಹೊರತು, ನಿಜವಾಗಿಯೂ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸವನ್ನು ಕೊಡದೇ ಇರತಕ್ಕದ್ದು ಬಹಳ ಶೋಚನೀಯವಾದ ವಿಚಾರ.

ಅಲ್ಲದೆ ಹರಿಜನ ಗಿರಿಜನ ಮಕ್ಕಳಿಗೆ ಒದಗಿಸುವ ಸೌಲಭ್ಯವೂ ಆ ಜಾತಿಯಲ್ಲಿ ಕೆಲವು ಮುಂದುವರಿದ ಮನೆತನದವರಿಗೆ ಮೀಸಲಾಗಿದ್ದು, ಇನ್ನೂ ಬಹಳ ಮಂದಿ ಹರಿಜನ ಗಿರಿಜನರು ಅವಿದ್ಯಾವಂತರಾಗಿರತಕ್ಕದು ಬಹಳ ಶೋಚನೀಯವಾದ ವಿಚಾರ. ಎಲ್ಲಿಯವರೆಗೆ ಹರಿಜನ ಗಿರಿಜನ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸ ಸಿಗುವುದಿಲ್ಲವೋ ಅಲ್ಲಿಯವರೆಗೆ ಅವರ ಉನ್ನತಿಯಾಗುವುದಿಲ್ಲ ಎಂದು ನಾನು ಹೇಳುತ್ತೇನೆ. ಸರ್ಕಾರ ಅವಿದ್ಯಾವಂತರ ಕಡೆ ಹೆಚ್ಚು ಗಮನಹರಿಸಬೇಕು. ಅನುಕೂಲಸ್ಥ ತಾಯಿ ತಂದೆಗಳು ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸದ ವ್ಯವಸ್ಥೆಯನ್ನು ಮಾಡಿಸುತ್ತಾರೆ. ಆದರೆ ಗುಡಿಸಲುಗಳಲ್ಲಿ ವಾಸ ಮಾಡತಕ್ಕ ಸಾಧಾರಣವಾದ ತಂದೆ ತಾಯಿಗಳು ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸದ ವ್ಯವಸ್ಥೆಯನ್ನು ಮಾಡುವುದಕ್ಕೆ ಹೋಗುವುದಿಲ್ಲ. ಅವರಿಗೆ ಬೇಕಾದ ಎಲ್ಲ ವ್ಯವಸ್ಥೆಯನ್ನು ಒದಗಿಸಿಕೊಟ್ಟರೂ ಕೂಡ ಇವತ್ತು ಆ ಮಕ್ಕಳು ಶಾಲೆಗೆ ಹೋಗದೆ ಇರತಕ್ಕದ್ದನ್ನು ನಾವು ಕಾಣುತ್ತಿದ್ದೇವೆ.

ಉಪಾಧ್ಯಕ್ಷರು.—ಸರಿಯಾದ ಹಾಗೂ ಸೂಕ್ತವಾದ ಕಾರಣಗಳು ಇದ್ದರೆ ಕೊಡಿ.

ಶ್ರೀ ಟಿ. ಆರ್. ಶಾಮಣ್ಣ.—ಈಗ ನನ್ನ ಮನೆಯ ಹತ್ತಿರ ಕೆಲವು ಗುಡಿಸಲುಗಳು ಇವೆ, ಅಲ್ಲಿರತಕ್ಕ ಮಕ್ಕಳು 6-7 ವರ್ಷದವರಾಗಿದ್ದಾಗಲೇ ಅವರನ್ನು ಕೆಲಸಕ್ಕೆ ಕರೆದುಕೊಂಡು ಹೋಗುತ್ತಾರೆ. ಅಂಥ ಕಡೆ ತಂದೆ ತಾಯಿಗಳಿಗೆ ಇನ್‌ಸೆಂಟೀವ್ ಆದರೂ ಕೊಟ್ಟು ಮಕ್ಕಳನ್ನು ಕಡ್ಡಾಯವಾಗಿ ಓದಿಸಲೇಬೇಕು ಎಂಬ ನಿಯಮವನ್ನು ಇಟ್ಟರೆ ಆದರಿಂದ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಏಕೆಂದರೆ ಇದರ ಬಗ್ಗೆ ಸರಿಯಾದ ಒಂದು ಅಧ್ಯಯನವಾಗಲೀ, ಪ್ರಯತ್ನವಾಗಲಿ ಇದುವರೆವಿಗೂ ನಡೆದಿಲ್ಲ. ಇದಕ್ಕೆ ಮುಖ್ಯಕಾರಣ ಏನೆಂದರೆ ವಿದ್ಯಾವಂತರಾಗಿರತಕ್ಕವರು ಹಾಗೂ ಅವರ ಮುಖಂಡರುಗಳು ಕಾರಣಕರ್ತರು ಎಂದು ನಾನು ತಿಳಿದುಕೊಂಡಿದ್ದೇನೆ. ಅವರು ತಮ್ಮ ಅನುಕೂಲವನ್ನು ಮಾತ್ರ ನೋಡಿಕೊಳ್ಳುತ್ತಾರೆ; ತಮಗಿಂಥ ಕೆಳಮಟ್ಟದಲ್ಲಿರತಕ್ಕವರ ಕಡೆ ಗಮನ ಹರಿಸುವುದಿಲ್ಲ. ಇದರಲ್ಲಿ ನಮ್ಮ ಭಾಗ ಮತ್ತು ನಿಮ್ಮ ಭಾಗ, ಇಬ್ಬರದೂ ಸೇರಿಕೊಂಡಿದೆ, ಇವೊತ್ತು ಓದದೇ ಇರತಕ್ಕಂತಹ ಮಕ್ಕಳಿಗೆ ಸರಿಯಾದ ರೀತಿಯಲ್ಲಿ ವಿದ್ಯಾಭ್ಯಾಸ ಕೊಡದೇ ಹೋದರೆ ನಾವು ಮಾಡತಕ್ಕ ಪ್ರಯೋಜನ ಸಫಲವಾಗುವುದಿಲ್ಲ. ಇನ್ನು ಈ ಖಾಸಗಿ ಸಂಸ್ಥೆಗಳಲ್ಲಿ, ವಿದ್ಯಾಭ್ಯಾಸ ಮಾಡತಕ್ಕ ಬಗ್ಗೆ, ಮತ್ತು ಸರ್ಕಾರಿ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡತಕ್ಕ ಬಗ್ಗೆ ಒಂದು ಮುಖ್ಯವಾದ ಸಮಸ್ಯೆ ಇದೆ. ಈಗ ಅನೇಕ ಖಾಸಗಿ ಶಾಲೆಗಳ ಮೇಲೆ ಸಾಕಾದಷ್ಟು ಆರೋಪ ಇದೆ; ಇವೊತ್ತು ಖಾಸಗಿ ಶಾಲೆಗಳು ವ್ಯಾಪಾರಿ ಸಂಸ್ಥೆಗಳಾಗಿ ಒಂದು ಕಡೆ ಮಕ್ಕಳ ತಂದೆತಾಯಿಗಳನ್ನು ಶೋಷಣೆ ಮಾಡುತ್ತಾರೆ, ಇನ್ನೊಂದು ಕಡೆ ಸರ್ಕಾರವನ್ನು ಶೋಷಣೆ ಮಾಡುತ್ತಾರೆ, ಮತ್ತೊಂದು ಕಡೆ ಮಾಸ್ಟರುಗಳನ್ನು ಶೋಷಣೆ ಮಾಡುತ್ತಾರ, ಈ

ಖಾಸಗಿ ಶಾಲೆಯನ್ನು ನಡೆಸತಕ್ಕವರು ವ್ಯಾಪಾರ ಮನೋಭಾವದಿಂದ ತಾವು ಹೆಚ್ಚಿನ ಅನುಕೂಲ ಪಡೆಯುತ್ತಾರೆ ಎನ್ನುವ ದೂರು ಇದೆ. ಇದರಲ್ಲಿ ಸತ್ಯಾಂಶವೂ ಕೂಡ ಇದೆ. ಇನ್ನು ಕೆಲವು ಖಾಸಗಿ ಸಂಸ್ಥೆಗಳು ಚೆನ್ನಾಗಿ ಕೆಲಸ ಮಾಡತಕ್ಕವು ಇವೆ, ಆದ್ದರಿಂದ ಅಂತಹ ಖಾಸಗಿ ಶಾಲೆಗಳ ತಲೆ ಮೇಲೆ ಗೂಬೆ ಕೂರಿಸುವುದು ಒಳ್ಳೆಯದಲ್ಲ. ಇವೊತ್ತು ಡೊನೇಷನ್ ವಸೂಲು ಮಾಡತಕ್ಕ ಶಾಲೆಗಳ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಾ? ತಮಿಳುನಾಡಿನಲ್ಲಿ ಬೇಕಾದಷ್ಟು ಕಾಯಿದೆಗಳನ್ನು ಈ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆ ಮಾಡಿದ್ದಾರೆ. ಆದರೆ ನಮ್ಮ ಲಾ ಡಿಪಾರ್ಟ್‌ಮೆಂಟ್‌ನವರು ಮನಸ್ಸು ಕೊಡದೆ ಇದಕ್ಕೆ ತೊಡಕು ತರುತ್ತಿದ್ದಾರೆ. ಇದರ ಬಗ್ಗೆ ಮಲ್ಲಾರಾಧ್ಯ ಕಮಿಟಿ ರಿಪೋರ್ಟ್ ಬಂದಿದೆ, ಆದರೂ ಕೂಡ ಸರಿಯಾದ ರೀತಿಯಲ್ಲಿ ಒಂದು ಹಿಡಿತದಲ್ಲಿ ಇಟ್ಟುಕೊಳ್ಳುವುದಕ್ಕೆ, ಯಾವುದೇ ಪರಿಣಾಮಕಾರಿಯಾದ ಕೆಲಸವಾಗಿಲ್ಲ ಇವೊತ್ತು ನನ್ನ ಮಕ್ಕಳು ಮೆಡಿಕಲ್ ಕಾಲೇಜು, ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ, ನನ್ನ ಮೊಮ್ಮಕ್ಕಳು ನರ್ಸರಿ ಸ್ಕೂಲನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಇವೊತ್ತು ಏನಾಗಿದೆ ಎಂದರೆ ನನ್ನ ಮಕ್ಕಳು ಮೆಡಿಕಲ್ ಕಾಲೇಜು ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಏನು ವಿದ್ಯಾಭ್ಯಾಸ ಮಾಡುತ್ತಿದ್ದಾರೆ, ಅವರ ಖರ್ಚು ಏನು ಆಗುತ್ತದೆ, ಅದಕ್ಕಿಂಥ ಹೆಚ್ಚು ಖರ್ಚು ನನ್ನ ಮೊಮ್ಮಕ್ಕಳ ನರ್ಸರಿ ಪ್ರೈಮರಿ ಸ್ಕೂಲು ವಿದ್ಯಾಭ್ಯಾಸಕ್ಕೆ ಆಗುತ್ತದೆ, ಆದುದರಿಂದ ಇದರ ಬಗ್ಗೆ ಇನ್ನು ಹೆಚ್ಚು ಕಾಲ ಉದಾಸೀನ ಮಾಡದೆ ಇದರ ಬಗ್ಗೆ ಯಾವುದಾದರೂ ಒಂದು ರೀತಿಯಲ್ಲಿ ಒಳ್ಳೆಯ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಇದು ಏನಾಗಿದೆ ಎಂದರೆ ಮಕ್ಕಳ ತಂದೆ ತಾಯಿಗಳಿಗೆ ಇಂಗ್ಲಿಷ್ ಭಾಷೆಯ ಮೇಲೆ ಏನೋ ಒಂದು ತರಹ ವ್ಯಾಮೋಹ, ನಮ್ಮ ಮಕ್ಕಳನ್ನು ಇಂಗ್ಲಿಷ್ ಸ್ಕೂಲ್‌ಗೆ ಕಳುಹಿಸಬೇಕು ಎನ್ನತಕ್ಕ ಮನಸ್ಸು ಇರುತ್ತದೆ. ಇವೊತ್ತು ನಮ್ಮ ಮಕ್ಕಳು ಮೆಡಿಕಲ್, ಮತ್ತು ಇಂಜಿನಿಯರಿಂಗ್ ಕಾಲೇಜು ಓದತಕ್ಕವರ ಖರ್ಚು 400 ರೂಪಾಯಿಗಳಾದರೆ, ನನ್ನ ಮೊಮ್ಮಕ್ಕಳ ನರ್ಸರಿ ಪ್ರೈಮರಿ ಸ್ಕೂಲು ವಿದ್ಯಾಭ್ಯಾಸಕ್ಕೆ ಸುಮಾರು 600 ರೂಪಾಯಿಗಳವರೆಗೆ ಬೇಕಾಗುತ್ತದೆ. ನಂತರ ಈ ನರ್ಸರಿ ಪ್ರೈಮರಿ ಸ್ಕೂಲುಗಳಲ್ಲಿ ಮುಂದಿನ ವರ್ಷದ ಅಡ್ಮಿಷನ್ ನವೆಂಬರ್ ತಿಂಗಳನಲ್ಲಿಯೇ ಪ್ರಾರಂಭವಾಗುತ್ತದೆ, ಅವರು ಜನವರಿ ಫೆಬ್ರವರಿ ತಿಂಗಳಿನಲ್ಲಿ ಸೀಟುಗಳನ್ನು ಕ್ಲೋಸ್ ಮಾಡಿರುತ್ತಾರೆ. ಆದ್ದರಿಂದ ಇವೊತ್ತು ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಸೀಟುಗಳನ್ನು ತೆಗೆದುಕೊಳ್ಳಬಹುದು, ಆದರೆ ಈ ನರ್ಸರಿ ಪ್ರೈಮರಿ ಸ್ಕೂಲುಗಳಲ್ಲಿ ಸೀಟುಗಳನ್ನು ಪಡೆಯುವುದು ಬಹಳ ಕಷ್ಟವಾಗಿದೆ ಏಕೆಂದರೆ ಈ ಪ್ರೈಮರಿ ಸ್ಕೂಲುಗಳಲ್ಲಿ: ಸೀಟುಗಳು ಸಿಕ್ಕುವುದಿಲ್ಲ ಎಂದು ಅನೇಕರು ನಮ್ಮ ಕಡೆ ಒತ್ತಾಯ ತರುತ್ತಾ ಇರುತ್ತಾರೆ. ಇವೊತ್ತು ಎಲ್ಲಿಯವರೆಗೆ ಸರ್ಕಾರಿ ಶಾಲೆಗಳಲ್ಲಿ, ಸರ್ಕಾರಿ ಕಾಲೇಜುಗಳಲ್ಲಿ, ಉತ್ತಮವಾದ ತರಬೇತಿ ಸಿಕ್ಕುವುದಿಲ್ಲ, ಅಲ್ಲಿಯವರೆಗೆ ಈ ಪ್ರೈವೇಟ್ ಸ್ಕೂಲುಗಳನ್ನು ಕಂಟ್ರೋಲ್ ಮಾಡಲಿಕ್ಕೆ [illegible]ವುದಿಲ್ಲ. ಆದುದರಿಂದ ನಮ್ಮ ಸರ್ಕಾರಿ ಶಾಲೆಗಳಲ್ಲಿ ವಿದ್ಯಾಭ್ಯಾಸ ಚೆನ್ನಾಗಿ ನಡೆಸ[illegible] ಪಡಬೇಕು, ಇಲ್ಲದೇ ಹೋದರೆ ನಾವು ಖಾಸಗಿ ಶಾಲೆಗಳವರನ್ನು ಯಾವುದೇ ರೀ[illegible] ತೆಗೆದುಕೊಳ್ಳುವುದಕ್ಕಾಗುವುದಿಲ್ಲ ಎಂದು ಹೇಳುತ್ತೇನೆ. ಇವೊತ್ತು [illegible] ಕ್ಸೆಸ್ಕೂಲುಗಳನ್ನು ನಡೆಸುತ್ತಿದ್ದಾರೆ, ಇದು ಅಲ್ಲದೆ ಪ್ರೈಮರಿ ಸ್ಕೂಲು[illegible] ನಡೆಸುತ್ತಿದ್ದಾರೆ. ಇದರ ಖರ್ಚು ಸುಮಾರು 67 ಲಕ್ಷ ರೂಪಾಯಿಗಳಿಗಿಂತ ಜಾಸ್ತಿಯಾಗುತ್ತದೆ. ಆದರೆ ಈ ಸ್ಕೂಲುಗಳಿಂದ ಕಳುಹಿಸತಕ್ಕ ಎಸ್.ಎಸ್.ಎಲ್ ಸಿ. ಪರೀಕ್ಷೆಯ ಫಲಿತಾಂಶ ನೋಡಿದರೆ ಒಂದು ಸ್ಕೂಲನಲ್ಲಿ ಜೀರೋ ಪರ್‌ಸೆಂಟ್, ಇನ್ನೊಂದು ಸ್ಕೂಲ್‌ನಲ್ಲಿ ನಾಲ್ಕು ಪರ್‌ಸೆಂಟ್, ಮತ್ತೊಂದು ಸ್ಕೂಲ್‌ನಲ್ಲಿ 10 ಪರ್‌ಸೆಂಟ್, ಮ್ಯಾಕ್ಸಿಮಮ್ 35 ಪರ್‌ಸೆಂಟ್, ಒಟ್ಟು ಆವರೇಜ್ ತೆಗೆದುಕೊಂಡರೆ 14 ಪರ್‌ಸೆಂಟಿಗಿಂಥ ಜಾಸ್ತಿ ಆಗುವುದಿಲ್ಲ. ಇವೊತ್ತು ನಾವು 67 ಲಕ್ಷ ರೂಪಾಯಿ ಹಣವನ್ನು ಖರ್ಚು ಮಾಡಿ ಈ ರೀತಿ ಪರ್‌ಸೆಂಟೇಜ್ ಬಂದರೆ ಹೇಗೆ, ಕೆಲವು ಮಕ್ಕಳು ಫೇಲಿಯಾಗತಕ್ಕದ್ದು ಇದೆ, ಆದ್ದರಿಂದ ನಾನು ಮಾನ್ಯ ಮಂತ್ರಿಗಳವರಲ್ಲಿ, ಮತ್ತು ಸಂಬಂಧಪಟ್ಟ ಮುಖ್ಯ ಅಧಿಕಾರಿಗಳವರಲ್ಲಿ ಕೇಳಿಕೊಳ್ಳುವುದು ಇಷ್ಟೆ, ನಮ್ಮ ಸರ್ಕಾರಿ ಶಾಲೆಗಳಲ್ಲಿ, ಸರ್ಕಾರಿ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಕಲಿಸುವ ಬಗ್ಗೆ ಗುಣ ಮಟ್ಟವನ್ನು ಹೆಚ್ಚಿಸಬೇಕು. ನಾವು ಕೂಡ ಹಿಂದೆ ಸರ್ಕಾರಿ ಶಾಲೆಗಳಲ್ಲಿ ಓದಿದವರೇ, ಇವೊತ್ತು ಸರ್ಕಾರಿ ಶಾಲೆಗಳವರು ಏನು ಹೇಳುತ್ತಾರೆ ಎಂದರೆ ಒಳ್ಳೆಯ ಬುದ್ಧಿವಂತ ವಿದ್ಯಾರ್ಥಿಗಳು, ರ್‍ಯಾಂಕ್ ಸ್ಟೂಡೆಂಟ

ಗಳು, ಪ್ರೈವೇಟ್ ಸ್ಕೂಲುಗಳಿಗೆ ಹೋಗುತ್ತಾರೆ ಕಾರ್ಪೊರೇಷನ್ ಶಾಲೆಗಳಿಗೆ ಬರುವುದಿಲ್ಲ ಎಂದು ಉತ್ತರ ಹೇಳುತ್ತಾರೆ. ಇವೊತ್ತು ನಾನು ಒಂದು ಶಾಲೆಗೆ ಅಧ್ಯಕ್ಷನಾಗಿದ್ದೇನೆ, ಇನ್ನೊಂದು ಶಾಲೆಗೆ ಸದಸ್ಯನಾಗಿದ್ದೇನೆ, ಮತ್ತೆ ನಾನೇ ಒಂದು ಸ್ಕೂಲು ನಡೆಸುತ್ತಿದ್ದೇನೆ, ಹೀಗೆ ಒಟ್ಟು ಹತ್ತು ಸ್ಕೂಲುಗಳ ಬಗ್ಗೆ ನಿಕಟ ಸಂಬಂಧ ಇಟ್ಟುಕೊಂಡಿದ್ದೇನೆ. ಸರಿಯಾದ ರೀತಿಯಲ್ಲಿ ಶ್ರದ್ಧೆ ವಹಿಸಿ ಮಕ್ಕಳಿಗೆ ಯಾವರೀತಿ ವಿದ್ಯಾಭ್ಯಾಸ ಕೊಡಬೇಕು. ಎಂದು ತಿಳಿದು ಸರಿಯಾದ ರೀತಿಯಲ್ಲಿ ವಿದ್ಯಾಭ್ಯಾಸ ಕೊಡತಕ್ಕ ಕ್ರಮ ಅನುಸರಿಸಿದರೆ ಖಂಡಿತವಾಗಿ ಸರಿಯಾದಂತ ವಿದ್ಯಾಭ್ಯಾಸ ಕೊಡಲಿಕ್ಕೆ ಸಾಧ್ಯ ಇದೆ ಎಲ್ಲಿಯುವರೆಗೆ ಅಧಿಕಾರಿಗಳು ಉಪಾಧ್ಯಾಯರುಗಳಿಗೆ ಚುರುಕು ಮಾಡುವುದಿಲ್ಲ, ಎಲ್ಲಿಯುವರೆಗೆ ಉಪಾಧ್ಯಾಯರಲ್ಲಿ ಶ್ರದ್ಧೆ ಬರುವುದಿಲ್ಲ, ಅಲ್ಲಿಯವರೆಗೆ ಸರಿಯಾದ ವಿದ್ಯಾಭ್ಯಾಸ ಕೊಡುವುದಕ್ಕಾಗುವುದಿಲ್ಲ. ವಿದ್ಯಾಭ್ಯಾಸದ ಬಗ್ಗೆ, ವಿದ್ಯಾಮಂತ್ರಿಗಳ ಮೇಲೆ, ವಿದ್ಯಾ ಅಧಿಕಾರಿಗಳ ಮೇಲೆ, ಮಕ್ಕಳಿಗೆ ವಿದ್ಯೆ ಕೊಡತಕ್ಕಂಥ ಒಂದು ದೊಡ್ಡ ಹೊರ ಇದೆ. ತಾವು ವಿದ್ಯಾಭ್ಯಾಸಕ್ಕಾಗಿ 130 ಕೋಟಿ ರೂಪಾಯಿ ಖರ್ಚು ಮಾಡುವುದಾದರೆ ಮತ್ತಷ್ಟು ದುಡ್ಡನ್ನು ಮಕ್ಕಳ ತಂದೆ ತಾಯಿಗಳು ಖರ್ಚು ಮಾಡುತ್ತಾರೆ, ಇಷ್ಟು ಹೆಚ್ಚಿನ ಮಟ್ಟದಲ್ಲಿ ಹಣವನ್ನು ಖರ್ಚು ಮಾಡಿದರು ವಿದ್ಯಾಭ್ಯಾಸ ಸರಿಯಾದ ಮಟ್ಟದಲ್ಲಿ ಆಗದೇ ಹೋದರೆ ಅದರ ಹೊರೆಯನ್ನು ತಾವೇ ಹೊರಬೇಕಾಗುತ್ತದೆ. ಆದುದರಿಂದ ನಾನು ಮುಖ್ಯವಾಗಿ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆ ಎಲ್ಲರನ್ನೂ ಕೇಳಿಕೊಳ್ಳುವುದು ಇಷ್ಟೇ, ಇವೊತ್ತು ಸರ್ಕಾರಿ ಶಾಲೆಗಳಲ್ಲಿ ವಿದ್ಯಾಭ್ಯಾಸದ ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು, ಅದನ್ನು ತೆಗೆದುಕೊಳ್ಳದೇ ಹೋದರೆ ಈಗ ನಡೆಯುತಕ್ಕ ಕ್ರಮ ಬದಲಾಯಿಸುವುದಕ್ಕೆ ಆಗುವುದಿಲ್ಲ. ಇನ್ನು ಖಾಸಗಿ ಶಾಲೆಗಳ ಬಗ್ಗೆ ಹೇಳಬೇಕಾದರೆ ಇದರಲ್ಲಿ ಅನೇಕ ವ್ಯಾಪಾರಿ ಸಂಸ್ಥೆಗಳು ಇವೆ, ಅನೇಕ ಒಳ್ಳೆಯ ಖಾಸಗಿ ಶಾಲೆಗಳು ಇವೆ. ಈಗ ಸರ್ಕಾರ ತೆಗೆದುಕೊಳ್ಳತಕ್ಕ ಕಾರ್ಯಕ್ರಮದಿಂದ ಖಾಸಗಿ ಶಾಲೆಗಳು ನಾಯಿಕೊಡೆಗಳಾಗಿ ಹುಟ್ಟುಕೊಳ್ಳತಕ್ಕದು ಸ್ವಲ್ಪ ಕಡಮೆಯಾಗಿದೆ. ಈಗ ಅನೇಕ ಸಂಸ್ಥೆಗಳು ಖಾಸಗಿ ಶಾಲೆಗಳನ್ನು ಚೆನ್ನಾಗಿ ನಡೆಸುತ್ತಿವೆ. ನಾವು ಎಲ್ಲಾ ಸ್ಕೂಲುಗಳನ್ನು ಸರ್ಕಾರಕ್ಕೆ ತೆಗೆದುಕೊಳ್ಳುತ್ತೇವೆಂಬ ಹುಚ್ಚು ಕೆಲಸಕ್ಕೆ ಹೋದರೆ, ಈಗ ಕಟ್ಟಿರತಕ್ಕ ಶಾಲೆಗಳ ಜೊತೆಗೆ ಅವುಗಳನ್ನು ಸೇರಿಸಿಕೊಂಡರೆ ಮತ್ತಷ್ಟು ಕೆಟ್ಟುಹೋಗುತ್ತದೆ. ಆದುದರಿಂದ ಮೊದಲು ನಿಮ್ಮಲ್ಲಿ ಕೆಟ್ಟುಹೋಗಿರತಕ್ಕ ಶಾಲೆಗಳನ್ನು ಮೊದಲು ಸರಿಪಡಿಸಿ, ನಂತರ ವ್ಯಾಪಾರಿ ಸಂಸ್ಥೆಗಳನ್ನು ಸರಿಪಡಿಸಿ, ಅನಂತರ ಖಾಸಗಿ ಶಾಲೆಗಳನ್ನು ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡಬೇಕು. ಕೆಲವು ಸಂಸ್ಥೆಗಳು ಉತ್ತಮವಾಗಿ ಶಾಲೆಗಳನ್ನು ನಡೆಸತಕ್ಕದ್ದು ಇದೆ, ಅವರಿಗೆ ತಾವು ಏನು ಸಹಾಯ ಮಾಡಬಹುದು ಅದನ್ನು ಮಾಡಿ. ಇವೊತ್ತು ನೀವು ಕೊಡತಕ್ಕ ಗ್ರಾಂಟ್, ಮತ್ತೆ ವಿದ್ಯಾರ್ಥಿಗಳಿಂದ ವಸೂಲ ಮಾಡತಕ್ಕ ಫೀಜುಗಳಿಂದ ವಿದ್ಯಾ ಸಂಸ್ಥೆಗಳನ್ನು ನಡೆಸಲಿಕ್ಕೆ ಕಷ್ಟ ಇದೆ. ಹಿಂದೆ ಯಾವುದೋ ಊರುಗಳಲ್ಲಿ 20 ಪರ್‌ಸೆಂಟ್ ಧರ್ಮ ಮಾಡುತ್ತಾ ಇದ್ದರು ಈಗ ಮೂಲೆ ಮೂಲೆಗಳಲ್ಲಿಯೂ ಸ್ಕೂಲುಗಳು ಇರುವುದರಿಂದ ಪಬ್ಲಿಕ್ ಡೊನೇಷನ್ ಬರುವುದು ಕಡಿಮೆಯಾಗಿದೆ. ಆದ್ದರಿಂದ ಮಕ್ಕಳನ್ನು ಯಾರು ಸ್ಕೂಲುಗಳಿಗೆ ಕಳುಹಿಸುತ್ತಾರೆ ಅವರು ಕೊಡಬೇಕಾಗುತ್ತದೆ, ಮತ್ತೆ ಸರ್ಕಾರದವರು ಇನ್ನು ಹೆಚ್ಚಿನ ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ.

5-30 P.M.

ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುವುದು ಇಷ್ಟು. ಒಂದು ಮಕ್ಕಳ ತಂದೆತಾಯಿಗಳನ್ನು ಶೋಷಣೆ ಮಾಡಿದಂತೆ ಈ ವ್ಯಾಪಾರಿ ಸಂಸ್ಥೆಗಳನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳುವುದು, ಎರಡನೆಯದು, ಇವುಗಳ ಮೇಲೆ ಸರಿಯಾದ ನಿಯಂತ್ರಣವನ್ನು ಹಾಕಬೇಕು. ಈ ಎರಡೂ ಇಲ್ಲದೇ ಹೋದಪಕ್ಷದಲ್ಲಿ ಬಹಳ ತೊಂದರೆಯಾಗುತ್ತದೆ ಹಣಕಾಸಿನ ವಿಚಾರದಲ್ಲಿ ಯಾವ ವಿಧವಾದ ನಿಯಂತ್ರಣ ಹಾಕಬೇಕೋ ಹಾಕಿ, ಮತ್ತು ಸರ್ಕಾರದ ರೆಪ್ರಸೆಂಟೆಟಿವ್ ಬೇಕಾದರೆ ಕಳುಹಿಸಿ ಒಟ್ಟಿನಲ್ಲಿ ಖಾಸಗಿ ಸ್ಕೂಲುಗಳು ಸರಿಯಾದ ರೀತಿಯಲ್ಲಿ ನಡೆಯುವುದಕ್ಕೆ ಮತ್ತು ಅವುಗಳ ಹಣಕಾಸಿನ ಪರಿಸ್ಥಿತಿಯನ್ನು ಸರಿತೂಗಿಸುವುದಕ್ಕೆ ಏನಾದರೂ ಒಂದು ಮಾರ್ಗವನ್ನು ಕಂಡು ಹಿಡಿಯಬೇಕು ಎಂದು ನಾನು ಹೇಳುತ್ತೇನೆ ಮೊದಲೇ ನಾನು ಹೇಳಿರುವ ಹಾಗೆ, ಒಂದನೆಯದು, ಸರ್ಕಾರಿ ಶಾಲೆಗಳ ಗುಣಮಟ್ಟವನ್ನು ಹೆಚ್ಚಿಸಬೇಕು. ಎರಡನೆಯದು, ವ್ಯಾಪಾರಿ ಸಂಸ್ಥೆಗಳನ್ನು

ತಮ್ಮ ಹಿಡಿತಕ್ಕೆ ತೆಗೆದುಕೊಳ್ಳುವುದಕ್ಕೆ, ಮೂರನೆಯದ, ಪ್ರೈವೇಟ್ ಸ್ಕೂಲುಗಳವರು ಮಕ್ಕಳ ತಂದೆತಾಯಿಗಳನ್ನು ಶೋಷಣೆ ಮಾಡದಂತೆ ನೋಡಿಕೊಳ್ಳುವುದು, ಇದಕ್ಕೆ ತಾವು ಏನು ಕ್ರಮ ಬೇಕೋ ಅವನ್ನು ಹಾಕಿಕೊಳ್ಳಬೇಕು ಎಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಎಲ್ಲಾ ಡಿಪಾರ್ಟ್ಮೆಂಟುಗಳಿಗಿಂತ ಇದಕ್ಕೆ ನಾವು ಹೆಚ್ಚು ಹಣವನ್ನು ಖರ್ಚು ಮಾಡುತ್ತಾ ಇದ್ದೇವೆ. ಇದರ ಬಗ್ಗೆ ನಾವು ಬೇಕಾದಷ್ಟು ಗಮನ ಕೊಡದೇ ಹೋದ ಪಕ್ಷದಲ್ಲಿ ನಮ್ಮ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸ ಇಲ್ಲ, ಮತ್ತು ನಾವು ಖರ್ಚು ಮಾಡತಕ್ಕ ಹಣವೂ ಲೋಪವಾಗುತ್ತದೆ ಎನ್ನುವುದು ನಿರ್ವಿವಾದವಾದುದು. ಆದ್ದರಿಂದ ಇದರ ಬಗ್ಗೆ ನಾವೆಲ್ಲರೂ ಕೂತು ಯೋಚನೆ ಮಾಡಿ ಸರಿಯಾದ ಥ ತೀರ್ಮಾನವನ್ನು ತೆಗೆದುಕೊಳ್ಳಬೇಕು ಎಂದು ನಾನು ಒತ್ತಾಯ ಪೂರ್ವಕವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ನಮ್ಮ ಪ್ರೈಮರಿ ಸ್ಕೂಲುಗಳಲ್ಲಿ ಮತ್ತು ಹೈಯರ್ ಸೆಕೆಂಡರಿ ಸ್ಕೂಲುಗಳ ಉಪಾಧ್ಯಾಯರುಗಳಿಗೆ ಚೆಕ್ ಮೂಲಕ ಸಂಬಳವನ್ನು ಕೊಡತಕ್ಕ ಪದ್ಧತಿಯನ್ನು ಇಟ್ಟುಕೊಂಡಿದ್ದಾರೆ. ಇದರಿಂದ ಅವ್ಯವಹಾರ ತಪ್ಪಿ, ಉಪಾಧ್ಯಾಯರುಗಳಿಗೆ ಅನುಕೂಲವಾಗುತ್ತದೆ. ಕಾಲೇಜು ಲೆವಲ್‌ನಲ್ಲಿಯೂ ಕೂಡ ಕೆಲಸ ಮಾಡತಕ್ಕ ಉಪಾಧ್ಯಾಯರುಗಳಿಗೆ ಈ ಪದ್ಧತಿಯನ್ನು ಅನುಸರಿಸಿದರೆ ಒಳ್ಳೆಯದು, ಇಲ್ಲದೇ ಹೋದರೆ ಆಗುತ್ತಿರುವ ಅನ್ಯಾಯವನ್ನು ನಾವು ತಡೆಗಟ್ಟುವುದಕ್ಕಾಗುವುದಿಲ್ಲ. ಇದನ್ನು ಒಂದು ಪಾಲಿಸಿ ಡಿಸಿಷನ್ ಆಗಿ ತೆಗೆದುಕೊಂಡು ಉಪಾಧ್ಯಾಯರುಗಳಿಗೆ ಚೆಕ್ ಮೂಲಕ ಸಂಬಳ ಕೊಡತಕ್ಕ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು ಇದಕ್ಕೆ ಯಾವ ಮ್ಯಾನೇಜ್‌ಮೆಂಟಿನವರೂ ಅಡ್ಡಿ ಬರುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ.
ಸರ್ಕಾರದವರು ಖಾಸಗಿ ಶಾಲೆಗಳವರಿಗೆ ಕೊಡಬೇಕಾದಂಥ ಷೇರನ್ನು ಕೊಟ್ಟರೆ ಮತ್ತು ಸರ್ಕಾರದವರು ಮಾಡತಕ್ಕ ಯಾವ ನಿಯಂತ್ರಣಕ್ಕೂ ತೊಂದರೆಯಾಗುವುದಿಲ್ಲ.

ಇನ್ನೊಂದು ವಿಷಯ, ವಿಶ್ವವಿದ್ಯಾನಿಲಯಗಳ ಸಿಂಡಿಕೇಟ್ ಮತ್ತು ಸೆನೇಟ್‌ಗಳನ್ನು ಕಾನ್ಸ್‌ಟಿಟ್ಯೂಟ್ ಮಾಡುತ್ತೇವೆಂದು ಅನೇಕ ವರ್ಷಗಳಿಂದ ಸರ್ಕಾರದವರು ಹೇಳುತ್ತಿದ್ದಾರೆ. ಇದು ಬಹಳ ದೊಡ್ಡ ಕೆಲಸ ಎಂದು ನನಗೇನೂ ಕಾಣುತ್ತಿಲ್ಲ. ಖಚಿತವಾಗಿ ಇಷ್ಟು ದಿವಸಗೊಳಗಾಗಿ ಕಾನ್ಸ್‌ಟಿಟ್ಯೂಟ್ ಮಾಡುತ್ತೇವೆಂದು ಸರ್ಕಾರದವರು ಹೇಳಬೇಕು, ಇಲ್ಲದೆ ಹೋದರೆ ಇದು ತಪ್ಪಾಗುತ್ತದೆ

ಪಿ. ಯು. ಸಿ. ಬೋರ್ಡ್ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಇದನ್ನು ಈಗ ಸೆಕೆಂಡರಿ ಎಜುಕೇಷನ್‌ಗೆ ವಹಿಸಿರತಕ್ಕದ್ದು ಅಷ್ಟು ಸಮಂಜಸವಾಗಿ ಕಾಣುತ್ತಿಲ್ಲ. ಏಕೆಂದರೆ, ಇದರಲ್ಲಿ ಕೆಲವು ಲೋಪದೋಷಗಳು ಇದ್ದರೂ ಕೂಡ ಇದು ಸರಿಯಾಗಿ ಕೆಲಸ ಮಾಡುತ್ತಿತ್ತು ನಾನು ಎಂದ ಹೇಳಬಲ್ಲೆ. ಇದಕ್ಕೆ ಉದಾಹರಣೆಯನ್ನು ಕೊಡಬಹುದಾದರೆ, ನಾನು ಕಮರ್ಷಿಯಲ್ ಎಜುಕೇಷನ್ ಬೋರ್ಡ್‌ನೊಂದಿಗೆ ನಿಕಟ ಸಂಪರ್ಕ ಇಟ್ಟುಕೊಂಡಿದ್ದೇನೆ ಆ ಬೋರ್ಡಿನವರು ಪರೀಕ್ಷೆ ಮುಗಿದ 15 ದಿವಸಗಳೊಳಗಾಗಿ ಫಲಿತಾಂಶವನ್ನು ಪ್ರಕಟಿಸಿದರು. ಇದಕ್ಕೆ ನಾವು ನಮ್ಮ ಮೆಚ್ಚುಗೆಯನ್ನು ಹೇಳಬೇಕಾಗುತ್ತದೆ. ಪಿ ಯು. ಸಿ. ಬೋರ್ಡಿನವರೂ ಹಾಗೆಯೇ ಕೆಲಸ ಮಾಡುತ್ತಿದ್ದರು ಆದ್ದರಿಂದ ಇದನ್ನು ಸೆಕಂಡರಿ ಎಜುಕೇಷನ್ ಬೋರ್ಡಿಗೆ ಸೇರಿಸುವುದಕ್ಕೆ ಮುಂಚೆ ಸರ್ಕಾರದವರು ಸ್ವಲ್ಪ ಯೋಚನೆ ಮಾಡಬೇಕಾಗಿತ್ತು ಮುನ್ನೂರು ಹೈಯರ್‌ಸೆಕೆಂಡರಿ ಸ್ಕೂಲುಗಳವರು ವಿದ್ಯಾರ್ಥಿಗಳನ್ನು ಪಿಯುಸಿಗೆ ಕಳುಹಿಸುತ್ತಾರೆ. ಜೂನಿಯರ್ ಕಾಲೇಜಿನವರು ಕಳುಹಿಸುತ್ತಾರೆ ಫಸ್ಟ್ ಗ್ರೇಡ್ ಕಾಲೇಜಿನವರು ಕಳುಹಿಸುತ್ತಾರೆ ಆದ್ದರಿಂದ ಪಿ ಯು ಸಿ ಯನ್ನು ಸೆಕೆಂಡರಿ ಎಜುಕೇಷನ್ ಬೋರ್ಡಿಗೆ ಸೇರಿಸಿರತಕ್ಕದ್ದು ಖಂಡಿತವಾಗಿಯೂ ಅನುಕೂಲಕ್ಕಿಂತ ಅನಾನುಕೂಲವೇ ಎಂದು ನಾನು ಹೇಳುತ್ತೇನೆ, ಮತ್ತು ಇದನ್ನು ಬದಲಾವಣೆ ಮಾಡಬೇಕು ಎಂದು ನಾನು ಹೇಳುತ್ತೇನೆ.

ಒಟ್ಟಿನಲ್ಲಿ ಖಾಸಗಿ ಸ್ಕೂಲ್‌ಗಳ ಬಗ್ಗೆ ಒಂದು ನೀತಿಯನ್ನು ಸರ್ಕಾರದವರು ತಕ್ಷಣ ತೆಗೆದುಕೊಳ್ಳಬೇಕಾಗುತ್ತದೆ. ಇವುಗಳಲ್ಲಿ ಉತ್ತಮವಾದಂಥ ಸ್ಕೂಲ್‌ಗಳನ್ನು ಉಳಿಸಿ ವ್ಯಾಪಾರಿ ಸಂಸ್ಥೆಗಳನ್ನು ಮುಚ್ಚಿಸಿ ನಮ್ಮ ವಿದ್ಯಾಭ್ಯಾಸದ ಗುಣ ಮಟ್ಟವನ್ನು ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡಿ ನಮ್ಮ ತಂದೆತಾಯಿಗಳಿಗೆ ಆಗತಕ್ಕ ಶೋಷಣೆಯನ್ನು ತಪ್ಪಿಸಬೇಕು ಎಂದು ನಾನು ಹೇಳುತ್ತೇನೆ. ನಮ್ಮ ತಂದೆತಾಯಿಗಳಲ್ಲಿ ಒಂದು ಅಪೀಲನ್ನು ನಾನು ಮಾಡುವುದಕ್ಕೆ ಇಷ್ಟಪಡುತ್ತೇನೆ

ಎಲ್ಲಿಯವರಿಗೆ ತಂದೆತಾಯಿಗಳಿಗೆ ತಮ್ಮ ಮಕ್ಕಳಿಗೆ ಇಂಗ್ಲೀಷ್ ವಿದ್ಯಾಭ್ಯಾಸ ಮಾಡಿಸಬೇಕೆನ್ನುವ ವ್ಯಾಮೋಹ ಹೋಗುತ್ತದೆ ಅಲ್ಲಿಯವರಿಗ ಈ ಅನಾಚಾರ ತಪ್ಪುವುದಿಲ್ಲ. ನಮ್ಮ ಮಕ್ಕಳು ಕೇಂಬ್ರಿಡ್ಜ್ ವಿದ್ಯಾಭ್ಯಾಸ ಮಾಡಬೇಕು ದೊಡ ವಿದ್ಯಾವಂತರಾಗಬೇಕು ಎನ್ನುವ ಆಸ್ತೆ ಎಲ್ಲರಲ್ಲಿಯೂ ಇರುತದೆ. ಆದುದ್ದರಿಂದಲೇ ಪರೋಕ್ಷವಾಗಿ ನಾವೆಲ್ಲರೂ ಈ ಖಾಸಗಿ ವಿದ್ಯಾಸಂಸ್ಥೆಗಳನ್ನು ಬೆಳೆಯಲಿಕ್ಕೆ ಬಿಡುತ್ತಿದ್ದೇವೆ. ಒಂದು ರೀತಿಯಲ್ಲಿ ಇಲಾಖೆಯವರು ಮತ್ತು ಖಾಸಗಿಯವರು ಷಾಮೀಲಾಗಿ ಇವುಗಳನ್ನು ಬೆಳಸುತ್ತಿದ್ದಾರೆಂದರೆ ತಪ್ಪಾಗಲಾರದು. ಇದು ವಿದ್ಯಾಬ್ಯಾಸದ ಇಲಾಖೆಯ ಅಧಿಕಾರಿಗಳಿಗೂ ಚೆನ್ನಾಗಿಗೊತ್ತು.

ನನಗೆ ವಿದ್ಯಾ ಇಲಾಖೆಯಲ್ಲಿರುವ ಎಲ್ಲಾ ಅಧಿಕಾರಿಗಳು ಚೆನ್ನಾಗಿ ಗೊತ್ತು. ಅನೇಕ ಉತ್ತಮವಾದಂಥ ಧಕ್ಷ ಅಧಿಕಾರಿಗಳೂ ಇಲ್ಲದ್ದಾರೆ. ಆದರೆ ಅವರ ಇಲಾಖೆಯಲ್ಲಿ ಮಾತ್ರ ಯಾವತ್ತೂ ಕೊಡ ಲಂಚ ಇರುತ್ತಾ ಇರಲಿಲ್ಲ. ಈಗ ಖಾಸಗಿಯವರು ಮತ್ತು ವಿದ್ಯಾ ಇಲಾಖೆಯವರು ಸೇರಿಕೊಂಡು ಅವ್ಯವಹಾರ ನಡೆಯುವುದಕ್ಕೆ ಕಾರಣರಾಗಿದ್ದಾರೆ. ತಾವು ಎಲ್ಲಾ ಹಂತದಲ್ಲಿಯೂ ಸ್ವಲ್ಪ ಭದ್ರ ಮಾಡಬೇಕು. ಇಲ್ಲದೆ ಹೋದರೆ ಎಲ್ಲೆಲ್ಲಿ ಅವ್ಯವಹಾರ ನಡೆಯುತ್ತದೆಯೋ ಅಲ್ಲೆಲ್ಲಾ ಸರಿಯಾದ ವಿಧ್ಯಾಭ್ಯಾಸ ಇರುವುದಿಲ್ಲ ಇದನ್ನು ತಾವು ತಪ್ಪಿಸಬೇಕು'

ನನಗೆ ಇನ್ನು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವುದಕ್ಕೆ ಇಷ್ಟವಿಲ್ಲ. ಹೆಚ್ಚಿನ ಹಣವನ್ನು ಖರ್ಚು ಮಾಡತಕ್ಕ ಇಲಾಖೆಯಾದ್ದರಿಂದ ಇಲ್ಲಿಯವ್ಯವಹಾರ ಮತ್ತು ಅನಾಚಾರ ಆಗದ ರೀತಿಯಲ್ಲಿ ಕೆಲಸಮಾಡಬೇಕಾಗಿದೆ, ಮುಂದಿನ ಪೀಳಿಗೆಯ ಹಿತದೃಷ್ಟಿಯಿಂದಲೂ ಮತು ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸ ಕೊಡುವಂತೆ ಸಾಕಾದಷ್ಟು ಪ್ರಯತ್ನ ಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Madam Speaker in the chair

† ಶ್ರೀ ವಿ. ಎಂ. ಘಾಡಿ.—(ಹಳಿಯಾಳ್)ಸನ್ಮಾನ್ಯಅಧ್ಯಕ್ಷರೇ, ಇವತ್ತಿನ ಧಿವಸ ಮಾನ್ಯ ವಿದ್ಯಾಸಚಿವರು ವಿದ್ಯಾಖಾತೆಯ ಮೇಲೆ ಮಂಡಿಸಿದ ಬೇಡಿಕೆಗಳನ್ನು ನಾನು ಹೃತ್ಪೂರ್ವಕವಾಗಿ ಬೆಂಬಲಿಸುತ್ತಾ ನಾಲ್ಕು ಮಾತುಗಳನ್ನು ಹೇಳುವುದಕ್ಕೆಇಷ್ಟಪಡುತ್ತೇನೆ ಮಾನವ ಸೃಷ್ಟಿಯಮೇಲೆ ಬಂದನಂತರ ಅವಶ್ಯಕವಾಗಿ ಅವನಿಗೆ ಐದು ಸಂಗಾತಿಗಳು ಬೇಕಾಗುತ್ತದೆ. ಒಂದು ಆಹಾರ ಎರಡು ಅರಿವೆ ಮೂರು ಆಶ್ರಯ, ನಾಲ್ಕು ಆರೋಗ್ಯ ಮತ್ತು ಐದು ಶಿಕ್ಷಣ ಮನುಷ್ಯನಲ್ಲಿ ಮಾನವೀಯತೆ ಬರಬೇಕಾದರೆ ಶಿಕ್ಷಣ ಅತಿ ಅವಶ್ಯಕ. ವಿದ್ಯಾ ಮಾನವನ ಕಲ್ಪವೃಕ್ಷ ಎಂದು ಒಂದು ಸರ್ವಜ್ಞನ ವಚನ ಇದೆ.

'ವಿದ್ಯೆ ಕಲಿಸದ ತಂದೆ, ಬುದ್ಧಿ ಹೇಳದ ಗುರುವು
ಬಿದ್ದಿರಲು ಬಂದು ನೋಡದ ತಾಯಿಯು
ಶುದ್ಧ ವೈರಿಗಳು ಸರ್ವಜ್ಞ.

ಆದ್ದರಿಂದ ವಿದ್ಯೆಯ ಬಗ್ಗೆ ನಾನು ಎಷ್ಟು ಆಸ್ಥೆ ವಹಿಸಬೇಕಾಗಿದೆ ಎಂದರೆ, ವಿದ್ಯೆಯನ್ನು ಕೊಡುವುದು ನಮ್ಮ ಆದ್ಯ ಕರ್ತವ್ಯ. ಅದರ ಪ್ರಕಾರ ಶಿಕ್ಷಕರು ನಿಜವಾದಂಥ ಶಿಕ್ಷಣವನ್ನು ಕೊಡಬೇಕಾದ್ದು ಅವರ ಕರ್ತವ್ಯ. ವಿಧ್ಯೆಯ ಬಗ್ಗೆ ಎಷ್ಟು ಹೇಳಿದರೂ ಸಾಲದು. ಮಹಾತ್ಮ ಗಾಂಧಿಯವರು ಹೇಳಿದ ಹಾಗೆ ಪ್ರಾಥಮಿಕ ಶಿಕ್ಷಣಕ್ಕೆ ನಾವು ಹೆಚ್ಚಿನ ಗಮನ ಕೊಡಬೇಕಾಗಿದೆ. ಇವತ್ತಿನ ವಿದ್ಯಾಭ್ಯಾಸ ನಮ್ಮ ಶಿಕ್ಷಣ ಬಹಳ ಕೆಳಮಟ್ಟದಲ್ಲಿ ಇದೆಯೆಂದು ಕಂಡುಬರುತ್ತದೆ. ಇದಕ್ಕೆ ಬರೀ ಸರ್ಕಾರದ ಮೇಲೆ ಆರೋಪ ಹೊರಿಸಿದರೆ ಸಾಲದು. ಇದಕ್ಕೆ ಐದು ಅಂಶಗಳು ಕಾರಣವೆಂದು ನಾನು ಹೇಳುತ್ತೇನೆ. ಒಂದು ಸಮಾಜ, ಎರಡು ಪಾಲಕರು, ಮೂರು ವಿದ್ಯಾರ್ಥಿಗಳು, ನಾಲ್ಕು ಸರ್ಕಾರ ಮತ್ತು ಐದು ಶಿಕ್ಷಕರು

ಪಾಲಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಿದರೆ ತಮ್ಮ ಕರ್ತವ್ಯ ಮುಗಿಯಿತು ಎಂದು ತಿಳಿದುಕೊಂಡರೆ ಅದು ತಪ್ಪು. ಪಾಲಕರು ತಮ್ಮ ಮಕ್ಕಳು ಎಷ್ಟರಮಟ್ಟಿಗೆ ವಿದ್ಯಾಭ್ಯಾಸ ಮಾಡುತ್ತಾರೆ ಉಪಾಧ್ಯಾಯರು ಕೊಟ್ಟಂಥ ಪಾಠಗಳನ್ನು ಕಲಿಯುತ್ತಾರೆಯೋ ಇಲ್ಲವೇ ಎನ್ನುವುದನ್ನು ಮನೆಯಲ್ಲಿ ನೋಡಬೇಕು.

ಇನ್ನೊಂದು ಕಾರಣ, ಸಿಲಬಸ್ ಇವರ ಬಗ್ಗೆ ನಾನು ಎರಡು ಮಾತುಗಳನ್ನು ಹೇಳುತ್ತೇನೆ. ಮಕ್ಕಳ ಪಠ್ಯಪುಸ್ತಕದಲ್ಲಿ ಕೆಮಿಸ್ಟ್ರಿ, ಫಿಸಿಕ್ಸ್ ಎಂದು ಇಟ್ಟಿರುತ್ತಾರೆ. ಇದರ ಬಗ್ಗೆ ಶಿಕ್ಷಕರಿಗೆ ಪಾಠ ಹೇಳಲಿಕ್ಕೆ ಸಾಧ್ಯವಿಲ್ಲ ಸಾಮಾನ್ಯವಾಗಿ ಪ್ರೈಮರಿ ಸ್ಕೂಲ್ ಉಪಾಧ್ಯಾಯರುಗಳು ಮೆಟ್ರಿಕ್ ತನಕ ಅಭ್ಯಾಸ ಮಾಡಿರುತ್ತಾರೆ. ಇವರು ಎಷ್ಟರಮಟ್ಟಿಗೆ ಫಿಸಿಕ್ಸ್ ಕೆಮಿಸ್ಟ್ರಿ ಮಕ್ಕಳಿಗೆ ಹೇಳುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ನಾವೆಲ್ಲರೂ ವಿಚಾರ ಮಾಡಬೇಕಾಗುತ್ತದೆ. ಗಣಿತ ಸೋಶಿಯಲ್ ಸ್ಟಡೀಸ್, ಮತ್ತು ಸಾಮಾಜಿಕ ಅಭ್ಯಾಸ ಇವುಗಳ ಬಗ್ಗೆ ಈವತ್ತು ನಾವು ಏನು ಪುಸ್ತಕಗಳಲ್ಲಿ ಪಾಠಗಳನ್ನು ಅಳವಡಿಸಿದ್ದೇವೆ ಅವುಗಳನ್ನು ಅಭ್ಯಾಸ ಮಾಡತಕ್ಕಂಥ ಮಕ್ಕಳು ಎಷ್ಟರಮಟ್ಟಿಗೆ ವಿದ್ಯೆಯನ್ನು ಕಲಿತುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ತಿಳಿದುಕೊಂಡು ಅಂಥ ಪಠ್ಯಪುಸ್ತಕಗಳನ್ನು ಹಚ್ಚಲಿಕ್ಕೆ ಪ್ರಯತ್ನ ಮಾಡಬೇಕು. ಇಂಗ್ಲೀಷ್‌ನಲ್ಲಿ ಷೇಕ್ಸ್‌ಪಿಯರ್ ಬರೆದಿರತಕ್ಕಂಥ ಪಠ್ಯಪುಸ್ತಕಗಳನ್ನು ಇಟ್ಟರೆ ಸಾಮಾನ್ಯವಾಗಿ ಅದು ಶಿಕ್ಷಕರಿಗೆ ತಿಳಿದಿರುವುದಿಲ್ಲ. ಅಂಥ ಶಿಕ್ಷಕರು ವಿದ್ಯಾರ್ಥಿಗಳಿಗೆ ಏನನ್ನು ಕಲಿಸಿಕೊಡಲು ಸಾಧ್ಯ. ಆದ್ದರಿಂದ ಈ ಒಂದು ಮಟ್ಟದ ಪಠ್ಯಪುಸ್ತಕಗಳನ್ನು ಬದಲಾವಣೆ ಮಾಡಬೇಕೆಂದು ಕಳಕಳಿಯಿಂದ ಕೇಳಿ ಕೊಳ್ಳುತ್ತೇನೆ.

ಸಮಾಜದಲ್ಲಿ ಏರುಪೇರು ಇರುತ್ತವೆಂದು ಮಾನ್ಯ ಮಿತ್ರರಾದ ಶ್ರೀ ಕಾಗೋಡು ತಿಮ್ಮಪ್ಪನವರು ಮಾತನಾಡುತ್ತಾ, ಸ್ವಾತಂತ್ರ್ಯ ಬಂದು 30 ವರ್ಷಗಳಾದರೂ ಕೊನೆಯಪಕ್ಷ ವಿದ್ಯಾಭ್ಯಾಸ ಮಟ್ಟದಲ್ಲಿಯಾದರೂ ಸಮಾನತೆಯನ್ನು ತರುವುದಕ್ಕಾಗಲಿಲ್ಲವೆಂದು ಹೇಳಿದರು. ಕಿತ್ತೂರುರಾಣಿ ಚೆನ್ನಮ್ಮ ಮೆಮೋರಿಯಲ್, ಸೊಂಡೂರು ಪಾಠಶಾಲೆಗಳಲ್ಲಿ ರಾಜಮಹಾರಾಜರ ಮಕ್ಕಳಿಗೆ ಅವಕಾಶ ದೊರಕುತ್ತಿದೆಯೇ ಹೊರತು ಸಾಮಾನ್ಯಜನರ ಮಕ್ಕಳಿಗೆ ಇದು ಸಾಧ್ಯವಾಗುತ್ತಿಲ್ಲ ಎನ್ನುವ ಮಾತನ್ನೂ ಕೂಡ ಅವರು ಹೇಳಿದರು. ಸಮಾಜದಲ್ಲಿ ಎಲ್ಲಿಯತನಕ ಏರುಪೇರುಗಳು ಇರುತ್ತವೆಯೋ ಅಲ್ಲಿಯತನಕ ವಿದ್ಯಾಕ್ಷೇತ್ರದಲ್ಲಿಯೂ ಸಮಾನತೆಯನ್ನು ತರುವುದಕ್ಕಾಗುವದಿಲ್ಲ. ಇವತ್ತಿನದಿವಸ ಶಿಕ್ಷಕರು ಒಳ್ಳೆಯ ಶಿಕ್ಷಣವನ್ನು ಪ್ರಾರಂಭದಿಂದಲೇ ಕೊಡಬೇಕಾಗಿರುತದೆ. ಶಿಕ್ಷಣಕ್ಕಾಗಿ ಖರ್ಚು ಮಾಡುತ್ತಿರತಕ್ಕಂಥ ಹಣ ಸದುಪಯೋಗವಾಗಬೇಕಾಗಿರುತ್ತದೆ. ಹಳ್ಳಿಗಳಲ್ಲಿ ಇರತಕ್ಕಂಥ ಶಿಕ್ಷಕರ ಪರಿಸ್ಥಿತಿಯನ್ನು ನೋಡಿದರೆ ಎಷ್ಟೋಜನ ಶಿಕ್ಷಕರಿಗೆ ಉಳಿಯಲಿಕ್ಕೆ ಮನೆಗಳಿಲ್ಲ. ಒಳ್ಳೆಯ ವೇತನ ಇರುವುದಿಲ್ಲ. ಹೀಗಿರಬೇಕಾದರೆ ಅವರು ಯಾವ ರೀತಿ ಸಮಾಧಾನಕರವಾಗಿ ಶಿಕ್ಷಣ ಕೊಡುವುದಕ್ಕೆ ಸಾಧ್ಯವೆಂಬುದನ್ನು ಊಹಿಸಬೇಕು. ಆದ್ದರಿಂದ ಇವತ್ತು ಯೂನಿವರ್ಸಿಟಿ ಎಜುಕೇಷನಲ್ ಶಿಕ್ಷಕರಿಗೂ ಯಾವರೀತಿ ಸಂಬಳವನ್ನು ಕೊಡುತ್ತಿದಾರೆ ಆದೇ ರೀತಿ ಸಂಬಳವನ್ನು ಪ್ರೈಮರಿ ಶಾಲೆಗಳ ಶಿಕ್ಷಕರಿಗೂ ಸಮಾಧಾನಕರವಾಗುವಂಥ ಸಂಬಳವನ್ನು ಕೊಡಬೇಕೆಂದು ನಾನು ವೈಯುಕ್ತಿಕವಾಗಿ ಹೇಳುತ್ತಿದ್ದೇನೆ. ಏತಕ್ಕೆಂದರೆ ಈವತ್ತಿನ ಪರಿಸ್ಥಿತಿಯಲ್ಲಿ ನೆರೆಹೊರೆಯವರು ಸಿಲ್ಕ್ ಸೀರೆಯನ್ನು ಉಟ್ಟುಕೊಂಡು ಓಡಾಡುತ್ತಿದ್ದರೆ ತನ್ನ ಹೆಂಡತಿಗೂ ಅಂತದೇ ಒಂದು ಸೀರೆಯನ್ನು ತಂದುಕೊಡಲು ಶಕ್ತಿರುವುದಿಲ್ಲ ಆರ್ಥಿಕ ದೃಷ್ಟಿಯಿಂದ ಈ ಒಂದು ಪರಿಸ್ಥಿತಿಯಲ್ಲಿರಬೇಕಾದರೆ ಅವರಿಗೆ ಒಂದು ಆಕರ್ಷಕವಾದ ಸಂಬಳವನ್ನು ಕೊಡಬೇಕು. ಅಮೇರಿಕದಲ್ಲಿ ಒಂದು ಪೀರಿಯಡಿಗೆ ಕೊಡತಕ್ಕಂಥ ಸಂಬಳ ನಮ್ಮ ದೇಶದಲ್ಲಿ ಕೊಡುತ್ತಿಲ್ಲ. ಈವತ್ತು ನಮ್ಮ ದೇಶದಲ್ಲಿ 2–3 ತಿಂಗಳಲ್ಲ ಎರಡು ವರ್ಷಗಳಾದರೂ ಪಾಠಶಾಲೆಗಳಲ್ಲಿ ಶಿಕ್ಷಕರ ಇರುವುದಿಲ್ಲ. ಸರ್ಕಾರವನ್ನು ವಿನಂತಿಮಾಡಿಕೊಳ್ಳುವುದೇನೆಂದರೆ ಈ ಶಿಕ್ಷಕರ ಕೊರತೆಯನ್ನು ನೀಗಲು ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಇದೇ ವಿಷಯವನ್ನು ನಾವು ನಾಲ್ಕು ವರ್ಷಗಳಿಂದಲೂ ಹೇಳುತ್ತಲೇ ಬಂದಿರುತ್ತೇವೆ.

ಶ್ರೀ ವಿ. ಎಂ. ಘಾಡಿ.—ಇನ್ನು ಕ್ಯಾರೆಕ್ಟರ್ ವಿಚಾರದಲ್ಲಿ ಅಂದರೆ ನೀತಿಯ ವಿಚಾರದಲ್ಲಿ ಹೇಳುವುದಾದರೆ ಭ್ರಷ್ಟಾಚಾರ ಸ್ವಜನಪಕ್ಷಪಾತ ಇವು ಪ್ರಾಥಮಿಕ ಶಿಕ್ಷಣ ಹಂತದಲ್ಲಿಯೇ ಹೋಗುವಂಥ ಶಿಕ್ಷಣವನ್ನು ಅಳವಡಿಸಬೇಕು. ಪ್ರಾಥಮಿಕ ಶಾಲೆಗಳಲ್ಲಿ ಹೈಸ್ಕೂಲ್‌ಗಳಲ್ಲಿ ಮಕ್ಕಳ ಗುಣಮಟ್ಟವನ್ನು ಉತ್ತಮಗೊಳಿಸಲು ಮಾರಲ್ ಎಜುಕೇಷನ್ ಬಗ್ಗೆ ಬೋಧನೆಯನ್ನು ಮಾಡಬೇಕು. ಇವತ್ತಿನದಿವಸ ಎಷ್ಟರಮಟ್ಟಿಗೆ ಮಾರಲ್ ಎಜುಕೇಷನ್‌ನ್ನು ಸದುಪಯೋಗಮಾಡಿಕೊಂಡಿರುತ್ತಾರೆಂದು ನಮ್ಮ ಅಧಿಕಾರಗಳನ್ನು ಕೇಳುತ್ತಿದ್ದೇನೆ. ಮಾರಲ್ ಎಜುಕೇಷನ್ ಬಗ್ಗೆ ಪಠ್ಯಪುಸ್ತಕಗಳನ್ನು ಏನಾದರೂ ಬರೆದಿರುತಾರೆಯೋ ಎಂದು ಕೇಳಿದರೆ ರಾಮಾಯಣ, ಮಹಾಭಾರತವನ್ನು

ಹೇಳಿರಿ ಎಂದು ಹೇಳುತ್ತಾರೆ. ಮಕ್ಕಳ ನೀತಿ ಸುಧಾರಿಸಬೇಕಾದರೆ ಇದು ಬಹಳ ಮುಖ್ಯ ರಿಸಲ್ಟ್ ಬಗ್ಗೆ ಮಹತ್ವ ಕೊಡಬಾರದು. ಮಕ್ಕಳು ಉತ್ತಮವಾದ ಗುಣವನ್ನು ಪ್ರಾಥಮಿಕ ಶಿಕ್ಷಣದ ಹಂತದಲ್ಲಿಯೇ ಬೆಳೆಸಿಕೊಂಡರೆ ನಾಳೆ ಉತ್ತಮವಾದ ಪ್ರಜೆಯಾಗಬಹುದು. ಉನ್ನತ ಅಧಿಕಾರಿಯಾಗಬಹುದು, ವ್ಯಾಪಾರಸ್ಥರಾಗಬಹುದು ಒಕ್ಕಲುತನದ ಕ್ಷೇತ್ರದಲ್ಲಿ ಬರಬಹುದು, ಮಕ್ಕಳಿಗೆ ಉತ್ತಮವಾದ ಗುಣಮಟ್ಟವನ್ನು ಬೆಳೆಸಿದರೆ ಉತ್ತಮವಾದ ಕ್ಯಾರೆಕ್ಟರನ್ನು ಬಿಲ್ಡಪ್ ಮಾಡಿದರೆ ದೇಶವನ್ನು ಬೆಳಗಲಿಕ್ಕೆ ಸಾಧ್ಯವಿರುತ್ತದೆ ಅಧಿಕಾರಿಗಳು ಈರೀತಿಯಾದ ಶಿಕ್ಷಣವನ್ನು ತರಲಿಕ್ಕೆ ಪ್ರಯತ್ನಪಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಕೊನೆಯದಾಗಿ ಅಡ್ಮಿನಿಸ್ಟ್ರೇಷನ್ ಬಗ್ಗೆ ಹೇಳುವುದಾದರೆ ಎಲ್ಲರನ್ನು ಕೆಟ್ಟವರು ಎಂದು ಹೇಳಲಿಕ್ಕೆ ಹೋಗುವುದಿಲ್ಲ. ಎ.ಇ.ಓ.ರವರು ಶಿಕ್ಷಣದ ಕಡೆಗೆ ಲಕ್ಷ್ಯವನ್ನು ಕೊಡುತ್ತಿಲ್ಲ. ಈ ಕಾರಣದಿಂದ ಅಡ್ಮಿನಿಸ್ಟ್ರೇಷನ್‌ನ್ನು ಬಂದ್ ಮಾಡಿದರೆ ಒಳ್ಳೆಯದೆಂದು ಹೇಳಬೇಕಾಗುತ್ತದೆ. ಡಿ.ಡಿ.ಪಿ.ಐ.ರವರು ಎಜ್ಯುಕೇಶನ್ ಆಫೀಸರ್‌ಗಳವರು ಶಿಕ್ಷಣ ಸಂಸ್ಥೆಗಳಿಗೆ ಭೇಟಿಕೊಟ್ಟು ಅಲ್ಲಿಯ ನ್ಯೂನತೆಗಳನ್ನು ಸರಿಪಡಿಸುವುದಕ್ಕೆ ವಿಸಿಟ್ ಕೊಡಬೇಕು. ಈ ಸಂಸ್ಥೆಗಳನ್ನು ಒಂದು ವ್ಯಾಪಾರ ಕೇಂದ್ರವನ್ನಾಗಿ ಮಾಡಿಕೊಂಡು ನಡೆಸಬಾರದು. ಇದರ ಬಗ್ಗೆ ಕಂಪ್ಲೇಂಟ್ಸ್ ಬೇಕಾದಷ್ಟು ಕೊಟ್ಟರೂ ಕೂಡ ಯಾವವಿಧವಾದ ಕಾರ್ಯಕ್ರಮವನ್ನು ತೆಗೆದುಕೊಂಡಿರುವುದು ಕಂಡುಬರಲಿಲ್ಲ. ಹೋದಕಡೆ ಉತ್ಕೃಷ್ಟವಾದ ಭೋಜನ ಬಿದ್ದರೆ ಸಾಕು ಅಷ್ಟರಲ್ಲಿಯೇ ತೃಪ್ತರಾಗುತ್ತಾರೆ. ಆದ್ದರಿಂದ ಅಧಿಕಾರಿಗಳಲ್ಲಿ ನಮ್ರವಾಗಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಮೆಚ್ಚುಗೆಗೆ ಕೆಲಸ ಮಾಡಬಾರದು, ಎಲ್ಲಿ ನ್ಯೂನತೆಗಳು ಕಂಡುಬರುತ್ತದೆ, ಅಲ್ಲಿ ನ್ಯೂನತೆಯನ್ನು ಸರಿಪಡಿಸುವುದಕ್ಕೆ ಶ್ರಮಿಸಬೇಕೆಂದು ಹೇಳಬಯಸುತ್ತೇನೆ.

ಎರಡನೆಯದಾಗಿ ವಾಲ್ಯುವೇಷನ್ ಬಗ್ಗೆ ಹೇಳವುದಾದರೆ ಪರೀಕ್ಷೆಗಳಲ್ಲಿ ಏನು ಕಂಡುಬರುತ್ತಿದೆ ಎಂದರೆ ಕನ್ನಡ ಶಾಲೆಗಳಲ್ಲಿ ಪರೀಕ್ಷೆಗಳೆಂದು ನಡೆಸುತ್ತಾರೆ. ಬ್ಲಾಕ್ ಬೋರ್ಡ್‌ನಲ್ಲಿ ಏನೋ ಬರೆದಿರುತ್ತಾರೆ ಅದನ್ನು ಕಾಪಿಮಾಡಬೇಕಿರುತ್ತದೆ. ಯಾವ ಮಕ್ಕಳು ಅದನ್ನು ಸರಿಯಾಗಿ ಕಾಫಿ ಮಾಡುತ್ತಾರೆ ಅವರು ಪಾಸ್ ಆಗುತ್ತಾರೆ. ಯಾರು ಸರಿಯಾಗಿ ಬರೆಯುವುದಿಲ್ಲವೋ ಅವರು ಫೇಲ್ ಆದಂತೆ. ಈರೀತಿಯಾದ ಶಿಕ್ಷಣ ಇಂದು ಕೊಡುತ್ತಿರುವುದಾಗಿರುತ್ತದೆ ನಾನು 1967ನೇ ಇಸವಿಯಲ್ಲಿ ಒಂದು ಪಾಠಶಾಲೆಯಲ್ಲಿ ಹೆಡ್‌ಮಾಸ್ತರಾಗಿ ಕೆಲಸ ಮಾಡುತ್ತಿದ್ದೆ. ನನ್ನ ಹೈಸ್ಕೂಲಿಗೆ ಎಕ್ಸಾಮಿನೇಷನ್ ಸೆಂಟರ್ ಬಂದಾಗ ನಾನೇ ಎಕ್ಸಾಮಿನರ್ ಆಗಿ ಪರೀಕ್ಷೆ ನಡೆಸಿದೆ. ಕನ್ನಡದಲ್ಲಿ 60 ಜನ ಮಕ್ಕಳು ಪರೀಕ್ಷೆಗೆ ಕುಳಿತಿದ್ದವರಲ್ಲಿ ಕೇವಲ 5 ಜನ ಮಕ್ಕಳು ಮಾತ್ರ ಪಾಸಾದರು. ಬೇರೆಯವರು ಪರೀಕ್ಷೆ ನಡೆಸುತ್ತಿದ್ದಾಗ ಅದೇ ಕನ್ನಡದಲ್ಲಿ 100ಕ್ಕೆ 90 ಜನ ಪಾಸಾಗುತ್ತಿದ್ದರು. ಅಂಥದೇ ಎಸ್ ಎಸ್ ಎಲ್.ಸಿ. ಪರೀಕ್ಷೆಯಲ್ಲಿ ವಿಷಯ ಇಂಗ್ಲೀಷ್ ಗ್ರಾಮರ್‌ನ್ನು ತಪಾಸಣೆ ಮಾಡುತ್ತಿದ್ದಾಗ ಒಬ್ಬ ಕುರುಬನಿದ್ದನು ಎಂದು ಇಂಗ್ಲೀಷ್‌ನಲ್ಲಿ ಬರೆಯಬೇಕಾಗಿತ್ತು. ಅದಕ್ಕೆ ಒಬ್ಬ ವಿದ್ಯಾರ್ಥಿಯು OBBA KURUBA NIDDANU ಎಂದು ಪೂರ್ಣವಾಗಿ ಇಂಗ್ಲೀಷ್‌ನಲ್ಲೇ ಬರೆದಿದ್ದನು, ಇದಕ್ಕೆ ಏನು ಗುಣವನ್ನು ಕೊಡಬೇಕು ? ದೇಶದ ಹಿತದೃಷ್ಟಿಯಿಂದ ಲಾಂಗ್‌ವೇಜ್ ಎಂದು ಏನು ಇದೆ ಅದು ಕನ್ನಡವೇ ಆಗಲಿ, ಮರಾಠಿಯೇ ಆಗಲಿ ಭಾಷಾವ್ಯಾಸಂಗದ ಗುಣಮಟ್ಟವನ್ನು ಪಾಲಿಸಬೇಕು. ಕ್ವಾಂಟಿಟಿಯ ಕಡೆ ನೋಡುವ ಬದಲು ಕ್ವಾಲಿಟಿಯ ಕಡೆಗೆ ಹೆಚ್ಚಿನ ಮಹತ್ವವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಸೂಚಿಸಬಯಸುತ್ತೇನೆ.

ಇನ್ನು ಹಳ್ಳಿಗಳಲ್ಲಿ ಬರುವಂಥ ವಿದ್ಯಾರ್ಥಿಗಳು ಮೆಡಿಕಲ್ ಕಾಲೇಜ್‌ನಲ್ಲಿ, ಇಂಜಿನೀಯರಿಂಗ್ ಕಾಲೇಜ್‌ನಲ್ಲಿ ಅಡ್ಮಿಷನ್‌ಗಳನ್ನು ದೊರಕಿಸಿಕೊಳ್ಳುವುದು ಬಹಳ ಕಷ್ಟ. ಅಲ್ಲಿ ಪರ್ಸೆಂಟೇಜ್ ಎಂದು ಗೊತ್ತುಮಾಡಿರುತ್ತಾರೆ. ಆದ್ದರಿಂದ ಹಳ್ಳಿಯ ವಾತಾವರಣವನ್ನು ಗಮನಿಸಿಕೊಂಡು ಅದಕ್ಕೆ ಅನುಗುಣವಾಗಿ ಅಡ್ಮಿಷನ್ ದೊರಕಿಸಿಕೊಡಬೇಕು. 10 ಪರ್ಸೆಂಟ್‌ನಿಂದ 20 ಪರ್ಸೆಂಟ್ ವರೆಗಾದರೂ ಇವರಿಗೆ ಕಾದಿರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯವೇನೆಂದರೆ ಈ ವರ್ಷ ಹಾಲಿಡೇ ಪಾಲಿಸಿಯನ್ನು ತಾವು ಬದಲಾವಣೆ ಮಾಡಿದ್ದೀರಿ. ಮೇ 28ನೇ ತಾರೀಖು, ಜೂನ್ 30ನೇ ತಾರೀಖು, ಜುಲೈ 1ರಿಂದ 22ನೇ ತಾರೀಖು, ಅಕ್ಟೋಬರ್ 17ನೇ ತಾರೀಖಿನಿಂದ 22ನೇ ತಾರೀಖಿನವರೆಗೆ ರಜಾದಿನಗಳೆಂದು ಇದೆ. ಆದರೆ

ನಾನು ಹೇಳುತ್ತೇನೆ ಈ ಮಲೆನಾಡಿನಲ್ಲಿ ಜುಲೈ 1ನೇ ತಾರೀಖಿನಿಂದ 22ನೇ ತಾರೀಖಿನವರೆಗೆ ಮಳೆ ಬಹಳವಾಗಿ ಬೀಳುತ್ತದೆ. ಆಗ ರಜೆ ಕೊಡುವುದರಿಂದ ಏನೂ ಉಪಯೋಗವಾಗುವುದಿಲ್ಲ. ನಮಗೆ ಯಾವಾಗ ರಜೆ ಬೇಕಾಗುತ್ತದೆ ಎಂದರೆ ಅಕ್ಟೋಬರ್ ಮತ್ತು ನವೆಂಬರ್ ತಿಂಗಳಿನಲ್ಲಿ, ಹಾರ್ವೆಸ್ಟ್ ಟೈಮ್‌ನಲ್ಲಿ ಬಹಳ ಕೆಲಸಗಳಿರುವುದರಿಂದ ಪ್ರೈಮರಿ ಮತ್ತು ಹೈಸ್ಕೂಲ್ ಮಕ್ಕಳು ಬಹಳಷ್ಟು ಸಂಖ್ಯೆಯಲ್ಲಿ ಅಬ್ಸೆಂಟ್ ಇರುತ್ತಾರೆ. ಈ ದೃಷ್ಟಿಯಿಂದ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಈ ಜುಲೈ 1 ರಿಂದ 22ನೇ ತಾರೀಖಿನವರೆಗೆ ಮತ್ತು ಡಿಸೆಂಬರ್ 22 ರಿಂದ ಜನವರಿ 1ನೇ ತಾರೀಖಿನವರೆಗೆ ಈ ಎರಡು ಅವಧಿಯಲ್ಲಿ 30 ದಿವಸಗಳ ರಜ ಏನಿದೆ ಈ ರಜವನ್ನು ಅಕ್ಟೋಬರ್ ಮತ್ತು ನವೆಂಬರ್ ತಿಂಗಳಿನಲ್ಲಿ ಕೊಡಬೇಕೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಬಗ್ಗೆ ಮಾನ್ಯ ಮಂತ್ರಿಯಾವರಿಗೆ ಒಂದು ರೆಪ್ರೆಸೆಂಟೇಷನ್ ಕೊಟ್ಟಿದ್ದೇನೆ. ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೂ ರೆಪ್ರೆಸೆಂಟೇಷನ್ ಕೊಟ್ಟಿದೇನೆ. ಇದು ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗತಕ್ಕಂಥ ವಿಷಯ ಎಂದು ಅವರು ಹೇಳತ್ತಿದ್ದಾರೆ. ಅಕ್ಟೋಬರ್ ಮತ್ತು ನವೆಂಬರ್ ತಿಂಗಳಿನಲ್ಲಿ ನಮಗೆ ರಜೆಯ ಅವಶ್ಯಕತೆ ಇರುವುದರಿಂದ, ಈ ಕೂಡಲೇ ತೀರ್ಮಾನವನ್ನು ತೆಗೆದುಕೊಂಡು ಆ ಹಾಲಿಡೆಯನ್ನು ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಂಡು ಇಷ್ಟನ್ನು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

† ಶ್ರೀ ಬಿ. ವಿ. ಕಕ್ಕಿಲಾಯ (ಬಂಟ್ವಾಳ).—ಸನ್ಮಾನ್ಯ ಅಧ್ಯಕ್ಷರೇ, ಈ ವಿದ್ಯಾ ಇಲಾಖೆಯ ಬೇಡಿಕೆಗಳ ಬಗ್ಗೆ ಮಾತನಾಡುತ್ತಾ, ಇವತ್ತು ಮಾನ್ಯ ಸಚಿವರು ಇಲ್ಲಿ ಇಲ್ಲದಿದ್ದಾಗ ಏನೊಂದು ಪ್ರಶ್ನೆ ಬಂದಿದೆ ಆ ಪ್ರಶ್ನೆಯ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಅಪೇಕ್ಷೆಪಡುತ್ತೇನೆ. ನಮ್ಮ ಕರ್ನಾಟಕರಾಜ್ಯದ ಮಂಗಳೂರಿನಲ್ಲಿರುವ ಪಾಲಿಟೆಕ್ನಿಕ್‌ನಲ್ಲಿ ಬಹಳಷ್ಟು ಅವ್ಯವಹಾರಗಳು ನಡೆಯುತ್ತಿರುವುದು ಮಾನ್ಯಸಚಿವರ ಗಮನಕ್ಕೆ ಬಂದಿರಬಹುದು ಎಂದು ನಾನು ಭಾವಿಸುತ್ತೇನೆ. ಇತ್ತೀಚೆಗೆ ನಡೆದ ಒಂದು ವಿಚಾರವನ್ನು ಮಾತ್ರ ಇಲ್ಲಿ ಪ್ರಸ್ತಾಪಮಾಡುತ್ತೇನೆ. ಉಳಿದ ವಿಚಾರಗಳ ಬಗ್ಗೆ ಮಾನ್ಯಸಚಿವರ ಗಮನಕ್ಕೆ ಬರದೇ ಇದ್ದರೆ, ಖಾಸಗಿಯಾಗಿ ಅವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಈಗ ವಿದ್ಯಾರ್ಥಿಗಳನ್ನು ಈ ಪಾಲಿಟೆಕ್ನಿಕ್‌ಗೆ ತೆಗೆದುಕೊಳ್ಳುತ್ತಾರೆ. ಈ ವಿದ್ಯಾರ್ಥಿಗಳ ಪ್ರವೇಶ (ಅಡ್ಮಿಷನ್) ಮಾಡಿಕೊಳ್ಳುವುದಕ್ಕೆ ಅಲ್ಲಿರತಕ್ಕಂಥ ಅಧಿಕಾರಿಗಳ ಒಂದು ಸಮಿತಿಯನ್ನು ತಾವು ನೇಮಕ ಮಾಡಿದ್ದೀರಿ. ಐ.ಟಿ.ಐ.ನಲ್ಲಿ ಮತ್ತು ಇತರ ಸಂಸ್ಥೆಗಳಲ್ಲಿರುವ ಹಾಗೆ ಈ ವಿದ್ಯಾರ್ಥಿಗಳಲ್ಲಿ ಯಾರನ್ನು ತೆಗೆದುಕೊಳ್ಳಬೇಕು, ಯಾರನ್ನು ಬಿಡಬೇಕು ಎಂಬ ಬಗ್ಗೆ ಪರಿಶೀಲನೆ ಮಾಡುವುದಕ್ಕೆ ಅಧಿಕಾರೇತರರನ್ನು ಒಳಗೊಂಡಂತ ಒಂದು ಸಮಿತಿ ಇಲ್ಲ. ಐ.ಟಿ.ಐ.ನಲ್ಲಿ ಈ ತರಹ ಇದೆ, ಪಾಲಿಟೆಕ್ನಿಕ್‌ನಲ್ಲಿ ಇಲ್ಲ. ಈ ವರ್ಷ ಏನಾಗಿದೆ ಎಂದರೆ ಅನೇಕ ಮಂದಿ ಪಿ.ಯು.ಸಿ. ವಿದ್ಯಾರ್ಥಿಗಳು ಈ ಪಾಲಿಟೆಕ್ನಿಕ್‌ಗೆ ಅರ್ಜಿಗಳನ್ನು ಹಾಕಿಕೊಂಡಿದ್ದಾರೆ. ಈ ಪೈಕಿ 50 ಜನರ ಅರ್ಜಿಗಳನ್ನು ವಿನಾಕಾರಣವಾಗಿ ಅಲ್ಲಿ ಪ್ರವೇಶ ಮಾಡಿಕೊಳ್ಳತಕ್ಕಂಥ ಅಧಿಕಾರಿಗಳು ತಿರಸ್ಕಾರ ಮಾಡಿದ್ದಾರೆ. ಈ ಬಗ್ಗೆ ಒಂದೆರಡು ಉದಾಹರಣೆಗಳನ್ನು ನಾನು ತಮಗೆ ಕೊಡುತ್ತೇನೆ. ಅವರ ಆರ್ಡರ್ ಆಫ್ ಮೆರಿಟ್‌ನ ಪ್ರಕಾರ ಇಂಟರ್‌ವ್ಯೂ ಕಾರ್ಡ್‌ನಲ್ಲಿ ಒಂದನೇ ನಂಬರ್ ಇದ್ದಂತ ವಿದ್ಯಾರ್ಥಿ ಸುಮಾರು 88 ಪರ್ಸೆಂಟ್ ಮಾರ್ಕ್ಸ್ ಪಡೆದುಕೊಂಡಿದ್ದರೂ ಅವನು ಇಂಟರ್‌ವ್ಯೂಗೆ ಬರುವಾಗ ಶಾಲೆಯಿಂದ ಡೊಮಿಸಿಲ್ ಸರ್ಟಿಫಿಕೇಟನ್ನು ತರಲಿಲ್ಲ ಎಂಬ ಒಂದೇ ಕಾರಣದಿಂದ ಅವನ ಅರ್ಜಿಯನ್ನು ತಿರಸ್ಕಾರ ಮಾಡಿದ್ದಾರೆ. ಮತ್ತೆ ಇಂಟರ್‌ವ್ಯೂ ಕಾರ್ಡ್‌ನಲ್ಲಿ 5ನೇ ನಂಬರ್ ಮತ್ತು 11ನೇ ನಂಬರ್ ಇದ್ದಂಥ ವಿದ್ಯಾರ್ಥಿಗಳ ಅರ್ಜಿಗಳನ್ನೂ ತಿರಸ್ಕಾರ ಮಾಡಿದ್ದಾರೆ. ''5 ವರ್ಷಗಳಲ್ಲಿ ಯಾವ ಯಾವ ಶಾಲೆಯಲ್ಲಿ ಕಲಿಯುತ್ತಿದ್ದಿರಿ ಎಂಬುದು ಕ್ಯುಮುಲೇಟಿವ್ ರಿಕಾರ್ಡ್ ಮತ್ತು ಟ್ರಾನ್ಸ್‌ಫರ್ ಸರ್ಟಿಫಿಕೇಟ್‌ನಲ್ಲಿ ಕಾಣುತ್ತದೆ. ಆ ದಾಖಲೆ ಸಾಲದು. ಸಂಬಂಧಪಟ್ಟ ಶಾಲೆಯಿಂದ ಸರ್ಟಿಫಿಕೇಟ್ ತರಬೇಕು, ಇಲ್ಲದಿದ್ದರೆ ಕರ್ನಾಟಕದಲ್ಲಿ 5 ವರ್ಷಗಳಲ್ಲಿ ಯಾವಯಾವ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡಿದ್ದೀರಿ ಎಂಬ ಬಗ್ಗೆ ದಾಖಲೆ ಸಾಲುವುದಿಲ್ಲ'' ಎಂದು ಹೇಳಿ ಆ ವಿದ್ಯಾರ್ಥಿಗಳಿಗೆ ಪ್ರವೇಶ ಕೊಡದೇ ತಿರಸ್ಕಾರ ಮಾಡಿದ್ದಾರೆ. ಅವರಿಗೆ ಈ ವಿಚಾರ ತಿಳಿದಾಗ ಅವರು ಅರ್ಧ ಗಂಟೆಯೊಳಗೆ, ಒಂದು ಗಂಟೆಯೊಳಗೆ, ಅದೇ ದಿವಸ ಶಾಲೆಗೆ ಹೋಗಿ ಸರ್ಟಿಫಿಕೇಟ್ ತಂದು

ಕೊಟ್ಟಿದ್ದರೂ ಸಹ ಆ ವಿದ್ಯಾರ್ಥಿಗಳಿಗೆ ಪ್ರವೇಶ ಕೊಟ್ಟಿಲ್ಲ. 70,75,80,85 ಪರ್ಸೆಂಟ್ ಮಾರ್ಕ್ಸ್ ತೆಗೆದುಕೊಂಡಂತ ಮೆರಿಟ್ ಸ್ಟೂಡೆಂಟ್ಸನ್ನು ಹೊರಗಿಟ್ಟು ಕಡಿಮೆ ಮಾರ್ಕ್ಸ್ ತೆಗೆದುಕೊಂಡಂತಹ ವರನ್ನು ಸೇರಿಸಿಕೊಂಡು ಉದ್ದೇಶಪೂರ್ವಕವಾಗಿ ಅವರಿಗೆ ಆ ರೀತಿ ಮಾಡಿದ್ದಾರೆಂದು ನಮಗೆ ತಿಳಿದು ಬಂದಿದೆ. ಈ ವಿಚಾರ ನಮ್ಮ ಗಮನಕ್ಕೆ ಬಂದಾಗ ನಮ್ಮ ಮಂಗಳೂರಿನ ಶಾಸಕರು ಮತ್ತು ನಾನು ಅಲ್ಲಿನ ಪ್ರಿನ್ಸಿಪಾಲರ ಸಂಪರ್ಕ ಮಾಡಿ, ಅವರ ಜೊತೆಯಲ್ಲಿ ಈ ವಿಚಾರದಲ್ಲಿ ಮಾತನಾಡಿದ್ದೇವೆ ಆದರೆ ಅವರು ಯಾರ ಮಾತಿಗೂ ಮನ್ನಣೆಯನ್ನು ಕೊಡುತ್ತಾ ಇಲ್ಲ ಎಂಬುದು ನಮಗೆ ಬಹಳ ಬೇಗ ಅರ್ಥವಾಯಿತು. ನಾನು ಹೇಳುತ್ತೇನೆ ಈ ಇಂಜಿನಿಯರಿಂಗ್ ಕಾಲೇಜಿಗೆ ಹೋಗುವುದಕ್ಕೆ ಸಾಧ್ಯವಿಲ್ಲದೇ ಇರತಕ್ಕಂಥವರು ಈ ಪಾಲಿಟೆಕ್ನಿಕ್‌ಗೆ ಬರುತ್ತಾರೆ ಅವರ ಎಲ್ಲಾ ದಾಖಲೆಗಳನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಪರಿಶೀಲನೆ ಮಾಡಿ ಯಾರಿಗೆ ಅರ್ಹತೆ ಇದೆಯೋ ಅಂತಹವರನ್ನು ಅಲ್ಲಿ ಪ್ರವೇಶ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು. ಇನ್ನು ಮುಂದೆ ಈ ಪ್ರವೇಶದ ಬಗ್ಗೆ ಯಾವುದೇ ತರಹದ ಅವ್ಯವಹಾರ ನಡೆಯದ ಹಾಗೆ ಮುಂಜಾಗ್ರತೆಯ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಮಂತ್ರಿಯವರಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ ಇನ್ನು ಈ ವಿದ್ಯಾ ಇಲಾಖೆಯ ಬೇಡಿಕೆಗಳ ಬಗ್ಗೆ ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರಬೇಕೆಂದಿದ್ದೇನೆ.

ಶ್ರೀ ಎಸ್. ಎಂ. ಯಾಹ್ಯಾ – ಈ ಬಗ್ಗೆ ನಾನು ಒಂದು ಮಾತನ್ನು ಹೇಳುತ್ತೇನೆ. ಈ ಮಂಗಳೂರು ಪಾಲಿಟೆಕ್ನಿಕ್ ವಿಚಾರದಲ್ಲಿ ಮಾನ್ಯ ಕಕ್ಕಿಲಾಯರವರು ಮತ್ತು ಮಾನ್ಯ ಯು.ಟಿ. ಫರೀದ್‌ರವರು ನಿನ್ನೆ ಮಧ್ಯಾಹ್ನ 2–3 ಗಂಟೆಯಲ್ಲಿ ನನ್ನ ಹತ್ತಿರ ಬಂದು ವಿಷಯ ತಿಳಿಸಿದ್ದಾರೆ. ಈ ರೀತಿ ಕೆಲವು ಮಂದಿ ಮೆರಿಟ್ ಸ್ಟೂಡೆಂಟ್ಸ್‌ಗೆ ಸರ್ಕಾರ ಮಾಡಿರುವ ಗೈಡ್‌ಲೈನ್ಸ್ ಪ್ರಕಾರ ಪ್ರಿನ್ಸಿಪಾಲ್‌ರವರು ಅಡ್ಮಿಷನ್ಸ್ ಕೊಡದೇ ಬೇರೆಯವರಿಗೆ ಕೊಡುತ್ತಿದ್ದಾರೆ ಎಂದು ಅವರು ಹೇಳಿದ್ದಾರೆ. ಅವರು ಹಾಗೆ ಹೇಳಿದತಕ್ಷಣ ಈ ಬಗ್ಗೆ ಮಂಗಳೂರಿನ ಪ್ರಿನ್ಸಿಪಾಲರನ್ನು ಕಾಂಟ್ಯಾಕ್ಟ್ ಮಾಡಬೇಕೆಂದೂ, ಅಲ್ಲಿರುವ ಎಲ್ಲಾ ರಿಕಾರ್ಡ್‌ಗಳನ್ನು ಇಲ್ಲಿಗೆ ಬರುವಂತೆ ಮಾಡಬೇಕೆಂದೂ ಪ್ರಿನ್ಸಿಪಾಲರು ಸರ್ಕಾರದ ಗೈಡ್‌ಲೈನ್ಸ್ ಪ್ರಕಾರ ಹೋಗಿದ್ದಾರೆಯೋ ಇಲ್ಲವೇ ಎಂಬುದನ್ನು ವಿಚಾರ ಮಾಡಬೇಕೆಂದು ಹೇಳಿ ನಮ್ಮ ಅಧಿಕಾರಿಗಳಿಗೆ ನಾನು ಆರ್ಡರ್ ಮಾಡಿದ್ದೇನೆ ಆ ರಿಕಾರ್ಡ್‌ಗಳು ಬೆಂಗಳೂರಿಗೆ ಬರುತ್ತವೆ ಮಾನ್ಯ ಸದಸ್ಯರು ಇನ್ನೊಂದು ವಿಷಯ ಹೇಳಿದ್ದಾರೆ ಡೊಮಿಸಿಲ್ ಸರ್ಟಿಫಿಕೇಟ್ ತರಲಿಲ್ಲ ಎಂಬ ಕಾರಣಕ್ಕಾಗಿ ಮತ್ತು ಕ್ಯುಮುಲೇಟಿವ್ ರಿಕಾರ್ಡ್‌ನಲ್ಲಿ ಅವರು ಹಿಂದೆ ಕಲಿತಿರುವ ಶಾಲೆಗಳ ದಾಖಲೆ ಸಾಲುವುದಿಲ್ಲ ಎಂಬ ಕಾರಣಕ್ಕಾಗಿ ಆ ವಿದ್ಯಾರ್ಥಿಗಳಿಗೆ ಅಡ್ಮಿಷನ್ ಕೊಟ್ಟಿಲ್ಲ ಎಂಬುದಾಗಿ ಹೇಳಿದ್ದಾರೆ. ಈ ಬಗ್ಗೆ ನಾನು ವಿಚಾರ ಮಾಡುತ್ತೇನೆ. ಕಾನೂನು ಪ್ರಕಾರ ಕರ್ನಾಟಕದಲ್ಲಿ 5 ವರ್ಷದವರೆಗೆ ಓದಿದವರಿಗೆ ಮೆರಿಟ್ ಪ್ರಕಾರ ಸೀಟ್ ಕೊಡಬೇಕು ಎಂದು ಇದೆ. ಆದ್ದರಿಂದ ಈ ವಿಚಾರದಲ್ಲಿ ಎಲ್ಲಾ ರಿಕಾರ್ಡ್‌ಗಳನ್ನು ನೋಡಿ ಅವರಿಗೆ ಅನ್ಯಾಯವಾಗದ ಹಾಗೆ ಮಾಡುತ್ತೇನೆಂದು ಹೇಳುತ್ತೇನೆ

Business of the House-Announced

MADAM SPEAKER.—Hon'ble Member Sri Kakkilaya may continue his speech tomorrow.

MADAM SPEAKER.—The Business Advisory Committee at its meeting held on 28th June 1977 decided that the House may adjourn on the 8th July 1977 and reassemble on the 15th July 1977. The same demands will continue tomorrow also.

The House now stands adjourned to meet tomorrow at 1 p.m.

The House adjourned at Six of the Clock, to meet again at One 'O' Clock on friday the 1st July 1977.

WD 7125—GPB